06 October 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಂಸಾರಕ್ಕೂ , ವ್ಯಾಪಾರಕ್ಕೂ ಒಂದೇ ವ್ಯತ್ಯಾಸ! ಸಂಸಾರ ಜೀವನಕ್ಕಾದರೆ,ವ್ಯಾಪಾರ ಜೀವನೋಪಾಯಕ್ಕಾಗಿ!

-ಸ್ನೇಹಾ ಆನಂದ್



ಗದ್ದೆಗಿಳಿದು ನಾಟಿ ಮಾಡಿದ ವಿದ್ಯಾರ್ಥಿಗಳು । ಶಾಲೆಯ ವಿಶಿಷ್ಟ ಕೃಷಿ ಅನುಭವ ಪುಟ ಸಂ. 2

ಪುಟ ಸಂ. 3 ದಸರೆಗೆ ಐದು ದಿನ ಬಾಕಿ ರಚನೆಯಾಗದ ಅಧಿಕಾರೇತರ ಸಮಿತಿ





ಆದಿವಾಸಿಗಳ ಗೃಹಭಾಗ್ಯ ವರದಿಗೆ ಸಿಎಂ ಕಚೇರಿ ಸ್ಪಂದನೆ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 288 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಆಕ್ಷೇಪಿಸಿದ ಕೂಡಲೇ ಡಿಲೀಟ್ ಮಾಡಲ್ಲ: ಸಿಇಸಿ

## ಫಾರ್ಮ್–7 ಸಲ್ಲಿಸಿದರೆ ನೋಟಿಸ್ ನಂತರ ತೀರ್ಮಾನ: ಅನ್ಬುಕುಮಾರ್

**ಬೆಂಗಳೂರು:** ರಾಜ್ಯದಲ್ಲಿ ಇದುವರೆಗೆ 91,278 ಫಾರ್ಮ್–7 ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ ಇನ್ನೂ ಯಾವುದೇ ಮತದಾರರ ಹೆಸರನ್ನು ಡಿಲೀಟ್ ಮಾಡಿಲ್ಲ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಯಾವುದೇ ಮತದಾರರ ಹೆಸರನ್ನು ಡಿಲೀಟ್ ಮಾಡುವಂತೆ ಅಕ್ಷೇಪಣೆ ಸಲ್ಲಿಕೆ ಮಾಡಿದರೆ, ತಕ್ಷಣ ಡಿಲೀಟ್ ಮಾಡುವುದಿಲ್ಲ. ಮೊದಲು ಸಂಬಂಧಪಟ್ಟ ಮತದಾರರಿಗೆ ನೋಟಿಸ್ ನೀಡಲಾಗುತ್ತದೆ. ನಂತರ ಸೂಕ್ತ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮತದಾರರ ಹೆಸರುಗಳನ್ನು ಅಕ್ರಮವಾಗಿ ತೆಗೆದುಹಾಕಲು ನಮೂನೆ 7ನ್ನು ದುರುಪಯೋಗ ಮಾಡಲಾಗಿದೆ ಎನ್ನುವ ಆರೋಪ ದಟ್ಟವಾಗಿ ಕೇಳಿಬಂದಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಗೊಂದಲಗಳಿಗೆ ತೆರೆ ಎಳೆಯಲು ಪ್ರಯತ್ನಿಸಿದೆ.

ರಾಜ್ಯದಲ್ಲಿ 43,82,313 ಜನರ ಪೈಕಿ 43,55,818 ಜನರಿಗೆ ನೋಟಿಸ್ ನೀಡಲಾಗಿದೆ. ಇನ್ನೂ 26,495 ನೋಟಿಸ್ ಬಾಕಿ ಇದೆ. 36,89,063 ನೋಟಿಸ್ ವಿಚಾರಣೆ ಪುಟ 2ಕ್ಕೆ



### ಅ.22ರ ನಂತರ ಸ್ಪೆಷಲ್ ಡ್ರೈವ್

ಫಾರ್ಮ್–6ಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಕೇಂದ್ರ ಚುನಾವಣಾ ಆಯೋಗ ಇನ್ನೊಂದು ಸ್ಪೆಷಲ್ ಡ್ರೈವ್ ಮಾಡೋಕೆ ತಿಳಿಸಿದೆ. ಈ ಬಗ್ಗೆ ರೂಪುರೇಷೆ ತಯಾರು ಮಾಡುತ್ತೇವೆ. ಅ.22ರ ನಂತರ ಸ್ಪೆಷಲ್ ಡ್ರೈವ್ ಮೂಲಕ ಇನ್ನೂ ಯಾರಾದರೂ ಅರ್ಹ ಮತದಾರರು ಬಿಟ್ಟು ಹೋಗಿದ್ದರೆ ಅವರನ್ನು ಪುಟ 2ಕ್ಕೆ

### ಮತದಾರರ ಸಂಖ್ಯೆ ಹೆಚ್ಚಳ

ಎಸ್ಐಆರ್ ಪ್ರಕ್ರಿಯೆಯಿಂದ ಮತದಾರರ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದೆ. ರಾಜ್ಯದಲ್ಲಿ ಒಟ್ಟು ಮತದಾರರ ಸಂಖ್ಯೆ 4,50,29,916ಕ್ಕೆ ಏರಿಕೆಯಾಗಿದೆ. ಈ ಪೈಕಿ 2,23,41,784 ಪುರುಷರು, 2,26,85,269 ಮಹಿಳಾ ಮತದಾರರು ಇದ್ದಾರೆ ಎಂದು ಚುನಾವಣಾ ಆಯುಕ್ತರು ಮಾಹಿತಿ ನೀಡಿದ್ದಾರೆ.

## ಅಭಿಮನ್ಯುವಿಗೆ ಅದ್ದೂರಿ ಸ್ವಾಗತ



**ಮೈಸೂರು:** ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಕ್ಯಾಪ್ಟನ್ ಎಂದೇ ಖ್ಯಾತಿಗಳಿಸಿರುವ ಅಭಿಮನ್ಯು ಮೈಸೂರಿಗೆ ಆಗಮಿಸಿದೆ. ಮೈಸೂರು ಅರಮನೆಗೆ ಸೋಮವಾರ ಅಭಿಮನ್ಯುವನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಮೈಸೂರು ದಸರಾ ಮಹೋತ್ಸವಕ್ಕೆ ಈ ಬಾರಿ ಅಭಿಮನ್ಯುವನ್ನು ನಿಶಾನೆ ಆನೆಯಾಗಿ ಆಯ್ಕೆ ಮಾಡಲಾಗಿದೆ. ಜಂಬೂ ಸವಾರಿ ಸಂದರ್ಭದಲ್ಲಿ ನಿಶಾನೆ ಆನೆಗೆ ವಿಶೇಷ ಸ್ಥಾನವಿದೆ. ಆನೆಗಳ ತಂಡದ ಮೆರವಣಿಗೆಗೆ ಅದು ಮುನ್ನಡೆ ನೀಡುತ್ತದೆ.

ಸೋಮವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಅಭಿಮನ್ಯುವಿಗೆ ಅರಮನೆ ಜಯಮಾರ್ತಾಂಡ ದ್ವಾರದಲ್ಲಿ ಪೂಜೆ ಸಲ್ಲಿಸಿ ಸಾಂಪ್ರದಾಯಿಕ ಸ್ವಾಗತ ನೀಡಲಾಯಿತು. ಗಂಧದ ಗುಡಿ ಫೌಂಡೇಷನ್ ಮತ್ತು ಅಭಿಮನ್ಯು ಅಭಿಮಾನಿಗಳಿಂದ ಬೃಹತ್ ಮೋಸಂಬಿ ಹಾರ, 10 ಕೆಜಿ ತೂಕದ ಬೃಹತ್ ಮೈಸೂರು ಪೇಟ ತೊಡಿಸಿ ಸಂಭ್ರಮಿಸಲಾಯಿತು. ಅರಮನೆ ಮಂಡಳಿ ಆನೆಯನ್ನು ಫಲತಾಂಬೂಲ ನೀಡಿ ಬರಮಾಡಿಕೊಂಡಿತು.

ದಸರಾ ಜಂಬೂಸವಾರಿಗೂ ಮುನ್ನ ದಸರಾ ಆನೆಗಳ ತಂಡಕ್ಕೆ ಸಾಕಷ್ಟು ಪುಟ 2ಕ್ಕೆ



### ಅಭಿಮಾನಿಗಳ ಒತ್ತಡಕ್ಕೆ ಮಣಿದ ಜಿಲ್ಲಾಡಳಿತ!

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಜಂಬೂ ಸವಾರಿ ಮೆರವಣಿಗೆಯಲ್ಲಿ ಸತತ 6 ವರ್ಷ ಅಭಿಮನ್ಯು ಅಂಬಾರಿ ಹೊತ್ತು ಹೆಜ್ಜೆ ಹಾಕಿದ್ದ ಕ್ಯಾಪ್ಟನ್ ಅಭಿಮನ್ಯು ಈ ಬಾರಿ ನಿಶಾನೆ ಆನೆ ಆಗಿದೆ.

ದಸರಾದಲ್ಲಿ ಅಭಿಮನ್ಯು ಇರಲೇಬೇಕೆಂಬ ಅಭಿಮಾನಿಗಳ ಆಸೆ ಈ ಮೂಲಕ ಈಡೇರಿದೆ. ಅಭಿಮನ್ಯುವನ್ನು ದಸರಾಗೆ ಆಹ್ವಾನಿಸಬೇಕೆಂದು ಅಭಿಮಾನಿಗಳಿಂದ ವಿಶೇಷ ಒತ್ತಾಯ ಕೇಳಿಬಂದಿತ್ತು. ಕ್ಯಾಪ್ಟನ್ ಅಭಿಮನ್ಯು ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸಿ, ಬಳಿಕ ದಸರಾ ಕಾರ್ಯಕ್ರಮಗಳಿಂದ ವಿದಾಯ ಪಡೆಯಬೇಕು ಎಂಬುದು ಅಭಿಮಾನಿಗಳ ಪುಟ 2ಕ್ಕೆ

## ರತ್ನಖಚಿತ ಸಿಂಹಾಸನ ಜೋಡಣೆ

**ಮೈಸೂರು:** ರಾಜವಂಶಸ್ಥರು ನವರಾತ್ರಿ ಸಂದರ್ಭ ಖಾಸಗಿ ದರ್ಬಾರ್ ನಡೆಸುವ ಹಿನ್ನೆಲೆಯಲ್ಲಿ ವಿಶ್ವವಿಖ್ಯಾತ ಅಂಬಾವಿಲಾಸ ಅರಮನೆಯಲ್ಲಿ ಸಾಂಪ್ರದಾಯಿಕ ಚಟುವಟಿಕೆಗಳು ಗರಿಗೆದರಿವೆ. ಅರಮನೆ ಆವರಣದಲ್ಲಿ ಸೋಮವಾರ ರಾಜಮನೆತನದ ಸಮ್ಮುಖದಲ್ಲಿ ಶಾಸ್ತ್ರೋಕ್ತವಾಗಿ ಸಿಂಹಾಸನ ಜೋಡಣಾ ಕಾರ್ಯಕ್ರಮ ನಡೆಯಿತು.

ಸಿಂಹಾಸನ ಜೋಡಣಾ ಕಾರ್ಯಕ್ರಮ ಹಿನ್ನೆಲೆ ಸೋಮವಾರ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಅರಮನೆ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿತ್ತು.

ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸೋಮವಾರ ಬೆಳಗ್ಗೆಯಿಂದಲೇ ಪೂಜಾ ಕೈಂಕರ್ಯ ಆರಂಭವಾಯಿತು. ಬೆಳಗ್ಗೆ 7.30ಕ್ಕೆ ನವಗ್ರಹ ಹೋಮ ಮಾಡಿ ಸ್ಥಳ ಶುದ್ಧೀಕರಣ ನಡೆಸಲಾಯಿತು. ನಂತರ



10.20ಕ್ಕೆ ಸಲ್ಲುವ ಶುಭ ಗಳಿಗೆಯಲ್ಲಿ ದರ್ಬಾರ್ ಹಾಲ್ ನಲ್ಲಿ ರತ್ನಖಚಿತ ಸಿಂಹಾಸನ ಹಾಗೂ ಕನ್ನಡಿ ತೊಟ್ಟಿಯಲ್ಲಿ ಬೆಳ್ಳಿ ಭದ್ರಾಸನ ಜೋಡಣಾ ಕಾರ್ಯ ಆರಂಭವಾಯಿತು. ಇದೇ ವೇಳೆ ಪಟ್ಟದ ಆನೆ, ಪಟ್ಟದ ಹಸು, ಪಟ್ಟದ ಕುದುರೆಯನ್ನು ಗೋಶಾಲೆಗೆ ಮಂಗಳವಾದ್ಯದೊಂದಿಗೆ ಕರೆತಂದು ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಯಿತು. ಮಧ್ಯಾಹ್ನ 12 ಗಂಟೆಯೊಳಗೆ ಸಿಂಹಾಸನ ಹಾಗೂ ಭದ್ರಾಸನ ಜೋಡಣೆ ಪೂರ್ಣಗೊಳಿಸಿದ ಬಳಿಕ ಸಿಂಹಾಸನದ ಮೇಲೆ ಪರದೆ ಬಿಡಲಾಯಿತು.

### ನವರಾತ್ರಿಯಲ್ಲಷ್ಟೇ ವೀಕ್ಷಣೆ

ನವರಾತ್ರಿ ಸಂದರ್ಭದಲ್ಲಿ ಮಾತ್ರ ರತ್ನಖಚಿತ ಸಿಂಹಾಸನ ನೋಡಲು ಸಿಗುತ್ತದೆ. ನವರಾತ್ರಿಯ 9 ದಿನಗಳು ಮಹಾರಾಜರು ಖಾಸಗಿಯಾಗಿ ದರ್ಬಾರ್ ನಡೆಸುವ ಈ ಸಿಂಹಾಸನ ಒಟ್ಟು 13 ಬಿಡಿ ಭಾಗಗಳಿಂದ ಕೂಡಿದೆ. ಅರಮನೆಯ ನೆಲಮಾಳಿಗೆ ರಹಸ್ಯ ಕೊಠಡಿಯಲ್ಲಿ ಬಿಗಿ ಭದ್ರತೆಯಲ್ಲಿ ಇರುವ ಈ ರತ್ನಖಚಿತ ಸಿಂಹಾಸನ ರಾಜಮನೆತನಕ್ಕೆ ಸೇರಿದೆ. ನವರಾತ್ರಿ ಸಂದರ್ಭದಲ್ಲಿ ಈ ಸಿಂಹಾಸನಕ್ಕೆ ಪೂಜೆ ಸಲ್ಲಿಸಿ ಬಳಿಕ ಯದುವೀರ್ ಒಡೆಯರ್ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಅ.11ರ ದಸರಾ ಮೊದಲ ದಿನ ಬೆಳಗ್ಗೆ 6 ರಿಂದ 7.12ರ ಶುಭ ಮುಹೂರ್ತದಲ್ಲಿ ಸಿಂಹಾಸನಕ್ಕೆ ಸಿಂಹ ಜೋಡಣೆಯಾಗುತ್ತದೆ. ಬೆಳಗ್ಗೆ 8.35 ರಿಂದ 9.05 ಕಂಕಣ ಧಾರಣೆ ಬಳಿಕ 11.45 ರಿಂದ 12.05 ರೊಳಗೆ ಮಹಾರಾಜ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಸಿಂಹಾಸನಾರೋಹಣ ನೆರವೇರುವುದು. ಆಯುಧಪೂಜೆ ಬಳಿಕ ಸಿಂಹ ವಿಸರ್ಜನೆಯಾಗಲಿದೆ. ವಿಜಯದಶಮಿಯ ನಂತರ ನವೆಂಬರ್ 19ರಂದು ಸಿಂಹಾಸನವನ್ನು ದರ್ಬಾರ್ ಹಾಲ್ನಿಂದ ವಿಸರ್ಜನೆ ಮಾಡಿ ಪುನಃ ಸ್ಟ್ರಾಂಗ್ ರೂಂನಲ್ಲಿಟ್ಟು ಸೀಲ್ ಮಾಡಲಾಗುವುದು.

## ಸಿಎಂ ಆಗಲು ವರುಣ ಜನರ ಆಶೀರ್ವಾದವೇ ಕಾರಣ: ಸಿದ್ದು

**ಮೈಸೂರು:** ವರುಣ ಕ್ಷೇತ್ರದಲ್ಲಿ ಮೂರು ಬಾರಿ ಗೆದ್ದಿದ್ದೇನೆ. ಎರಡು ಬಾರಿ ಮುಖ್ಯಮಂತ್ರಿ ಆಗಿದ್ದೇನೆ. ನಾನು ಎರಡು ಬಾರಿ ಸಿಎಂ ಹಾಗೂ ಎರಡು ಬಾರಿ ವಿರೋಧ ಪಕ್ಷದ ನಾಯಕನಾಗಲು ವರುಣ ಕ್ಷೇತ್ರದ ಜನರ ಆಶೀರ್ವಾದವೇ ಕಾರಣ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಭಾವುಕರಾದರು.

ವರುಣ ಕ್ಷೇತ್ರದ ದಾಸನೂರಿನಲ್ಲಿ ಸೋಮವಾರ ಅಭಿವೃದ್ಧಿ ಕಾಮಗಾರಿ ಉದ್ಘಾಟಿಸಿ ಮಾತನಾಡಿದ ಅವರು, ತಮ್ಮ ರಾಜಕೀಯ ಬದುಕಿನಲ್ಲಿ ವರುಣ ಕ್ಷೇತ್ರದ ಜನರ ಕೊಡುಗೆಯನ್ನ ಸ್ಮರಿಸಿದರು. 2028ರ ಚುನಾವಣೆಗೆ ಸ್ಪರ್ಧಿಸುವಂತೆ ಜನರು ಈ ವೇಳೆ ಒತ್ತಾಯ ಮಾಡಿದರು.

ನಾನು ವರುಣ ಕ್ಷೇತ್ರವನ್ನು ತಾನು ಯಾವತ್ತೂ ಮರೆಯುವುದಿಲ್ಲ. ಶಾಸಕನಾಗಿರಲಿ, ಇಲ್ಲದಿರಲಿ ವರುಣ ಕ್ಷೇತ್ರದ ಸೇವೆಯನ್ನು ಮುಂದುವರಿಸುತ್ತೇನೆ. ತಾನು ರಾಜ್ಯದಲ್ಲಿ ಎಂಟು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದೇನೆ. ರಾಹುಲ್ ಗಾಂಧಿ ಯಾವಾಗ ಹೇಳುತ್ತಾರೋ ಅಂದು ಮುಖ್ಯಮಂತ್ರಿ ಸ್ಥಾನ ಬಿಡುತ್ತೇನೆ ಎಂದು 4–5 ಬಾರಿ ಹೇಳಿದ್ದೆ. ಅದರಂತೆ ನಡೆದುಕೊಂಡಿದ್ದೇನೆ ಎಂದು ಸಿದ್ದರಾಮಯ್ಯ ಹೇಳಿದರು.



40 ವರ್ಷಗಳ ರಾಜಕೀಯ ಜೀವನದಲ್ಲಿ ಸೋಲು–ಗೆಲುವು ಎರಡನ್ನೂ ನೋಡಿದ್ದೇನೆ. ಎಂಟು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ನುಡಿದಂತೆ ನಡೆದಿದ್ದೇನೆ ಎಂಬ ತೃಪ್ತಿ ಮತ್ತು ಸಂತೋಷ ನನಗಿದೆ ಎಂದರು.

ಈ ವೇಳೆ 2028ರ ವಿಧಾನಸಭಾ ಚುನಾವಣೆಯಲ್ಲೂ ಸ್ಪರ್ಧಿಸುವಂತೆ ವರುಣ ಕ್ಷೇತ್ರದ ಜನರು ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು. ಆದರೆ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದೆ ಸಿದ್ದರಾಮಯ್ಯ ಭಾಷಣ ಮುಗಿಸಿದರು.

## ಬಿಜೆಪಿ–ಜೆಡಿಎಸ್ ದೋಸ್ತಿ ಫಿಕ್ಸ್

### ಎಲ್ಲಾ ಚುನಾವಣೆಗಳನ್ನು ಒಗ್ಗಟ್ಟಾಗಿ ಎದುರಿಸುತ್ತೇವೆ: ಯಡಿಯೂರಪ್ಪ

**ಕಲಬುರಗಿ:** ರಾಜ್ಯದಲ್ಲಿ ಮುಂಬರುವ ಎಲ್ಲಾ ಚುನಾವಣೆಗಳನ್ನು ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪಡೆ ಒಗ್ಗಟ್ಟಾಗಿ ಎದುರಿಸಲಿವೆ. 2028ರ ವಿಧಾನಸಭೆ ಚುನಾವಣೆಯಲ್ಲಿ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಪಕ್ಷದ ಅಭ್ಯರ್ಥಿ ಶಶಿಲ್ ನಮೋಶಿ ನಾಮಪತ್ರ ಸಲ್ಲಿಕೆ ಹಿನ್ನಲೆಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

ಎಚ್.ಡಿ.ಕುಮಾರಸ್ವಾಮಿ ಮೈತ್ರಿ ಸರ್ಕಾರದ ಮುಂದಿನ ಸಿಎಂ ಅಭ್ಯರ್ಥಿ ಎನ್ನುವ ವಿಚಾರ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಅವರು, ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಅಧಿಕಾರಕ್ಕೆ ಬರಲಿ. ನಮ್ಮ ಗಮನವೆಲ್ಲ ಸದ್ಯಕ್ಕೆ ಆ ಕಡೆಯಿದೆ. ವಿಧಾನಸಭೆ ಚುನಾವಣೆ ಬಳಿಕ ಯಾರು ಸಿಎಂ ಆಗಬೇಕು ಎಂಬ ಬಗ್ಗೆ ತೀರ್ಮಾನವಾಗುತ್ತದೆ. ನಮ್ಮ ಬಳಿ ಬಿಜೆಪಿ– ಜೆಡಿಎಸ್ ಎರಡು ಒಂದೇ ಎಂಬ ಅಭಿಪ್ರಾಯವಿದೆ. ಸಿಎಂ ಯಾರಾಗಬೇಕು ಎನ್ನುವುದು ಆನಂತರ ತೀರ್ಮಾನವಾಗುತ್ತದೆ ಎಂದು ಹೇಳಿದರು.



2028ರಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸಿಎಂ ಡಿಕೆಶಿ ಭ್ರಮೆಯಲ್ಲಿದ್ದಾರೆ. ಅವರ ಭ್ರಮೆಗೆ ನಮ್ಮ ಅಭ್ಯಂತರವೇನೂ ಇಲ್ಲ. ಹಣ ಹೆಂಡ ಬಲದ ಮೇಲೆ ಚುನಾವಣೆಯಲ್ಲಿ ಗೆಲ್ಲುವ ಕಾಲ ಹೋಗಿದೆ. ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಈ ಸರ್ಕಾರಕ್ಕೆ ಪಾಠ ಕಲಿಸಬೇಕು ಅಂದರೆ ಈ ಚುನಾವಣೆಯಲ್ಲಿ ಸೋಲಿಸಬೇಕಿದೆ ಎಂದು ಹೇಳಿದರು.

## ಸುಪ್ರೀಂ'ನಲ್ಲಿ ನೈಸ್‌ಗೆ ಹಿನ್ನಡೆ

**ನವದೆಹಲಿ:** ರಾಜ್ಯದಲ್ಲಿ ನೈಸ್ ರಸ್ತೆ ಅಕ್ರಮ ವಿಚಾರ ರಾಜಕೀಯವಾಗಿ ಭಾರೀ ಸಂಚಲನ ಮೂಡಿಸಿರುವ ಬೆನ್ನಲ್ಲೇ, ಸುಪ್ರೀಂ ಕೋರ್ಟ್ನಲ್ಲಿ ನೈಸ್ ಸಂಸ್ಥೆಗೆ ಹಿನ್ನಡೆ ಆಗಿದೆ.

ನೈಸ್ ಯೋಜನೆ ವಿರುದ್ಧ ಸ್ವತಂತ್ರ ತನಿಖೆ ಹಾಗೂ ಫೋರೆನ್ಸಿಕ್ ಆಡಿಟ್‌ಗೆ ಆದೇಶಿಸಿದ್ದ ಕರ್ನಾಟಕ ಹೈಕೋರ್ಟ್ ತೀರ್ಪಿಗೆ ಮಧ್ಯಂತರ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ನೈಸ್ ಸಂಸ್ಥೆ ಸುಪ್ರೀಂ ಕೋರ್ಟ್ಗೆ ಮೇಲ್ಮನವಿ ಸಲ್ಲಿಸಿತ್ತು. ನ್ಯಾಯಮೂರ್ತಿ ಸಂಜಯ್ ಕುಮಾರ್ ನೇತೃತ್ವದ ದ್ವಿಸದಸ್ಯ ಪೀಠ ಈ ಅರ್ಜಿಯ ವಿಚಾರಣೆ ನಡೆಸಿತು.

ವಾದ–ಪ್ರತಿವಾದಗಳನ್ನು ಆಲಿಸಿದ ನ್ಯಾಯಪೀಠ, ಸಮಗ್ರ ವಿಚಾರಣೆ ಪುಟ 2ಕ್ಕೆ

## ಬೀದಿಬದಿ ವ್ಯಾಪಾರಿಗಳ ತೆರವು ಬೇಡ: ಎಚ್ಎಚ್ಆರ್ಸಿ

**ನವದೆಹಲಿ:** ಹಬ್ಬದ ವೇಳೆ ಬೀದಿಬದಿ ವ್ಯಾಪಾರಿಗಳ ತೆರವುಗೊಳಿಸಬೇಡಿ ಎಂದು ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸೂಚನೆ ನೀಡಿದೆ.

ನವರಾತ್ರಿ, ದೀಪಾವಳಿ ಸಂದರ್ಭ ವ್ಯಾಪಾರಿಗಳನ್ನು ಅನಗತ್ಯವಾಗಿ ತೆರವುಗೊಳಿಸಬೇಡಿ. ಬೀದಿ ವ್ಯಾಪಾರಿಗಳು, ಸಣ್ಣ ವ್ಯಾಪಾರಿಗಳ ಹಕ್ಕು ರಕ್ಷಣೆ ಮಾಡಿ ಎಂದು ನಿರ್ದೇಶನ ನೀಡಿದೆ. ಎನ್ಎಚ್ಆರ್ಸಿ ನಿರ್ದೇಶನಗಳನ್ನು ಜಿಲ್ಲಾಧಿಕಾರಿ, ಪುರಸಭೆ, ಪೊಲೀಸ್ ಅಧಿಕಾರಿಗಳಿಗೆ ತಲುಪಿಸಬೇಕು. ಈ ವಿಚಾರವಾಗಿ ಅಕ್ಟೋಬರ್ 18ರೊಳಗೆ ಮಾಹಿತಿ ನೀಡಲು ಸೂಚನೆ ನೀಡಿದೆ.



## ಬರ ಪರಿಶೀಲನೆ ತಂಡ ಭೇಟಿ

**ಚಾಮರಾಜನಗರ:** ಐಎಎಸ್ ಅಧಿಕಾರಿ ಡಾ.ಸುಧಾಮ್ ಬಾಗ್ ನೇತೃತ್ವದ ಬರ ಅಧ್ಯಯನ ತಂಡ ಜಿಲ್ಲೆಗೆ ಸೋಮವಾರ ನೀಡಿ ಪರಿಶೀಲನೆ ನಡೆಸಿದೆ.

ಗುಂಡ್ಲುಪೇಟೆ ಕ್ಷೇತ್ರದಿಂದ ಬರ ಅಧ್ಯಯನ ಆರಂಭಿಸಲಾಯಿತು. ಕೆರೆಹಳ್ಳಿ ಗ್ರಾಮದಲ್ಲಿ ಒಣಗಿದ ಜೋಳದ ಬೆಳೆ ವೀಕ್ಷಣೆ ಮಾಡಿದರು. ಈ ವೇಳೆ ಬೆಳೆ ಸಾಲ ಮನ್ನಾ ಮಾಡುವಂತೆ ರೈತರು ಆಗ್ರಹಿಸಿದರು. ಆರು ತಿಂಗಳಿಂದ ಯಾವ ಬೆಳೆಯೂ ಸಿಕ್ಕಿಲ್ಲ. ದನಕರುಗಳಿಗೆ ಮೇವಿಲ್ಲ ಎಂದು ರೈತರ ಅಳಲು ತೋಡಿಕೊಂಡರು. ರಾಜ್ಯ ಸರ್ಕಾರ ಘೋಷಣೆ ಮಾಡಿರುವ 2,500 ರೂ.ಗೆ ಏನೂ ಬರಲ್ಲ. ಕೇಂದ್ರದಿಂದ ಎಕರೆಗೆ ಕನಿಷ್ಠ 50 ಸಾವಿರ ರೂಪಾಯಿ ಪರಿಹಾರ ನೀಡುವಂತೆ ಒತ್ತಾಯಿಸಿದರು.



## ಕ್ರೀಡಾಪಟುಗಳಿಗೆ ಶೇ.2 ಉದ್ಯೋಗ ಮೀಸಲಾತಿ

**ಬೆಂಗಳೂರು:** ರಾಜ್ಯದ ಕ್ರೀಡಾಪಟುಗಳಿಗೆ ಸರ್ಕಾರಿ ನೌಕರಿಯಲ್ಲಿ ಶೇ.2ರಷ್ಟು ಹಾಗೂ ಅರಣ್ಯ ಮತ್ತು ಪೊಲೀಸ್ ಇಲಾಖೆಗಳಲ್ಲಿ ಶೇ.3ರಷ್ಟು ಮೀಸಲಾತಿ ನೀಡುವ ಬಗ್ಗೆ ಸರ್ಕಾರ ಸೋಮವಾರ ಆದೇಶ ಪ್ರಕಟಿಸಿದೆ.



ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಪ್ರಯತ್ನದ ಫಲವಾಗಿ ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ರಾಜ್ಯ ಸಿವಿಲ್ ಹುದ್ದೆಗಳ ಸೇವೆಗಳಲ್ಲಿನ ನೇಮಕಾತಿಯಲ್ಲಿ ಶೇ.2ರಷ್ಟು ಮೀಸಲಾತಿ ನೀಡಲು ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ) ನೇಮಕಾತಿ (ತಿದ್ದುಪಡಿ) ನಿಯಮಗಳು, 2026ಕ್ಕೆ ಸಂಪುಟ ಸಭೆ ಅನುಮೋದನೆ ನೀಡಿತ್ತು. ಈಗ ಸರ್ಕಾರ ಮೀಸಲಾತಿ ಆದೇಶ ಪ್ರಕಟಿಸಿದೆ.

## ಅ.18ರಿಂದ ಕಾವೇರಿ ಆರತಿ



**ಮಂಡ್ಯ:** ಐತಿಹಾಸಿಕ ಕೆಆರ್‌ಎಸ್ ಜಲಾಶಯದ ಬಳಿ ಆಯೋಜಿಸಲು ಉದ್ದೇಶಿಸಲಾಗಿದ್ದ ಕಾವೇರಿ ಆರತಿ ಕಾರ್ಯಕ್ರಮ ಮುಂದೂಡಲಾಗಿದೆ. ಈಗ ಪರಿಷ್ಕೃತ ದಿನಾಂಕದಂತೆ ಅಕ್ಟೋಬರ್ 18ರಿಂದ 23ರವರೆಗೆ ಕೆಆರ್‌ಎಸ್ ಡ್ಯಾಂ ಬಳಿ ಕಾವೇರಿ ಆರತಿ ನಡೆಯಲಿದೆ.

ಈ ಹಿಂದೆ ಅ.11ರಿಂದ ಕಾವೇರಿ ಆರತಿ ಆರಂಭವಾಗಬೇಕಿತ್ತು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಂದು ಪೂರ್ವ ನಿಯೋಜಿತ ಕಾರ್ಯಕ್ರಮ ಇರುವುದರಿಂದ ದಿನಾಂಕವನ್ನು ಬದಲಾಯಿಸಲಾಗಿದೆ.

ಹಿಂದಿನ ಅವಧಿಯಲ್ಲಿ ಡಿಕೆಶಿ ಜಲಸಂಪನ್ಮೂಲ ಸಚಿವ ಆಗಿದ್ದಾಗ ಈ ಕಾರ್ಯಕ್ರಮವನ್ನು ಹುಟ್ಟುಹಾಕಿದ್ದರು. ಈ ವರ್ಷ ಮುಂಗಾರು ಕೊರತೆಯಿಂದ ಉತ್ತಮ ಮಳೆಯಾಗದಿದ್ದರೂ ಲಭ್ಯವಿರುವ ನೀರಿಗೆ ಅನುಗುಣವಾಗಿ ಕಾವೇರಿ ಆರತಿ ನೆರವೇರಿಸಲು ಜಿಲ್ಲಾಡಳಿತ ಹಾಗೂ ಕಾವೇರಿ ನೀರಾವರಿ ನಿಗಮ ಭರದ ಸಿದ್ಧತೆಗಳನ್ನು ನಡೆಸಿದೆ.

## ಸಿಇಸಿ ಜ್ಞಾನೇಶ್ ವಜಾಕ್ಕೆ ಸುಪ್ರೀಂಕೋರ್ಟ್ ನಿರಾಕರಣೆ

**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅಮಾನತಿಗೆ ಮಧ್ಯಂತರ ಆದೇಶ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

ಇತರ ಇಬ್ಬರು ಚುನಾವಣಾ ಆಯುಕ್ತರ ಅನುಮೋದನೆ ಇಲ್ಲದೆ ಮುಖ್ಯ ಆಯುಕ್ತರು ನಿರ್ಧಾರ ಕೈಗೊಂಡಿದ್ದಾರೆ ಎಂದು ಆರೋಪಿಸಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಕುರಿತು, ಒಂದು ವಾರದೊಳಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಹಿರಿಯ ವಕೀಲ ವಿಕಾಸ್ ಸಿಂಗ್ ಅವರ ವಾದಗಳನ್ನು ಪರಿಗಣಿಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ಪುಟ 2ಕ್ಕೆ



## ಮನ್‌ಮುಲ್ ಹಗರಣ: ಉಮ್ಮಡಹಳ್ಳಿ ಶಿವಪ್ಪ ಬಂಧನ

**ಮಂಡ್ಯ:** ಮಂಡ್ಯದ ಮನ್‌ಮುಲ್ ನಂದಿನಿ ಹಾಲಿನ ಪುಡಿ ಕಲಬೆರಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಕ್ಕೂಟದ ಮಾಜಿ ಅಧ್ಯಕ್ಷ ಉಮ್ಮಡಹಳ್ಳಿ ಶಿವಪ್ಪ ಅವರನ್ನು ಮದ್ದೂರು ಪೊಲೀಸರು ನಿನ್ನೆ ತಡರಾತ್ರಿ ಬಂಧಿಸಿದ್ದಾರೆ.

ಪ್ರಕರಣದಲ್ಲಿ ಶಿವಪ್ಪ ಪಾತ್ರವಿರುವುದು ಮೇಲ್ನೋಟಕ್ಕೆ ದೃಢಪಟ್ಟ ಹಿನ್ನೆಲೆಯಲ್ಲಿ ಪೊಲೀಸರು ಬಂಧಿಸಿದ್ದಾರೆ. ಅವರನ್ನು ಸೋಮವಾರ ಮದ್ದೂರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಪ್ರದೀಪ್ ಕುಮಾರ್ ಜಾದವ್, ನಿರ್ದೇಶಕರೊಬ್ಬರ ಜೊತೆ ಮಾತನಾಡಿದ್ದಾರೆ ಎನ್ನಲಾದ ಆಡಿಯೋದಲ್ಲಿ ಈ ಅಕ್ರಮ ದಂಧೆಯಲ್ಲಿ ಶಿವಪ್ಪ ಕೂಡ ಶಾಮೀಲಾಗಿದ್ದಾರೆ ಎಂದು ಆರೋಪ ಮಾಡಿದ್ದರು. ಈ ಸಾಕ್ಷ್ಯದ ಆಧಾರದ ಮೇಲೆ ಪೊಲೀಸರು ನ್ಯಾಯಾಂಗ ಬಂಧನದಲ್ಲಿದ್ದ ಜಾದವ್‌ನನ್ನು ಮತ್ತೆ ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆಗೆ ಒಳಪಡಿಸಿದ್ದರು.



ಬಳಿಕ ಜಾದವ್ ಮತ್ತು ಮಾಜಿ ಅಧ್ಯಕ್ಷ ಶಿವಪ್ಪ ಇಬ್ಬರನ್ನೂ ಮುಖಾಮುಖಿ ಕೂರಿಸಿ ವಿಚಾರಣೆ ನಡೆಸಲಾಯಿತು. ಈ ವೇಳೆ ಇಬ್ಬರ ನಡುವೆ ತೀವ್ರ ಮಾತಿನ ಚಕಮಕಿ ಕೂಡ ನಡೆದಿತ್ತು ಎನ್ನಲಾಗಿದೆ.

ಪ್ರಕರಣದಲ್ಲಿ ಈಗಾಗಲೇ ಪ್ರದೀಪ್ ಕುಮಾರ್ ಜಾದವ್ ಸೇರಿದಂತೆ ಐದು ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಮಾಜಿ ಅಧ್ಯಕ್ಷ ಶಿವಪ್ಪ ಅವರ ಬಂಧನದೊಂದಿಗೆ ಸೆರೆಯಾದವರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

# ಕವಿಗೋಷ್ಠಿ ಪ್ರಚಾರ ರಥಕ್ಕೆ ಚಾಲನೆ

ಮೈಸೂರು: ಮಾನಸಗಂಗೋತ್ರಿಯ ರಾಷ್ಟ್ರಕವಿ ಕವಿ ಕುವೆಂಪು ಪ್ರತಿಮೆ ಆವರಣದಲ್ಲಿ ದಸರಾ ಕವಿಗೋಷ್ಠಿ 2026ರ ಪ್ರಚಾರ ತೇರಿಗೆ ಸೋಮವಾರ ವಿಧ್ಯುಕ್ತ ವಾಗಿ ಚಾಲನೆ ನೀಡಲಾಯಿತು.

ಮೈಸೂರು ದಸರಾ ಕವಿ ಗೋಷ್ಠಿ ಉಪ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸರಾದ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ ಮತ್ತು ಡಾ.ಸಿ.ಪಿ. ಕೃಷ್ಣಕುಮಾರ್ ಚಾಲನೆ ನೀಡಿ, ದಸರಾ ಕವಿಗೋಷ್ಠಿ ಯಶಸ್ವಿಯಾಗಲೆಂದು ಶುಭ ಹಾರೈಸಿದರು.



**ಕನ್ನಡದ ತೇರು:**

ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಮಾತನಾಡಿ, ಕನ್ನಡದ ತೇರು ದಸರಾ ಕವಿಗೋಷ್ಠಿಯ ನೆಪದಲ್ಲಿ ಮೈಸೂರಿನದ್ಯಂತ ಸಂಚರಿಸಲಿದೆ. ತೇರು ರಥ ಅಷ್ಟೇ ಅಲ್ಲ. ಅದು ಮನೋರಥ. ಎಲ್ಲ ಕನ್ನಡಿಗರ ಮನದಲ್ಲಿ ಕನ್ನಡದ ರಥ ಸಂಚರಿಸಬೇಕು. ಆಗ ಕನ್ನಡ ಇನ್ನಷ್ಟು ಬೆಳೆಯುತ್ತದೆ. ಈಗ ಕನ್ನಡದ ಕೆಲಸ ಆಗಿದೆ. ಆಗಬೇಕಾದದ್ದು ಇದೆ. ಕನ್ನಡ ತೇರಿನ ಸಂಚಾರ ಅಭಿ ಮಾನವಾಗಿ ನಡೆಯಲಿ. ಸಿರಿಗನ್ನಡಂ ಗೆಲ್ಲಲಿ ಎಂದರು.

ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಡಾ.ಪಿ. ಶಿವರಾಜು ಮಾತನಾಡಿ, ದಸರಾ ನಮ್ಮ ಅಸ್ಮಿತೆ. ನಮ್ಮ ಕನ್ನಡ ಭಾಷೆ ಅಮೃತ. ಮೈಸೂರು ಸ್ವರ್ಗ. ಮೈಸೂರಿನ ವಾತಾ ವರಣವು ಕನ್ನಡ ಮನಸ್ಸುಗಳು ಅರಳಲಿಕ್ಕೆ ಸಾಧ್ಯವಾ ಗುತ್ತಿದೆ. ಮಹಾರಾಜರಿಂದ ಜನ ಸಾಮಾನ್ಯರು ಸಹೃದಯರು. ಈ ಬಾರಿಯ ಕವಿಗೋಷ್ಠಿಯಲ್ಲಿ ಬಹುರೂಪ ದಲ್ಲಿ ಆಯೋಜಿಸಲಾಗಿದೆ. ಜೆನ್‌ಜಿಗಳು ಯುವ ದಸರಾ ಎಂಜಾಯ್ ಮಾಡುವಂತೆ ಕವಿತೆಗಳನ್ನು ಅಸ್ವಾ ದಿಸಬೇಕು ಎಂದರು. ದಸರಾ ಕವಿಗೋಷ್ಠಿ ಕಾರ್ಯಾಧ್ಯಕ್ಷ ಪ್ರೊ.ಎಂ. ನಂಜಯ್ಯ ಹೊಂಗನೂರು, ಉಪ ವಿಶೇಷಾಧಿಕಾರಿ ಡಾ.ಎಂ.ದಾಸೇಗೌಡ, ಕಾರ್ಯದರ್ಶಿ ಆನಂದ, ಸಮನ್ವಯಾಽಕಾರಿ ಪ್ರೊ.ತ್ರಿವೇಣಿ, ಡಾ.ಉಮೇಶ್ ಬೇವಿನಹಳ್ಳಿ ಮುಂತಾದವರಿದ್ದರು.

# ಅದ್ದೂರಿ ಕಂಬಳ ಆಚರಣೆಗೆ ಆಗ್ರಹಿಸಿ ಪ್ರತಿಭಟನೆ

**ಮೈಸೂರು:** ದಸರಾ ಅಂಗವಾಗಿ ಮೊದಲ ಬಾರಿಗೆ ಆಯೋಜಿಸಿರುವ ಕಂಬಳ ಕ್ರೀಡೆಯನ್ನು ಯಾವುದೇ ವಿರೋಧಕ್ಕೆ ಮಣಿಯದೆ ಅದ್ದೂರಿಯಾಗಿ ನಡೆಸಬೇಕೆಂದು ಒತ್ತಾಯಿಸಿ ದಲಿತ ಮಹಾ ಸಭಾದಿಂದ ಚಿಕ್ಕ ಗಡಿಯಾರದ ಬಳಿ ಪ್ರತಿಭಟನೆ ನಡೆಸಲಾಯಿತು.



ದಲಿತ ಮಹಾಸಭಾ ನಗರಾಧ್ಯಕ್ಷ ಎಸ್. ರಾಜೇಶ್ ಮಾತನಾಡಿ, ಕಂಬಳ ಕೇವಲ ಒಂದು ಕ್ರೀಡೆಯಷ್ಟೇ ಅಲ್ಲದೆ, ಕೃಷಿ ಸಂಸ್ಕೃತಿ ಮತ್ತು ಪರಂಪರೆಯೊಂದಿಗೆ ಬೆಸೆದುಕೊಂಡಿರುವ ಸ್ವದೇಶಿ ಕ್ರೀಡೆ. ಪ್ರಸ್ತುತ ರಾಜ್ಯದಲ್ಲಿ 27 ಆಧುನಿಕ ಹಾಗೂ 7 ಪಾರಂಪರಿಕ ಕಂಬಳಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಉಚ್ಚ ನ್ಯಾಯಾಲಯವೂ ಸಹ ಕಂಬಳ ನಡೆಸಲು ಅನುಮತಿ ನೀಡಿದೆ. ದೇವಿಪ್ರಸಾದ್ ಶೆಟ್ಟಿ, ಶಾಸಕ ಅಶೋಕ್ ರೈ ಹಾಗೂ ಕಂಬಳ ಮಾಲೀಕರ ನಿರಂತರ ಹೋರಾಟದಿಂದಾಗಿ ಸುಪ್ರೀಂ ಕೋರ್ಟ್‌ನಲ್ಲಿ ಕಂಬಳಕ್ಕೆ ಕಾನೂನು ಜಯ ಸಿಕ್ಕಿದ್ದು, ಇಂದು ರಾಜ್ಯದೆಲ್ಲೆಡೆ ಪ್ರಸಿದ್ಧಿ ಪಡೆದಿದೆ. ಉಡುಪಿ, ಮಂಗಳೂರು, ಕಾಸರಗೋಡು ಹಾಗೂ ಬೆಂಗಳೂರಿನಲ್ಲಿ ಕಂಬಳಗಳು ಯಶಸ್ವಿಯಾಗಿ ನಡೆದಿವೆ. ಬೆಂಗಳೂರಿನಲ್ಲಿ ನಡೆದಾಗ ಯಾವುದೇ ಅನಾಹುತಗಳು ಸಂಭವಿಸಿಲ್ಲ. ಅದೇ ಮಾದರಿಯಲ್ಲಿ ಕಲಾ ನಗರಿ ಹಾಗೂ ಫ್ಯಾಷನ್ ನಗರಿಯಾದ ಮೈಸೂರಿನಲ್ಲೂ ಕಂಬಳಕ್ಕೆ ಆಧುನಿಕ ಸ್ಪರ್ಶ ನೀಡಿ ಆಯೋಜನೆ ಮಾಡಬೇಕು ಎಂದರು. ಕಂಬಳ ಆಯೋಜನೆಯಿಂದ ನೂರಾರು ಕುಟುಂಬಗಳು ಹಾಗೂ 160ಕ್ಕೂ ಹೆಚ್ಚು ಕಲಾಕಾರರ ಬಳಗಕ್ಕೆ ಆರ್ಥಿಕ ನೆರವು ಸಿಗಲಿದೆ. ಅಲ್ಲದೆ, ಕಂಬಳಕ್ಕೆ ಬಳಸುವ ನೀರನ್ನು ವ್ಯರ್ಥ ಮಾಡದೇ ಮರಳಿ ಗದ್ದೆ ಹಾಗೂ ಬೋರ್‌ವೇಲ್‌ಗಳಿಗೆ ಮರುಪೂರಣ (ರೀಚಾರ್ಜ್) ಮಾಡುವ ಕೆಲಸವನ್ನು ಕಂಬಳ ಸಮಿತಿ ಮಾಡುವುದರಿಂದ ಪರಿಸರಕ್ಕೆ ಯಾವುದೇ ಧಕ್ಕೆ ಉಂಟಾಗುವುದಿಲ್ಲ. ನಾಡಿನ ವೈಭವದ ಸಂಸ್ಕೃತಿಯನ್ನು ಎತ್ತಿಹಿಡಿಯುವ ಈ ಕ್ರೀಡೆಗೆ ಮೈಸೂರಿನ ಜನತೆ ಹಾಗೂ ಸುತ್ತಮುತ್ತಲಿನ ಸಾರ್ವಜನಿಕರು ಸಹ ಕಾರ ನೀಡಬೇಕೆಂದರು. ಸುನಿಲ್ ನಾರಾಯಣ, ಬಾಬು, ಸೈಯದ್ ಫಾರೂಕ್, ಬಿ.ಬಿ.ಕೇಶವ, ಕುಕ್ಕರಹಳ್ಳಿ ನಂಜುಂಡಸ್ವಾಮಿ, ಎಸ್.ಎ.ರಹೀಂ, ರಂಗಸ್ವಾಮಿ, ಸುನೀಲ್ ಬುದ್ಧ, ರಾಮು, ಜಾಫರ್, ರವಿನಾಯಕ್ ಭಾಗವಹಿಸಿದ್ದರು.

## ಮೊದಲ ಪುಟದಿಂದ

### ಅಭಿಮನ್ಯುವಿಗೆ ಅದ್ದೂರಿ ಸ್ವಾಗತ

ತರಬೇತಿ ಹಾಗೂ ಸಿದ್ಧತೆ ನೀಡಲಾಗುತ್ತದೆ. ಅರಮನೆ ಮತ್ತು ಸಾಂಪ್ರದಾಯಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಆನೆಗಳು ಹಾಗೂ ಉತ್ಸವಕ್ಕೆ ಆಗಮಿಸುವ ಜನಸಂದಣಿಯನ್ನು ಗಮನದಲ್ಲಿಟ್ಟುಕೊಂಡು ಸಿದ್ಧತೆ ಕೈಗೊಳ್ಳಲಾಗುತ್ತದೆ. ಮೈಸೂರು ದಸರಾ ಮಹೋತ್ಸವದೊಂದಿಗೆ ದೀರ್ಘಕಾಲದ ನಂಟು ಹೊಂದಿರುವ ಹಾಗೂ ಸಾರ್ವಜನಿಕರಿಂದ ಅಪಾರ ಮೆಚ್ಚುಗೆ ಪಡೆದಿರುವ ಅಭಿಮನ್ಯು ಅರಮನೆಗೆ ಮರಳುತ್ತಿರುವುದು ಮತ್ತು ದಸರಾ ಉತ್ಸವದಲ್ಲಿ ಭಾಗವಹಿಸುತ್ತಿರುವುದನ್ನು ದಸರಾ ಅಭಿಮಾನಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

### ಸಿಇಸಿ ಜ್ಞಾನೇಶ್ ವಜಾಕ್ಕೆ ಸುಪ್ರೀಂಕೋರ್ಟ್ ನಿರಾಕರಣೆ

ನ್ಯಾಯಮೂರ್ತಿಗಳಾದ ಜಾಯ್ಮಾಲ್ಯ ಬಾಗ್ಚಿ ಮತ್ತು ವಿ.ಮೋಹನ ಅವರನ್ನೊಳಗೊಂಡ ನ್ಯಾಯಪೀಠ ಈ ನೋಟಿಸ್‌ಗಳನ್ನು ಜಾರಿಗೊಳಿಸಿತು.

ಚುನಾವಣಾ ಆಯೋಗದ ನಿರ್ಧಾರಗಳು ಸರ್ವಾನುಮತದಿಂದ ಅಥವಾ ಬಹುಮತದ ಆಧಾರದ ಮೇಲೆ ಇರಬೇಕು ಎಂದು ಹೇಳಿದ ನ್ಯಾಯಪೀಠ, ಎಲ್ಲಾ ನಿರ್ಧಾರಗಳನ್ನು ಈ ರೀತಿಯಾಗಿ ಕೈಗೊಳ್ಳಲಾಗಿದೆ ಎಂದು ತಾವು ಭಾವಿಸುವುದಾಗಿ ತಿಳಿಸಿತು. ಜ್ಞಾನೇಶ್ ಕುಮಾರ್ ಅಮಾನತಿಗೆ ಮಧ್ಯಂತರ ಆದೇಶ ನೀಡಲು ನಿರಾಕರಿಸಿತು.

### ಅ.22ರ ನಂತರ ಸ್ಪೆಷಲ್ ಡ್ರೈವ್

ಸೇರಿಸುವ ಕೆಲಸ ಮಾಡುತ್ತೇವೆ. ಕರ್ನಾಟಕದ ಅರ್ಹ ಮತದಾರರ ಹೆಸರು ಕೈಬಿಟ್ಟು ಹೋಗಿದ್ದರೆ ಫಾರ್ಮ್ 6 ಅಪ್ಲೈ ಮಾಡಿ ಎಂದು ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ತಿಳಿಸಿದರು.

### ಒತ್ತಡಕ್ಕೆ ಮಣಿದ ಜಿಲ್ಲಾಡಳಿತ!

ಒತ್ತಾಯವಾಗಿತ್ತು. ಈಗ ಅಭಿಮಾನಿಗಳ ಆಸೆಯಂತೆ ಅಭಿಮನ್ಯು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದೆ. ಈ ಮೂಲಕ ದಸರಾ ವೀಕ್ಷಕರು ಹಾಗೂ ಅಭಿಮಾನಿಗಳಿಗೆ ಈ ಹಿರಿಯ ಆನೆಯನ್ನು ಮತ್ತೊಮ್ಮೆ ಅದ್ದೂರಿ ಉತ್ಸವದ ಭಾಗವಾಗಿ ಕಣ್ತುಂಬಿಕೊಳ್ಳುವ ಅವಕಾಶ ದೊರೆಯಲಿದೆ.

### ಡಿಲೀಟ್ ಮಾಡಲ್ಲ: ಸಿಇಸಿ

ಪೂರ್ಣಗೊಂಡಿದೆ. 6,66,755 ನೋಟಿಸ್ ವಿಚಾರಣೆ ಬಾಕಿಯಿದೆ. ಬಿಎಲ್‌ಓಗಳು ಮನೆಮನೆಗೆ ಹೋಗುತ್ತಿದ್ದಾರೆ. ಈ ತಿಂಗಳ 12ರ ಒಳಗೆ ವಿಚಾರಣೆ ಪೂರ್ಣಗೊಳಿಸಲಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ ಒಟ್ಟು 9,10,732– ಫಾರ್ಮ್ 6 ಬಂದಿದೆ. 91,278 ಫಾರ್ಮ್–7 ಅರ್ಜಿಗಳು ಸಲ್ಲಿಕೆಯಾಗಿವೆ. ಅ.27ರಂದು ಅಂತಿಮ ಕರಡು ಮತದಾರರ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು. ಇದುವರೆಗೆ ಸಲ್ಲಿಕೆಯಾಗಿವ ಫಾರ್ಮ್–7ರ ಪೈಕಿ ಎಷ್ಟರಲ್ಲಿ ನೈಜತೆ ಎಷ್ಟಿದೆ ಅನ್ನೋದನ್ನ ನಾವು ಇನ್ನೂ ಪ್ರತ್ಯೇಕಗೊಳಿಸಿಲ್ಲ. ಆದರೆ ಸ್ಥಳೀಯ ಇಆರ್‌ಓಗಳು ಕ್ರಮ ಕೈಗೊಳ್ಳುತ್ತಾರೆ. ಅ.27ರ ಬಳಿಕ ಅಂತಿಮ ಮತದಾರರ ಪಟ್ಟಿಯನ್ನು ನೋಂದಾಯಿತ ರಾಜಕೀಯ ಪಕ್ಷಗಳಿಗೆ ಪ್ರಿಂಟೆಂಡ್ ಹಾಗೂ ಸಾಫ್ಟ್ ಕಾಪಿ ಕಳಿಸುತ್ತೇವೆ ಎಂದು ಹೇಳಿದರು.

### ಸುಪ್ರೀಂ'ನಲ್ಲಿ ನೈಸ್‌ಗೆ ಹಿನ್ನಡೆ

ನಡೆಸದೆ ಯಾವುದೇ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿತು. ಮುಂದಿನ ವಿಚಾರಣೆಯನ್ನು ನವೆಂಬರ್ 2ಕ್ಕೆ ನಿಗದಿಪಡಿಸಿದೆ. ಹೈಕೋರ್ಟ್ ತನ್ನ ಆದೇಶದಲ್ಲಿ ನೈಸ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ರೈತರ ಭೂಮಿ ಮತ್ತು ತಲೆಮಾರುಗಳ ಜೀವನೋಪಾಯವನ್ನು ಕಸಿದುಕೊಂಡಿದ್ದನ್ನು ಹೊರತುಪಡಿಸಿದರೆ ಈ ಯೋಜನೆಯಿಂದ ಸಾರ್ವಜನಿಕರಿಗೆ ಯಾವುದೇ ಒಳ್ಳೆಯದಾಗಿಲ್ಲ ಎಂದು ತಿಳಿಸಿತ್ತು.

# 4.20 ಕೋಟಿ ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ

ಕೊಳ್ಳೇಗಾಲ: ತಾಲೂಕಿನ ಸಿದ್ದಯ್ಯನಪುರ, ಬಸ್ತಿಪುರ ಹಾಗೂ ತಿಮ್ಮರಾಜಿಪುರ ಬಡಾವಣೆಯಲ್ಲಿ ಒಟ್ಟು 4.20 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಭೂಮಿಪೂಜೆ ನೆರವೇರಿಸಿದರು.

ಸಿದ್ದಯ್ಯನಪುರ ಗ್ರಾಮದಲ್ಲಿ 2 ಕೋಟಿ ರೂ., ಬಸ್ತಿಪುರ ಬಡಾವಣೆಯಲ್ಲಿ 1.70 ಕೋಟಿ ರೂ. ಹಾಗೂ ತಿಮ್ಮರಾಜಿಪುರ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ತಾಲೂಕಿನ ನಾಲ್ಕು ಗ್ರಾಮಗಳ ಕುರುಬರ ಬೀದಿಯಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದ 4.50 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.

ಇದೇವೇಳೆ ಮಾತನಾಡಿದ ಶಾಸಕರು ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಉತ್ತಮ ರಸ್ತೆ ಸಂಪರ್ಕ ಕಲ್ಪಿಸುವುದು ಅಭಿವೃದ್ಧಿಯ ಪ್ರಮುಖ ಭಾಗವಾಗಿದೆ. ಜನರ ಬಹುದಿನಗಳ ಬೇಡಿಕೆಗೆ ಸ್ಪಂದಿಸಿ ಅನುದಾನ ಒದಗಿಸಲಾಗುತ್ತಿದ್ದು, ಕಾಮಗಾರಿಗಳು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಕೆಆರ್‌ಐಡಿಎಲ್ ಎಇಇ ಚಿಕ್ಕಲಿಂಗಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ರಾಜೇಂದ್ರ, ತಾ.ಪಂ ಮಾಜಿ ಸದಸ್ಯ ನಂಜೇಗೌಡ, ತಾಲೂಕು ಕುರುಬರ ಸಂಘದ ಉಪಾಧ್ಯಕ್ಷ ವಿ.ಸಿ. ಬಸವಣ್ಣ, ನಗರಸಭೆ ಸದಸ್ಯ ಮಂಜು, ದೊರೆರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



# ಕೃಷಿಯ ಅನುಭವ ಪಡೆದ ಮಕ್ಕಳು

## ಗದ್ದೆಗಿಳಿದು ನಾಟಿ ಮಾಡಿದ ವಿದ್ಯಾರ್ಥಿಗಳು | ಶಾಲೆಯ ವಿಶಿಷ್ಟ ಕೃಷಿ ಅನುಭವ ಕಾರ್ಯಕ್ರಮ

ಚನ್ನಪಟ್ಟಣ: ಪುಸ್ತಕದ ಪುಟಗಳಲ್ಲಿ ಕೃಷಿಯ ಪಾಠ ಓದುವುದಕ್ಕಿಂತ ಮಣ್ಣಿಗೆ ಇಳಿದು ಕೃಷಿಯ ನೈಜ ಅನುಭವ ಪಡೆಯುವುದು ಮಕ್ಕಳ ಕಲಿಕೆಯನ್ನು ಮತ್ತಷ್ಟು ಅರ್ಥಪೂರ್ಣವಾಗಿಸುತ್ತದೆ ಎಂಬ ಆಶಯ ದೊಂದಿಗೆ ತಾಲೂಕಿನ ಚಕ್ಕೆರೆ ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲಾ ವಿಭಾಗದ ವತಿಯಿಂದ ಇತ್ತೀಚೆಗೆ ವಿದ್ಯಾರ್ಥಿಗಳಿಗಾಗಿ ವಿನೂತನ ಕೃಷಿ ಅನುಭವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಗ್ರಾಮದ ಪ್ರಗತಿಪರ ಸಾವಯವ ಹಾಗೂ ಸಮಗ್ರ ಕೃಷಿಕ, ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪುರಸ್ಕೃತ ಮಂಜುನಾಥ್ (ಮಂಜು ಎಲ್ಲೇಗೌಡ) ಅವರ ತೋಟಕ್ಕೆ ವಿದ್ಯಾರ್ಥಿಗಳನ್ನು ಕರೆದೊಯ್ದು ಕೃಷಿಯ ವಿವಿಧ ಆಯಾಮಗಳ ನೇರ ಪರಿಚಯ ಮಾಡಿಸಲಾಯಿತು.



**ತೋಟದಲ್ಲಿ ಕೃಷಿಯ ನೇರ ಪಾಠ**

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕೇವಲ ತೋಟವನ್ನು ವೀಕ್ಷಿಸುವುದಕ್ಕೆ ಸೀಮಿತರಾಗದೆ, ಕೃಷಿಯೊಂದಿಗೆ ನೇರವಾಗಿ ಬೆರೆತು ಕಲಿತರು. ಕೃಷಿ ಹೊಂಡ, ಮಳೆನೀರು ಕೊಯ್ಲು, ಜೇನು ಸಾಕಾಣಿಕೆ, ಕೋಳಿ ಹಾಗೂ ಕುರಿ ಸಾಕಾಣಿಕೆ, ಟೊಮೆಟೊ ಸೇರಿದಂತೆ ವಿವಿಧ ಬೆಳೆಗಳು ಮತ್ತು ಸಮಗ್ರ ಕೃಷಿ ಪದ್ಧತಿಗಳ ಕುರಿತು ಮಂಜುನಾಥ್ ಅವರಿಂದ ಮಾಹಿತಿ ಪಡೆದರು.ಬೆಳೆಗಳ ಬೆಳವಣಿಗೆ, ನೀರಿನ ಸಮರ್ಪಕ ಬಳಕೆ, ಮಣ್ಣಿನ ಸಂರಕ್ಷಣೆ ಹಾಗೂ ಕೃಷಿಯಲ್ಲಿ ವೈಜ್ಞಾನಿಕ ಪದ್ಧತಿಗಳ ಮಹತ್ವವನ್ನು ವಿದ್ಯಾರ್ಥಿಗಳು ಅರಿತುಕೊಂಡರು. ತೋಟದಲ್ಲಿದ್ದ ವಿವಿಧ ಹಣ್ಣುಗಳನ್ನು ಸ್ವತಃ ಕಿತ್ತು ಸವಿಯುವ ಅವಕಾಶವೂ ಮಕ್ಕಳಿಗೆ ದೊರೆಯಿತು. ಹೀಗೆ ಒಂದು ಬೆಳೆ ಹೊಲದಿಂದ ಮಾರುಕಟ್ಟೆಗೆ ತಲುಪುವವರೆಗೆ ರೈತ ಅನುಭವಿಸುವ ಪರಿಶ್ರಮ ಮತ್ತು ಪ್ರಕೃತಿಯ ಪಾತ್ರವನ್ನು ವಿದ್ಯಾರ್ಥಿಗಳು ಹತ್ತಿರದಿಂದ ತಿಳಿದುಕೊಂಡರು.

**ಕೆಸರಿಗಿಳಿದು ಭತ್ತದ ನಾಟಿ**

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿದ್ದು ಭತ್ತದ ನಾಟಿ. ವಿದ್ಯಾರ್ಥಿಗಳು ಗದ್ದೆಗೆ ಇಳಿದು ಕೆಸರಿನಲ್ಲಿ ನಿಂತು ಸ್ವತಃ ಭತ್ತದ ಸಸಿಗಳನ್ನು ನಾಟಿ ನೆಟ್ಟರು. ಪುಸ್ತಕದಲ್ಲಿ ಓದಿದ್ದ 'ಭತ್ತದ ಕೃಷಿ'ಯನ್ನು ಮಕ್ಕಳು ಅಂದು ಮಣ್ಣಿನ ಸ್ಪರ್ಶದೊಂದಿಗೆ ಅನುಭವಿಸಿದರು. ಗದ್ದೆಯಲ್ಲಿ ಕೆಲಸ ಮಾಡುವಾಗ ರೈತ ಎದುರಿಸುವ ಶ್ರಮ, ಬಿಸಿಲು, ಕೆಸರು, ನೀರು ಹಾಗೂ ಸಮಯದ ಮಹತ್ವವನ್ನು ನೇರವಾಗಿ ಅರಿತುಕೊಂಡರು. ತಾವು ನೆಟ್ಟ ಪ್ರತಿಯೊಂದು ಸಸಿಯ ಹಿಂದೆಯೂ ರೈತನ ಪರಿಶ್ರಮವಿದೆ ಎಂಬ ಅರಿವು ಮಕ್ಕಳಲ್ಲಿ ಮೂಡಿತು.

**ಮಣ್ಣಿನ ಪಾಠ ಬದುಕಿನ ಮೌಲ್ಯ ಕಲಿಸುತ್ತದೆ**

ಈ ಸಂದರ್ಭದಲ್ಲಿ ಮಾತನಾಡಿದ ಶಾಲೆಯ ಮುಖ್ಯ ಶಿಕ್ಷಕ ಯೋಗೇಶ್ ಚಕ್ಕೆರೆ ಒಂದು ಅನ್ನದ ಕಾಳು ನಮ್ಮ ತಟ್ಟೆಗೆ ಬರುವ ಹಿಂದೆ ರೈತನ ಬೆವರು, ಮಣ್ಣಿನ ಶ್ರಮ, ನೀರು, ಪ್ರಕೃತಿ ಮತ್ತು ಅಪಾರ ಪರಿಶ್ರಮವಿದೆ. ಇದನ್ನು ಮಕ್ಕಳು ಕೇವಲ ಕೇಳುವು ದಕ್ಕಿಂತ ಅನುಭವದ ಮೂಲಕ ಅರಿಯಬೇಕು. ಪುಸ್ತಕದ ಪಾಠ ಬದುಕಿಗೆ ದಾರಿ ತೋರಬಹುದು; ಆದರೆ ಮಣ್ಣಿನ ಪಾಠ ಬದುಕಿನ ಮೌಲ್ಯವನ್ನು ಕಲಿಸುತ್ತದೆ. ಕೃಷಿಯೊಂದಿಗೆ ಮಕ್ಕಳನ್ನು ಬೆಸೆಯುವು ದರಿಂದ ರೈತನ ಬಗ್ಗೆ ಗೌರವ, ಶ್ರಮದ ಮಹತ್ವ, ಆಹಾರದ ಮೌಲ್ಯ ಮತ್ತು ಪ್ರಕೃತಿಯ ಮೇಲಿನ ಕಾಳಜಿ ಬೆಳೆಸಬಹುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ಮಧುಸೂದನ್, ಬಿ.ಕೆ. ಲತಾ, ರಾಜಣ್ಣ, ಶಶಿರೇಖಾ, ರಶ್ಮಿ ಹಾಗೂ ಶಶಿಕುಮಾರ್ ಸೇರಿದಂತೆ ಇತರರು ತೋಟಭೇಟಿಯಲ್ಲಿ ಭಾಗವಹಿಸಿದ್ದರು.

### ಯುವಜನತೆ ಕೃಷಿಯತ್ತ ಆಸಕ್ತಿ ಬೆಳೆಸಿಕೊಳ್ಳಲಿ:

ಪ್ರಗತಿಪರ ಕೃಷಿಕ ಮಂಜುನಾಥ್ ಮಾತನಾಡಿ ಮಕ್ಕಳು ಕೃಷಿಯನ್ನು ಕೇವಲ ಪುಸ್ತಕದಲ್ಲಿ ಓದುವುದಕ್ಕಿಂತ ತೋಟಕ್ಕೆ ಬಂದು ಮಣ್ಣಿನೊಂದಿಗೆ ಬೆರೆತು, ಬೆಳೆಗಳನ್ನು ವೀಕ್ಷಿಸಿ, ನಾಟಿ ಮಾಡುವ ಅನುಭವ ಪಡೆಯಬೇಕು. ಇಂತಹ ಅನುಭವದಿಂದ ಕೃಷಿಯ ಬಗ್ಗೆ ಆಸಕ್ತಿ ಹಾಗೂ ರೈತನ ಪರಿಶ್ರಮದ ಬಗ್ಗೆ ಗೌರವ ಮೂಡುತ್ತದೆ. ವೈಜ್ಞಾನಿಕ ಮತ್ತು ಸಮಗ್ರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡರೆ ಕೃಷಿಯನ್ನು ಉತ್ತಮ ಆದಾಯದ ವೃತ್ತಿಯನ್ನಾಗಿ ರೂಪಿಸಬಹುದು. ಯುವಜನತೆ ಕೃಷಿಯತ್ತ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

### ಕೃಷಿಯೊಂದಿಗೆ ಮಕ್ಕಳನ್ನು ಬೆಸೆಯುವ ಪ್ರಯತ್ನ

ಕೃಷಿಯನ್ನು ಕೇವಲ ಪಠ್ಯಪುಸ್ತಕದ ವಿಷಯವಾಗಿ ನೋಡದೆ, ಬದುಕಿನ ಅವಿಭಾಜ್ಯ ಭಾಗವಾಗಿ ಮಕ್ಕಳಿಗೆ ಪರಿಚಯಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಣ್ಣಿನ ಸ್ಪರ್ಶ, ಗದ್ದೆಯ ಅನುಭವ, ನಾಟಿ ನೆಡುವಿಕೆ ಹಾಗೂ ರೈತನ ಪರಿಶ್ರಮದ ನೇರ ಅರಿವು ವಿದ್ಯಾರ್ಥಿಗಳಲ್ಲಿ ಕೃಷಿ, ಪ್ರಕೃತಿ ಮತ್ತು ಆಹಾರದ ಬಗ್ಗೆ ಹೊಸ ದೃಷ್ಟಿಕೋನ ಮೂಡಿ ಸಿತು. ಮಕ್ಕಳನ್ನು ಮಣ್ಣು, ಕೃಷಿ, ರೈತ ಮತ್ತು ಗ್ರಾಮೀಣ ಬದುಕಿನೊಂದಿಗೆ ಬೆಸೆಯುವ ಇಂತಹ ಅನುಭವಾಧಾರಿತ ಕಲಿಕೆಗೆ ಕರ್ನಾಟಕ ಪಬ್ಲಿಕ್ ಶಾಲೆ, ಚಕ್ಕೆರೆ ಆದ್ಯತೆ ನೀಡುತ್ತಿದೆ. ಮಣ್ಣಿನಲ್ಲಿ ಕಾಲಿಟ್ಟ ವಿದ್ಯಾರ್ಥಿಗಳು ಕೃಷಿಯನ್ನು ಕಂಡರು; ನಾಟಿ ನೆಟ್ಟ ವಿದ್ಯಾರ್ಥಿಗಳು ರೈತನ ಶ್ರಮವನ್ನು ಅರಿತರು; ಅನ್ನದ ಮೌಲ್ಯವನ್ನು ಅನುಭವದ ಮೂಲಕ ಕಲಿತರು.ಹೀಗಾಗಿ, ಮಕ್ಕಳ ಪಾಲಿಗೆ ಈ ಕಾರ್ಯಕ್ರಮ ಕೇವಲ ತೋಟ ಭೇಟಿ ಯಾಗಿರದೆ, ಮಣ್ಣಿನೊಂದಿಗೆ ಬೆರೆತು ಕಲಿತ, ರೈತನ ಪರಿಶ್ರಮವನ್ನು ಅರಿತುಕೊಂಡ ಮತ್ತು ಅನ್ನದ ಮೌಲ್ಯವನ್ನು ಅನುಭವಿಸಿದ ಜೀವಂತ ತರಗತಿಯಾಗಿ ನೆನಪಿನಲ್ಲಿ ಉಳಿಯಿತು.

## ರೈತರಿಗೆ ಅನ್ಯಾಯ: ಪಿ.ಎಂ. ಪ್ರಸನ್ನ ನೇತೃತ್ವದಲ್ಲಿ ಬೃಹತ್ ಪಾದಯಾತ್ರೆ

# 150 ಕೆರೆ ತುಂಬಿಸುವ ಯೋಜನೆ ವಿಫಲ ಆರೋಪ

ಪಿರಿಯಾಪಟ್ಟಣ: ತಾಲೂಕಿನ 150 ಕೆರೆಗಳಿಗೆ ನೀರು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆ ವಿಫಲವಾಗಿರುವುದನ್ನು ಖಂಡಿಸಿ ಜೆಡಿಎಸ್ ಮುಖಂಡ ಪಿ.ಎಂ. ಪ್ರಸನ್ನ ನೇತೃತ್ವದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆ ಹಾಗೂ ಪಾದಯಾತ್ರೆಯಲ್ಲಿ ಸುಮಾರು 4 ಸಾವಿರಕ್ಕೂ ಹೆಚ್ಚು ರೈತರು, ಜೆಡಿಎಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.



ತಾಲೂಕಿನ ಬೆಟ್ಟದಪುರ ಗ್ರಾಮದಿಂದ ಆರಂಭವಾದ ಪಾದಯಾತ್ರೆಯು ಕೂರಗಲ್ಲು, ಭುವನಹಳ್ಳಿ ಟೋಲ್, ಈಚೂರು ಮಾರ್ಗವಾಗಿ ಹಿಟ್ನೆಹೆಬ್ಬಾಗಿಲು ತಲುಪಿತು. ಈ ವೇಳೆ "150 ಕೆರೆಗಳಿಗೆ ನೀರು ತುಂಬಿಸಿ", "ರೈತರಿಗೆ ನ್ಯಾಯ ನೀಡಿ" ಹಾಗೂ "ಪ್ರಸನ್ನ ಮುಂದಿನ ಶಾಸಕನಾಗಲಿ" ಎಂಬ ಘೋಷಣೆಗಳು ಮೊಳಗಿದವು. ಪಾದಯಾತ್ರೆಯುದ್ದಕ್ಕೂ ಜನರು ಸ್ವಯಂಪ್ರೇರಿತವಾಗಿ ಸೇರ್ಪಡೆಯಾಗಿದ್ದರಿಂದ ಪ್ರತಿಭಟನೆಗೆ ವಿಶೇಷ ಕಳೆ ಮೂಡಿತು. ಮಾರ್ಗದುದ್ದಕ್ಕೂ ಹಲವು ಗ್ರಾಮಗಳಲ್ಲಿ ಪಟಾಕಿ ಸಿಡಿಸಿ ಪ್ರತಿಭಟನಾಕಾರರನ್ನು ಸ್ವಾಗತಿಸಲಾಯಿತು ಹಾಗೂ ವಿವಿಧ ಸಂಘಟನೆಗಳು ಮತ್ತು ಅಭಿಮಾನಿ ಬಳಗಗಳು ಪಿ.ಎಂ. ಪ್ರಸನ್ನ ಅವರನ್ನು ಸನ್ಮಾನಿಸಿ ಬೆಂಬಲ ವ್ಯಕ್ತಪಡಿಸಿದವು. ಬಿಸಿಲಿನ ತಾಪವನ್ನೂ ಲೆಕ್ಕಿಸದೆ ಮಹಿಳೆಯರು, ಯುವಕರು ಹಾಗೂ ರೈತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರ ಅನುಕೂಲಕ್ಕಾಗಿ ಮಾರ್ಗ ಮಧ್ಯೆ ಕುಡಿಯುವ ನೀರು, ಮಜ್ಜಿಗೆ, ಸೌತೆಕಾಯಿ, ಕಿತ್ತಳೆ ಸೇರಿದಂತೆ ವಿವಿಧ ಹಣ್ಣುಗಳ ವಿತರಣೆ ಮಾಡಲಾಯಿತು. ಹಿಟ್ನೆಹೆಬ್ಬಾಗಿಲು ಗ್ರಾಮದಲ್ಲಿ ಬಾತ್, ಮೊಸರನ್ನ, ಬಾಳೆಹಣ್ಣು ಹಾಗೂ ಜಿಲೇಬಿ ಒಳಗೊಂಡ ವಿಶೇಷ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ವ ು ು ಂ ದ ು ವ ರ ದ ಪಾದಯಾತ್ರೆಯು ಪಟ್ಟಣದ ಬಸವೇಶ್ವರ ವೃತ್ತದ ಬಳಿ ತಲುಪಿದಾಗ ಜೆಡಿಎಸ್ ಕಾರ್ಯಕರ್ತರು ಜೆ.ಸಿ.ಬಿ. ಮೂಲಕ ಪುಷ್ಪ ಮಳೆ ಸುರಿಸಿದರು. ಬಳಿಕ ತಾಲೂಕು ಕಚೇರಿಗೆ ತಲುಪಿದ ಪಾದಯಾತ್ರೆಯು ತಹಸೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿ, ರೈತರ ಸಮಸ್ಯೆಗೆ ಶೀಘ್ರ ಪರಿಹಾರ ದೊರಕಿಸುವಂತೆ ಆಗ್ರಹಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿತು.



### ಸರ್ಕಾರದ ವಿರುದ್ಧ ಆಕ್ರೋಶ ಹಾಗೂ ಸಮರ್ಪಕ ಪರಿಹಾರಕ್ಕೆ ಒತ್ತಾಯ

ರಾಜ್ಯ ಸರ್ಕಾರವು ಕಾರ್ಯಕ್ರಮಗಳ ಆಯೋಜನೆಯಲ್ಲಿ ಟೀ, ಕಾಫಿಗೆ ಕೋಟಿಗೂ ಹೆಚ್ಚು ಹಣ ಖರ್ಚು ಮಾಡುತ್ತಿದೆ, ಆದರೆ ರೈತರ ಸಮಸ್ಯೆಗಳ ಬಗ್ಗೆ ತೀವ್ರ ನಿರ್ಲಕ್ಷ್ಯ ತೋರುತ್ತಿದೆ ಎಂದು ಅವರು ವಾಗ್ದಾಳಿ ನಡೆಸಿದರು. ಲೋಡ್ ಶೆಡ್ಡಿಂಗ್ ನೆಪದಲ್ಲಿ ರೈತರಿಗೆ ವಿದ್ಯುತ್ ಕಡಿತಗೊಳಿಸಿ ಕೃಷಿ ಚಟುವಟಿಕೆಗಳಿಗೆ ತೊಂದರೆ ನೀಡಲಾಗುತ್ತಿದ್ದು, ಹೀಗೆಯೇ ಮುಂದುವರಿದರೆ ಮುಂದಿನ ದಿನಗಳಲ್ಲಿ ಚೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಉಗ್ರ ಧರಣಿ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕೋಟ್ಯಂತರ ರೂಪಾಯಿ ವೆಚ್ಚದ ಕಾರ್ಯಕ್ರಮಗಳಿಗೆ ಹಣ ಖರ್ಚು ಮಾಡುತ್ತಿರುವ ಸರ್ಕಾರ, ರೈತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿದೆ. ಬರ ಪರಿಹಾರವಾಗಿ ನೀಡುತ್ತಿರುವ ಕೇವಲ 2,500 ರೂ. ಮೊತ್ತವು ಸರ್ಕಾರಕ್ಕೆ ನಾಚಿಕೆಗೇಡಿನ ವಿಷಯವಾಗಿದ್ದು, ಬನ್ನಿ ಈ ಹಣವನ್ನು ನಮ್ಮ ರೈತರೇ ನಿಮಗೆ ಕೊಡುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸಚಿವ ಕುಮಾರಣ್ಣನ ಆಡಳಿತದಲ್ಲಿ ರೈತರಿಗೆ ಸಾಲ ಮನ್ನಾ ಮಾಡುವುದರ ಜೊತೆಗೆ ಪ್ರತಿ ಯೊಂದು ಹಂತದಲ್ಲೂ ರೈತರ ಬೆನ್ನೆಲುಬಾಗಿ ದ್ದರು, ಆದರೆ ಈ ಸರ್ಕಾರ ರೈತರಿಗೆ ಅನ್ಯಾಯ ಮಾಡುವ ಕೆಲಸವೆಸಗುತ್ತಿದೆ. ಆದ್ದರಿಂದ ಕನಿಷ್ಠ 50 ಸಾವಿರ ರೂ.ಗಳನ್ನಾದರೂ ರೈತರಿಗೆ ಪರಿಹಾರವಾಗಿ ಘೋಷಿಸಬೇಕು ಎಂದು ಅವರು ಒತ್ತಾಯಿಸಿದರು. ರೈತರಿಗೆ ನ್ಯಾಯ ದೊರೆಯುವವರೆಗೆ ಈ ಹೋರಾಟ ಮುಂದುವರಿಯಲಿದ್ದು, ಜನರ ಸಂಕಷ್ಟಗಳಿಗೆ ಸ್ಪಂದಿಸದ ಜನಪ್ರತಿನಿಧಿಗಳಿಗೆ ಮುಂದಿನ ಚುನಾವಣೆಯಲ್ಲಿ ಮತದಾರರೇ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಸಿದರು.

### ವಿರೋಧದ ನಡುವೆ ಪಾದಯಾತ್ರೆ ಯಶಸ್ವಿ

ಇದೇ ವೇಳೆ, ಪಾದಯಾತ್ರೆಗೆ ವಿರೋಧ ವ್ಯಕ್ತವಾಗಿದ್ದರೂ ಸಾವಿರಾರು ಮಂದಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಪಾಲ್ಗೊಂಡಿರುವುದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಯಿತು. ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯ ಶೆಟ್ಟಿ ಅವರು ಕಾರ್ಯಕರ್ತರು ಭಾಗವಹಿಸಬಾರದು ಎಂದು ಮನವಿ ಮಾಡಿದ್ದರೂ, ಅದನ್ನು ಲೆಕ್ಕಿಸದೆ ಭಾರಿ ಸಂಖ್ಯೆಯಲ್ಲಿ ಜನರು ಪಾದಯಾತ್ರೆಯಲ್ಲಿ ಭಾಗವಹಿಸಿದರು. ಈ ಬೃಹತ್ ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕೆ. ಮಹದೇವ್ ಹಾಗೂ ಅವರ ಬೆಂಬಲಿಗರು ಗೈರಾಗಿದ್ದರು, ಜೊತೆಗೆ ಬಿಜೆಪಿ ಮುಖಂಡರು ಸಹ ಪಾಲ್ಗೊಂಡಿರಲಿಲ್ಲ. ಆದರೂ ಸುಮಾರು 4 ಸಾವಿರಕ್ಕೂ ಅಧಿಕ ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಹಾಗೂ ತನಿಖೆಗೆ ಆಗ್ರಹ**

ಈ ವೇಳೆ ಜನರನ್ನುದ್ದೇಶಿಸಿ ಮಾತನಾಡಿದ ಪಿ.ಎಂ. ಪ್ರಸನ್ನ ಅವರು, 150 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು. ಸಮರ್ಪಕ ಪರೀಕ್ಷೆ ನಡೆಸದೆ ಕೇವಲ ಗುತ್ತಿಗೆದಾರರಿಗೆ ಅನುಕೂಲವಾಗುವ ಉದ್ದೇಶದಿಂದ ಈ ಯೋಜನೆಯನ್ನು ಉದ್ಘಾಟನೆ ಮಾಡಲಾಗಿದೆ. ಈ ಯೋಜನೆಯ ವೈಫಲ್ಯಕ್ಕೆ ನೇರ ಕಾರಣರಾದ ಗುತ್ತಿಗೆದಾರರನ್ನು ಕೂಡಲೇ ಕಪ್ಪುಪಟ್ಟಿಗೆ ಸೇರಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಅವರು ಕಟ್ಟುನಿಟ್ಟಾಗಿ ಆಗ್ರಹಿಸಿದರು. ಈ ಪಾದಯಾತ್ರೆಯಲ್ಲಿ ಪ್ರಮುಖ ಮುಖಂಡರಾದ ಸುರೇಶ್ ಕೆ., ರಾಮು ಐಲಾಪುರ, ರವಿ, ಮಹೇಶ್, ಪ್ರೀತಿ ಅರಸ್ ಸೇರಿದಂತೆ ನೂರಾರು ಮುಖಂಡರು ಹಾಗೂ ಸಾವಿರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

# ಯುವ ಕನ್ನಡಿಗರ ಸೇನೆಯಿಂದ ವರ್ಷಪೂರ್ತಿ ಕನ್ನಡ ಕಟ್ಟುವ ಕೆಲಸ

ಚಾಮರಾಜನಗರ: ಯುವ ಕನ್ನಡಿಗರ ಸೇನೆಯು ವರ್ಷಪೂರ್ತಿ ಕನ್ನಡ ಕಟ್ಟುವುದು, ನೆಲ, ಜಲ, ಭಾಷೆ ಕಾಯುವ ಕೆಲಸ ಮಾಡುತ್ತಿದೆ ಎಂದು ಸೇನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ನೆ ಲ ರಾಮ್ ಪ್ರಸಾದ್ ಗೌಡ ಹೇಳಿದರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಯುವ ಕನ್ನಡಿಗರ ಸೇನೆ ಜಿಲ್ಲಾ ಘಟಕದ ಬೃಹತ್ ಸೇರ್ಪಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಂಘಟನೆಗೆ ಸೇರ್ಪಡೆಯಾದವರಿಗೆ ಪಕ್ಷದ ಶಲ್ಯ ಹಾಕಿ ಸ್ವಾಗತಿಸಿ ಬರಮಾಡಿ ಕೊಂಡು ಮಾತನಾಡಿದರು. ಚಾಮರಾಜನಗರ ಜಿಲ್ಲೆ ಎಂದರೆ ಮೈರೋಮಾಂಚನ ಆಗುತ್ತದೆ. ಕನ್ನಡಪರ ಹೋರಾಟಗಾರರನ್ನು ಅತಿ ಹೆಚ್ಚು ಕೊಟ್ಟಿರುವ ಜಿಲ್ಲೆ ಎಂದರೆ ಎಂದರೆ ಅದು ಚಾಮರಾಜನಗರ ಜಿಲ್ಲೆಯಾಗಿದೆ. ಯುವ ಕನ್ನಡಿಗರ ಸೇನೆಯು ದೊಡ್ಡ ಕನಸು ಇಟ್ಟು ಕೊಂಡು, ದೂರದೃಷ್ಟಿಯಿಟ್ಟುಕೊಂಡು ಸ್ಥಾಪನೆ ಮಾಡಿರುವ ಸಂಘಟನೆ ಇದಾಗಿದೆ. ಯಾರಲ್ಲಿ ಕನ್ನಡ ಕಟ್ಟುವ ತಾಕತ್ತು ಇರುತ್ತದೆ. ಅಂತವರಿಗೆ ಟೀಕೆಗಳು ಬರುತ್ತದೆ. ರಾಘವೇಂದ್ರ ಅವರ ತಂಡವನ್ನು ಚಾಮರಾಜನಗರದಲ್ಲಿ ಮಾಡಲೇಬೇಕು ಎಂದು ರಾಜ್ಯದ ಪ್ರಮುಖರೊಂದಿಗೆ ಮಾತನಾಡಿ ಆಯ್ಕೆ ಮಾಡಿ




ಜವಾಬ್ದಾರಿ ಕೊಟ್ಟಿದ್ದೇವೆ. ಪ್ರತಿ ಗ್ರಾಮದಿಂದಲ್ಲೂ ಶಾಖೆ ಆರಂಭಿಸಿ ಸಂಘಟನೆ ಕಟ್ಟಬೇಕು ಎಂದು ಸಲಹೆ ನೀಡಿದರು. ಕೇವಲ 10 ತಿಂಗಳ ಹಿಂದೆ ಆರಂಭವಾದ ಯುವ ಕನ್ನಡಿಗರ ಸೇನೆಯು ಇಂದು ಇಡೀ ರಾಜ್ಯದಲ್ಲಿ ಸಾಮಾಜಿಕ ಜಾಲತಾಣ ಮುಖೇನಾ, ಜನರನ್ನು ಖುದ್ದುಭೇಟಿ ಮಾಡಿ ಯಾವುದಾದರೂ ಸಂಘಟನೆ ಜನಮನ್ನಣೆ ಗಳಿಸಿದೆ ಎಂದರೆ ಅದು ಏಕೈಕ ಸಂಘಟನೆ ಎಂದರೆ ಅದು ನಮ್ಮ ಸಂಘಟನೆ ಮಾತ್ರ.ಸಂಘಟನೆ ಕಟ್ಟುವುದು ತುಂಬ ಸುಲಭ, ಆದರೆ ಅದನ್ನು ಉಳಿಸಿಕೊಳ್ಳುವುದು ತುಂಬಾ ಕಷ್ಟವಾಗಿದೆ. ಸಾವಿರಾರು ಸಂಘಟನೆಗಳು ಹುಟ್ಟುತ್ತಿವೆ. ಸಾಯುತ್ತಿವೆ. ಕೆಲವು ಮಾತ್ರ ಉಳಿದುಕೊಂಡಿವೆ'. ಕೆಲವು ಮಾತ್ರ ಮೈಸೂರು ರಸ್ತೆಗೆ ಸೀಮಿತವಾಗಿವೆ. ಆದರೆ ನಮ್ಮ ಸಂಘಟನೆ ಚಾಮರಾಜನಗರದಿಂದ ಹಿಡಿದು ಬೆಳಗಾಂವರೆಗೂ ಪ್ರತಿ ತಾಲೂಕು, ಹೋಬಳಿ, ಪ್ರತಿ ಗ್ರಾಮದಲ್ಲೂ ಶಾಖೆ ಇರಬೇಕು ಎಂಬ ಉದ್ದೇಶವನ್ನಿಟ್ಟುಕೊಂಡಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕಾಂಗ್ರೆಸ್ ಮುಖಂಡ ಎನ್.ಲೋಕೇಶ್ ಮಾತನಾಡಿ, ಕನ್ನಡಕ್ಕಾಗಿ ವರನಟ ಡಾ.ರಾಜ್‌ಕುಮಾರ್, ಕನ್ನಡ ಚಳವಳಿಗಾರ ವಾಟಾಳ್‌ನಾಗರಾಜ್ ಅವರು ಸಾಕಷ್ಟು ಹೋರಾಟ ಮಾಡಿದ್ದಾರೆ. ಜಿಲ್ಲೆಯಲ್ಲಿ ಕನ್ನಡ ಪರ ಸಂಘಟನೆಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಅದೇ ರೀತಿಯಲ್ಲಿ ಯುವ ಕನ್ನಡಿಗರ ಸೇನೆಯು ಕನ್ನಡಪರ ಹೋರಾಟ ಮಾಡಿ ಕನ್ನಡ ಉಳಿಸಿ ಬೆಳೆಸುವ ಕೆಲಸ ಮಾಡಲಿ ಎಂದರು.

ಯುವ ಕನ್ನಡಿಗರ ಸೇನೆ ಜಿಲ್ಲಾ ಘಟಕದ ಅಧ್ಯಕ್ಷರಾಗಿ ರಾಘವೇಂದ್ರ ಹಾಗೂ ಪದಾಧಿಕಾರಿಗಳು ಅಧಿಕಾರ ವಹಿಸಿಕೊಂಡರು. ಕಾರ್ಯಕ್ರಮದಲ್ಲಿ ರಾಜ್ಯ ಗೌರವಾಧ್ಯಕ್ಷ ಎಂ.ಜಗದೀಶ್ ಗೌಡ, ರಾಜ್ಯ ಮುಖ್ಯ ಸಲಹೆಗಾರ ಶೇ ಬೋ ರಾಧಕೃಷ್ಣ, ರಾಜ್ಯ ಸಲಹೆಗಾರ ಎಲ್.ನೀಲಕಂಠ, ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಡಿ.ಸಂದೀಪ್, ರಾಜ್ಯ ಸಂಚಾಲಕ ತೀರ್ಥೇಶ್, ರಾಜ್ಯ ಸಂಚಾಲಕರಾದ ಕರುಣೇಶ್, ಹೇಮಂತಾಚಾರಿ ರಾಜ್ಯ ಕಾನೂನು ಸಲಹೆಗಾರ ಎಂ.ಚರಣಗೌಡ, ರಾಜ್ಯ ಮಾಧ್ಯಮ ಸಲಹೆಗಾರ ನಾಗೇಶ್ ಆರಾಧ್ಯ, ಜಿಲ್ಲಾ ಬಾಬುಜಗಜೀವನರಾಂ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಹೆಚ್.ಹೆಚ್.ನಾಗರಾಜು, ಸುರೇಶ್‌ಗೌಡ, ರಾಮಸಮುದ್ರ ಶಿವಣ್ಣ, ಸುರೇಶ್ ಹಾಗೂ ಯುವ ಕನ್ನಡಿಗರ ಸೇನೆ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

# ಕಾಯಕ ಪ್ರಜ್ಞೆ, ಶಿಕ್ಷಣದಿಂದ ಸಮಾಜದ ಪ್ರಗತಿ: ಡಾ.ಡಿ.ತಿಮ್ಮಯ್ಯ



ಮೈಸೂರು: ಬಸವಾದಿ ಶರಣರ ಕಾಯಕ ತತ್ವ ಹಾಗೂ ಶಿಕ್ಷಣದಿಂದ ಮಾತ್ರ ಅಸಂಘಟಿತ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ವಿಧಾನ ಪರಿಷತ್ತಿನ ಶಾಸಕ ಡಾ.ಡಿ.ತಿಮ್ಮಯ್ಯ ಹೇಳಿದರು.

ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ನುಲಿಯ ಚಂದಯ್ಯ ಜಯಂತೋತ್ಸವ ಸಮಿತಿಯ ವತಿಯಿಂದ ಆಯೋಜಿಸಲಾಗಿದ್ದ ನುಲಿಯ ಚಂದಯ್ಯ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು. 12ನೆಯ ಶತಮಾನದಲ್ಲಿ ಬಸವಾದಿ ಶರಣರು ಕಾಯಕವೇ ಕೈಲಾಸ ಎಂಬ ತತ್ತ್ವವನ್ನು ಜಗತ್ತಿಗೆ ಸಾರಿದರು. ಅಂದು ತಾವು ಕಷ್ಟಪಟ್ಟು ದುಡಿದು ಆ ಶ್ರಮದ ಫಲದಿಂದ ಸಮಾಜದ ಇತರರ ಒಳಿತಿಗಾಗಿ ನಿಸ್ವಾರ್ಥವಾಗಿ ಸೇವೆಯಲ್ಲಿದ್ದವರನ್ನು ನಾವು ಕಾಯಕ ಯೋಗಿಗಳು ಎಂದು ಕರೆಯುತ್ತೇವೆ. ನುಲೀಯ ಚಂದಯ್ಯನವರು ಕಾಯಕಕ್ಕೆ ಅತ್ಯುನ್ನತ ಪ್ರಾಮುಖ್ಯತೆಯನ್ನು ನೀಡಿದ್ದರು. ಆತ್ಮಪರವಾದ ಭಕ್ತಿಗಿಂತ ಸಮಾಜಮುಖಿಯಾದ ಕಾಯಕವೇ ಮಿಗಿಲಾದದ್ದು ಎಂಬುದನ್ನು ತಮ್ಮ ಜೀವನದ ಮೂಲಕವೇ ನಮಗೆ ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು. ಶರಣರ ಕಾಯಕ ತತ್ತ್ವವು ಕೇವಲ ಹೊಟ್ಟೆಪಾಡಿಗಾಗಿ ದುಡಿಯುವುದಲ್ಲ, ಬದಲಾಗಿ ಸ್ವಾವಲಂಬನೆ ಮತ್ತು ಸಾಮಾಜಿಕ ಸಮಾನತೆಯ ಸಂಕೇತ. ಪ್ರತಿಯೊಬ್ಬರೂ ತಮ್ಮ ಶ್ರಮದ ಒಂದು ಪಾಲನ್ನು ಸಮಾಜದ ಹಿತಕ್ಕಾಗಿ ನೀಡುವ ದಾಸೋಹ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು. ಇಂದು ಅಸಂಘಟಿತವಾಗಿರುವ ನಮ್ಮ ಸಮಾಜದಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳೊಂದಿಗೆ ಜೀವಿಸಬೇಕಿದೆ. ಸಮಾಜದ ಅಭಿವೃದ್ಧಿಗೆ ಶಿಕ್ಷಣ ಮತ್ತು ಸಂಘಟನೆ ಅತ್ಯಂತ ಅಗತ್ಯ. ಎಲ್ಲರೂ ವಿದ್ಯಾವಂತರಾಗಬೇಕು, ಸುಸಂಘಟಿತರಾಗಬೇಕು ಎಂದು ಹೇಳಿದರು. ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯ ನಿವೃತ್ತ ಪ್ರಾಧ್ಯಾಪಕ ಕೆ.ಹೆಚ್.ಸತ್ಯನಾರಾಯಣ ಮಾತನಾಡಿದರು. ಇದೇ ವೇಳೆ ನಿವೃತ್ತ ಐಎಎಸ್ ಅಧಿಕಾರಿ ಅಂಜನ್ ಕುಮಾರ್ ಹಾಗೂ ಶ್ರೀರಂಗಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್ ರನ್ನು ಸನ್ಮಾನಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್,

ನುಲಿಯ ಚಂದಯ್ಯ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಟಿ.ಶೇಷಾದ್ರಿ, ಕಾರ್ಯದರ್ಶಿ ನಳರಾಜ್, ಅಖಿಲ ಕರ್ನಾಟಕ ಕೊರವ ಮಹಾಸಂಘದ ಜಂಟಿ ಕಾರ್ಯದರ್ಶಿ ಕಿರಣ್ ಕುಮಾರ್ ಕೊತ್ತಗೆರೆ, ಉಪಾಧ್ಯಕ್ಷ ವೆಂಕಟಾಚಲ, ಮೈಸೂರು ಜಿಲ್ಲಾ ಕೊರಮ-ಕೊರಚ ಮಹಾಸಂಘದ ಅಧ್ಯಕ್ಷ ಡಿ.ಎನ್.ಮುತ್ತುರಾಜ್, ಕಾರ್ಯಾಧ್ಯಕ್ಷ ನಾಗರಾಜ್ ಹೆಚ್.ಡಿ.ಕೋಟೆ, ಮುಖಂಡ ತೊಂಡಾಳ್ ನಾಗರಾಜ್ ಮತ್ತಿತತರು ಉಪಸ್ಥಿತರಿದ್ದರು.

# ತಿಪ್ಪಯ್ಯನ ಕೆರೆಗೆ ಕಲುಷಿತ ನೀರು ಸೇರ್ಪಡೆ ತಡೆಗೆ ಆಗ್ರಹ



ಮೈಸೂರು: ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರ (ಪೊಲೀಸ್ ಬಡಾವಣೆ) ನಾಗರಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರ ಜೊತೆಗೆ, ಐತಿಹಾಸಿಕ ತಿಪ್ಪಯ್ಯನ ಕೆರೆಗೆ ಕಲುಷಿತ ಒಳಚರಂಡಿ ನೀರು ಸೇರುವುದನ್ನು ತಡೆದು ಕೆರೆಯನ್ನು ಸಂರಕ್ಷಿಸುವಂತೆ ಆಗ್ರಹಿಸಿ ಸ್ಥಳೀಯ ನಿವಾಸಿಗಳು ಪ್ರತಿಭಟಿಸಿದರು.

ಬಡಾವಣೆಯ ಮುಖ್ಯ ದ್ವಾರದ ಬಳಿ ಪ್ರತಿಭಟನೆಗೆ ಕುಳಿತ ನೂರಾರು ಮಂದಿ ನಿವಾಸಿಗಳು ಒಂದು ಹಂತದಲ್ಲಿ ರಸ್ತೆ ತಡೆ ಮಾಡಿ ವಾಹನ ಸಂಚಾರ ಬಂದ್ ಮಾಡಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಈ ವೇಳೆ ಕೆಲ ನಿಮಿಷಗಳ ಕಾಲ ಆ ಮಾರ್ಗದ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಕರ್ನಾಟಕ ಪೊಲೀಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಮೂಲಕ ನಿರ್ಮಾಣಗೊಂಡಿರುವ ಈ ಬಡಾವಣೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಗೊಂಡಿದ್ದು, ಒಟ್ಟು 1,954 ನಿವೇಶನಗಳನ್ನು ಹೊಂದಿದೆ. ಪ್ರಸ್ತುತ ಸುಮಾರು 1,400 ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ನಾಗರಿಕರು ವಾಸಿಸುತ್ತಿದ್ದಾರೆ. ಬಡಾವಣೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಹಾಗೂ ಆಲನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದ್ದು, ನಾಗರಿಕರು ನಿಯಮಾನುಸಾರ ತೆರಿಗೆ ಸೇರಿದಂತೆ ವಿವಿಧ ಶುಲ್ಕಗಳನ್ನು ಪಾವತಿಸುತ್ತಿದ್ದರೂ, ಇನ್ನೂ ಮೂಲಸೌಕರ್ಯ ಎಂಬುದು ಮರೀಚಿಕೆಯಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಬಡಾವಣೆಗೆ ಹೊಂದಿಕೊಂಡಿರುವ ಐತಿಹಾಸಿಕ ತಿಪ್ಪಯ್ಯನ ಕೆರೆಗೆ ಅಕ್ಕಪಕ್ಕದ ಬಡಾವಣೆಗಳ ಒಳಚರಂಡಿ ಕಲುಷಿತ ನೀರು ಸೇರುತ್ತಿರುವುದರಿಂದ ಕೆರೆ ತೀವ್ರ ಮಾಲಿನ್ಯಕ್ಕೊಳಗಾಗಿದೆ. ಹಿಂದೆ ಆಟೋಮೋಟಿವ್ ಎಕ್ಸೆಲ್ ಕಂಪನಿಯ ಸಿಎಸ್ಆರ್ ನಿಧಿ ಹಾಗೂ ಜಿಲ್ಲಾಡಳಿತದ ಮಾರ್ಗದರ್ಶನದಲ್ಲಿ ಕೆರೆಯನ್ನು ಪುನಶ್ಚೇತನಗೊಳಿಸಲಾಗಿತ್ತು. ಕೆರೆ ನೀರಿನಿಂದ ತುಂಬಿ ವಿದೇಶಿ ಹಕ್ಕಿಗಳ ಆವಾಸಸ್ಥಾನವಾಗಿದ್ದ ಸಂದರ್ಭದಲ್ಲಿ ಮೈಸೂರು ಮೃಗಾಲಯ ಪ್ರಾಧಿಕಾರದ ಉಸ್ತುವಾರಿಯಲ್ಲಿತ್ತು. ಆದರೆ, ಇದೀಗ ಕೊಳಚೆ ನೀರು ಸೇರುತ್ತಿರುವುದರಿಂದ ಕೆರೆಯ ಪರಿಸರ ಹಾಗೂ ಸೌಂದರ್ಯ ಹದಗೆಟ್ಟಿದ್ದು, ಈ ಬಗ್ಗೆ ತುರ್ತು ಗಮನ ಹರಿಸಬೇಕು. ಶುದ್ಧ ಕುಡಿಯುವ ನೀರಿನ ಶಾಶ್ವತ ವ್ಯವಸ್ಥೆ, ಆಂತರಿಕ ರಸ್ತೆಗಳ ತುರ್ತು ದುರಸ್ತಿ ಹಾಗೂ ತಿಪ್ಪಯ್ಯನ ಕೆರೆಗೆ ಕಲುಷಿತ ನೀರು ಸೇರುವುದನ್ನು ತಡೆದು ಕೆರೆಯ ಪುನಶ್ಚೇತನ ಮತ್ತು ಸಂರಕ್ಷಣಾ ಕಾರ್ಯ ಕೈಗೊಳ್ಳಬೇಕು ಎಂದರು. ವೇದಿಕೆ ಅಧ್ಯಕ್ಷ ಥಾಮಸ್, ಸ್ಥಳೀಯರಾದ ಶಿವಸ್ವಾಮಿ, ಅಶೋಕ್, ಮನುಕುಮಾರ್, ಮೋಹನ್ ರಾವ್, ಲೋಹಿತ್, ಮಹೇಶ್, ಸ್ವಾಮಿ, ಶಿವರಾಮ್, ಗಗನ್, ಲೀಲಾ ಶಿವಕುಮಾರ್, ಶೋಭಾ ಧನಂಜಯ, ಮೋಹನ್ ಕುಮಾರ್, ಸಿದ್ದರಾಜೇಗೌಡ, ವೀಣಾ ಕಾಮತ್, ವೆಂಕಟೇಶ್, ಶಿವಣ್ಣ, ಎನ್.ಎಂ. ಮಾನೆ, ದೇವಪ್ಪ ಇದ್ದರು.

# ರಚನೆಯಾಗದ ಅಧಿಕಾರೇತರ ಸಮಿತಿ

## ಐದು ದಿನ ಬಾಕಿ | ದಸರೆಗೆ ಅಧಿಕಾರಿಗಳೇ ಫೈನಲ್, ಕೊನೆ ಕ್ಷಣದ ಆಯ್ಕೆ ಸಂಪ್ರದಾಯಕ್ಕಿಲ್ಲ ಬ್ರೇಕ್

ಮೈಸೂರು: ನಾಡಹಬ್ಬ ದಸರೆಯ ಸಂಭ್ರಮಕ್ಕೆ ಬರಪೂರ ಸಿದ್ಧತೆಗಳ ಒಂದೊಂದಾಗಿ ಆರಂಭಗೊಂಡಿದ್ದು, ಇನ್ನೂ ಆರು ದಿನವಷ್ಟೇ ದಸರಾ ಉದ್ಘಾಟನೆಗೆ ದಿನಗಣನೇ ಶುರುವಾಗಿದ್ದರೂ ಸಹ ದಸರಾ ಉಪಸಮಿತಿಗಳ ನೇಮಕ ರಚನೆಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ದಸರಾ ಕಾರ್ಯಕ್ರಮದ ರೂಪುರೇಷೆಗಳನ್ನು ಅಂತಿಮಗೊಳಿಸುವಲ್ಲಿ ಅಧಿಕಾರಿಗಳೇ ಅಂತಿಮವಾಗಿದ್ದು, ಕೊನೆ ಕ್ಷಣದ ಸಮಿತಿಗಳ ಆಯ್ಕೆಯ ಸಂಪ್ರದಾಯಕ್ಕೆ ಬ್ರೇಕ್ ಇಲ್ಲದಂತಾಗಿ ಪಕ್ಷದ ಮುಖಂಡರು, ಕಾರ್ಯಕರ್ತರು ನಿರಾಸೆ ತರಿಸಿದೆ.

ಪಕ್ಷದ ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಕಾರಣರಾಗಿರುವ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರಿಗೆ ದಸರಾ ಸಮಿತಿಯಲ್ಲಿ ಪಾಲ್ಗೊಂಡು ಸಂಭ್ರಮಿಸುವ ಅವಕಾಶ ಕಲ್ಪಿಸುವುದು ವಾಡಿಕೆಯಾಗಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಸಮಿತಿ ರಚನೆಯಲ್ಲಿ ಸಂಭ್ರಮಕ್ಕಿಂತ ಬಂಡಾಯವೇ ಹೆಚ್ಚಾದ ಹಿನ್ನೆಲೆಯಲ್ಲಿ ಪ್ರತಿ ಬಾರಿಯೂ ಕೊನೆ ಕ್ಷಣದಲ್ಲಿ ಸಮಿತಿ ರಚನೆಗೆ ಅಂಕಿತ ಹಾಕುವ ಹೊಸ ಪದ್ಧತಿಗೆ ಈ ಬಾರಿಯೂ ಹೊಂದಿಕೊಂಡಂತಿದೆ. ಈ ಬಾರಿ ಸ್ವತಃ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಕ್ಷದ ಕಾರ್ಯಕರ್ತರಿಗೆ ಮೊದಲ ಆದ್ಯತೆ ಎಂಬ ಮಾತು ದಸರೆಯಲ್ಲಿ ಜಾರಿಗೊಳಿಸುವಲ್ಲಿ ಮರೆತಂತಿದ್ದಾರೆನ್ನಲಾಗಿದ್ದು, ದಸರೆ ಅಂತಿಮ ರೂಪುರೇಷೆಗಳನ್ನು ಸಹ ಅಧಿಕಾರಿಗಳೇ ಫೈನಲ್ ಮಾಡಿದ್ದಾರೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅ.11ರ ದಸರಾ ಉದ್ಘಾಟನೆಯ ಹಿಂದಿನ ದಿನ ದಸರಾ ಉಪಸಮಿತಿಗೆ ಅಧ್ಯಕ್ಷ ಆಯ್ಕೆಗೆ ಅಂಕಿತ ಬೀಳಲಿದೆ ಎನ್ನಲಾಗುತ್ತಿದೆ.




**ಸಮಿತಿ ಘೋಷಣೆ ಯಾವಾಗ**

ಈಗಾಗಲೇ ಶಾಸಕರು, ಮಾಜಿ ಶಾಸಕರು, ಪರಾಜಿತ ಅಭ್ಯರ್ಥಿಗಳು, ಪಕ್ಷದ ನಗರ ಹಾಗೂ ಜಿಲ್ಲಾ ಮತ್ತು ಬ್ಲಾಕ್ ಅಧ್ಯಕ್ಷರ ಮೂಲಕ ಸಮಿತಿಗೆ ಹೆಸರು ಕೊಡುವಂತೆ ಮಾಹಿತಿ ಸಂಗ್ರಹಕ್ಕೆ ಸರ್ಕಾರ ಮುಂದಾಗಿದೆ. ಮಾಹಿತಿ ಸಾವಿರಾರು ಹೆಸರುಗಳ ಶಿಫಾರಸ್ಸು ಸರ್ಕಾರದ ಮುಂದಿದೆ. ಒಂದೆಡೆ ವಿಜೃಂಭಣೆಯ ದಸರೆಯ ಸಿದ್ಧತೆಯಲ್ಲಿ ಅಧಿಕಾರೇತರ ಸಮಿತಿ ಸದಸ್ಯರ ನಿರ್ವಹಣೆ ಅಧಿಕಾರಿಗಳಿಗೆ ಕಷ್ಟಸಾಧ್ಯವಾಗಿದೆ. ಹೀಗಾಗಿ ಸರ್ಕಾರಕ್ಕೆ ಅಧಿಕಾರಿಗಳು ಕೊನೆ ಕ್ಷಣದಲ್ಲಿ ಮಾಡುವಂತೆ ಸಲಹೆ ನೀಡುತ್ತಿದ್ದಾರೆಂಬುದು ಕೇಳಿ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅಧಿಕಾರೇತರ ಸಮಿತಿ ಘೋಷಣೆ ಯಾವಾಗ ಎಷ್ಟು ಮಂದಿಯನ್ನು ಮಾಡುತ್ತಾರೋ ಎಂಬುದನ್ನು ಕಾದು ನೋಡಬೇಕಿದೆ.

**ಚುನಾವಣೆಗೆ ಬೇಕು, ಸಂಭ್ರಮಕ್ಕೆ ಬೇಡ:** ಕಳೆದ 10 ವರ್ಷಗಳಿಂದ ಅಧಿಕಾರಿಗಳೇ ದಸರಾ ಕಾರ್ಯಕ್ರಮ ಪಟ್ಟಿ ಅಂತಿಮಗೊಳಿಸುವ ಸಂಪ್ರದಾಯ ಬೆಳೆದು ಬಂದಿದೆ. ಹಿಂದೆಯೆಲ್ಲಾ ಸಮಿತಿಗೆ ಪಕ್ಷದ ಮುಖಂಡರು, ಕಾರ್ಯಕರ್ತರು ಆಯ್ಕೆಯಾಗಿ ಅವರ ಬಯಕೆಗಳಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಿಸಿಕೊಂಡು ಅದೇ ಮಾದರಿಯಲ್ಲಿ ಜನಪರ ಹಾಗೂ ಸಂಭ್ರಮದ ದಸರೆಗೆ ಕರೆ ನೀಡುತ್ತಿದ್ದರು. ಆದರೆ, ವರ್ಷ ಕಳೆದಂತೆ ಸಮಿತಿಗೆ ಸೇರಿಸುವಂತೆ ಕಾರ್ಯಕರ್ತರ ಒತ್ತಡ ಹೆಚ್ಚಲಾರಂಭಿಸಿತು. ಒಮ್ಮೆ ಕೇಳಿದ ಸಮಿತಿಗೆ ಸೇರಿಸಿಲ್ಲ ಎಂದು ಅನೇಕ ಮುಖಂಡರು ಪಕ್ಷ ಹಾಗೂ ಸರ್ಕಾರದ ವಿರುದ್ಧ ಬಂಡಾಯದ ಕೂಗು ಕೂಗಲಾರಂಭಿಸಿ ದಸರಾ ಬಹಿಷ್ಕರಾದ ಹೇಳಿಕೆ ನೀಡಿದ್ದ ರಾಜಕೀಯದಾಟಕ್ಕೂ ದಸರೆ ಸದ್ದು ಮಾಡಿತ್ತು. ಈ ಹಿನ್ನೆಲೆಯಲ್ಲಿ ಒಂದಷ್ಟು ವರ್ಷ ಯಾವುದೇ ಅಧಿಕಾರೇತರ ಸಮಿತಿಯನ್ನೇ ರಚಿಸದೇ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೇ ದಸರೆ ನಡೆಸಿದ್ದ ಸಂಪ್ರದಾಯ ಸಹ ದಸರೆಗಿದೆ.

**ಸಾವಿರಾರು ಮಂದಿಗೆ ಅವಕಾಶ:** ಕಳೆದ ಮೂರು ವರ್ಷದಲ್ಲಿ ಸಿಎಂ ಆಗಿದ್ದ ಸಿದ್ದರಾಮಯ್ಯನವರ ಅವಧಿಯಲ್ಲಿ ಕೊನೆ ಕ್ಷಣವಾದರೂ ಸಮಿತಿಗೆ 100 ರಿಂದ 200 ಮಂದಿಯನ್ನು ಸಮಿತಿಗೆ ಸೇರಿಸಿದ್ದರು. ಇದರಿಂದಾಗಿ ಅಧಿಕಾರಿಗಳು ಹೇಳಿದ ದಸರೆಗೆ ಗೊಂಬೆಯಂತೆ ಬಂದೂ ಕುಳಿತು ಟೀ, ಕಾಫಿ ಕುಡಿದು ಹೋಗಬೇಕಾದ ಅನಿವಾರ್ಯತೆ ಮುಖಂಡರು, ಕಾರ್ಯಕರ್ತರದ್ದಾಗಿತು. ಇದೇ ಕಾರಣಕ್ಕೆ ಅನೇಕರು ಸಮಿತಿ ಸಭೆಗಳಲ್ಲಿ ಹಾಗೂ ಪಕ್ಷದ ಸಭೆಗಳಲ್ಲಿಯೂ ಸಾಕಷ್ಟು ಗಲಾಟೆಗಳು ನಡೆದಿದ್ದವು. ಅನೇಕ ಅಧಿಕಾರಿಗಳು ಸಹ ಇದನ್ನು ದಸರಾ ಉಸ್ತುವಾರಿ ಸಚಿವರ ಗಮನಕ್ಕೂ ತಂದಿದ್ದರು. ಇನ್ನೂ ಕೆಲವು ಸಮಿತಿಗಳಲ್ಲಿ ಸಮಿತಿ ಸದಸ್ಯರನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ ಎಂದು ಸಹ ಅಪಸ್ವರ ಬಂದಿದ್ದನ್ನು ಸಹ ನೋಡಬಹುದಾಗಿದೆ. ಆದರೆ, ಈ ಬಾರಿ ಇನ್ನೂ ಐದಾರು ದಿನಗಳಷ್ಟೇ ಬಾಕಿಯಿದ್ದು, ಈ ಬಾರಿ ಹೊಸ ಮುಖ್ಯಮಂತ್ರಿ ಅವಧಿಯಲ್ಲಿ ಮುಂಚಿತವಾಗಿ ಸಮಿತಿಗೆ ಸೇರುವ ಆಸೆಯಲ್ಲಿದ್ದವರಿಗೆ ನಿರಾಸೆ ತರಿಸಿದೆ. ಅಲ್ಲದೆ, ಕೊನೆಯ ಕ್ಷಣಕ್ಕಾದರೂ ಎಷ್ಟು ಮಂದಿಗೆ ಅವಕಾಶ ಸಿಗಲಿದೆ, ಯಾವಾಗ ಪಟ್ಟಿ ಬಿಡುಗಡೆ ಆಗಲಿದೆ ಎಂಬುದನ್ನು ಎದುರು ನೋಡುತ್ತಿದ್ದಾರೆ.

> ಈಗಾಗಲೇ ಮುಖ್ಯಮಂತ್ರಿಗಳು ಸಮಿತಿಗೆ ಕಡಿಮೆ ಮಂದಿಯನ್ನು ನೇಮಿಸಿ ಅಂತಿಮಗೊಳಿಸುವಂತೆ ಸೂಚಿಸಿದ್ದಾರೆ. ಶಿಸ್ತು ಬದ್ಧವಾಗಿ ದಸರೆ ನಡೆಸಲು ಹೇಳಿದ್ದು, ಕೊನೆ ಕ್ಷಣದಲ್ಲಿ ರಚನೆಯಾದರೂ ಸಹ ನಾವು ಸಂಪೂರ್ಣವಾಗಿ ದಸರೆಯ ಯಶಸ್ವಿಗೆ ತೊಡಗಿಸಿಕೊಂಡಿರುವ ಅಧಿಕಾರಿಗಳಿಗೆ ಸಹಕಾರ ನೀಡಿಕೊಂಡು ನಾವು ಸರ್ಕಾರದ ಪರವಾಗಿ ದಸರೆಯಲ್ಲಿ ಭಾಗವಹಿಸಬೇಕಿದೆ. ಈ ನಿಟ್ಟಿನಲ್ಲಿ ಉದ್ಘಾಟನೆಗೆ ಮೂರು ದಿನ ಮುಂಚೆಯಾದರೂ ಸಮಿತಿ ಘೋಷಣೆ ಮಾಡಿ ಎಂಬ ಮನವಿಯನ್ನು ಸಚಿವರ ಗಮನಕ್ಕೆ ತರಲಾಗುವುದು. ಏನೇ ಆದರೂ ದಸರೆ ಯಶಸ್ವಿಗೆ ಅಧಿಕಾರಿಗಳು ಹಾಗೂ ಅಧಿಕಾರೇತರ ಸದಸ್ಯರೂ ಶ್ರಮವಹಿಸುತ್ತೇವೆ.
>
> **ಚಂದನ್ ಗೌಡ** ಅಧ್ಯಕ್ಷ ಜಿಲ್ಲಾ ಗ್ರಾಮಾಂತರ ಯುವಕಾಂಗ್ರೆಸ್ ಸಮಿತಿ

# ಪತ್ರಕರ್ತೆಯರ ಮೇಲಿನ ದೌರ್ಜನ್ಯ ಖಂಡನೀಯ

ಮೈಸೂರು: ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ನಡೆದಿರುವ ಅಕ್ರಮಗಳ ವಿರುದ್ಧ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ನಡೆದ ಪ್ರತಿಭಟನೆಯ ವರದಿಗೆ ತೆರಳಿದ್ದ ಪತ್ರಕರ್ತೆಯರ ಮೇಲೆ ಪೊಲೀಸರು ಲೈಂಗಿಕ ದೌರ್ಜನ್ಯ ಎಸಗಿರುವುದು ಖಂಡನೀಯ ಎಂದು ವಿಧಾನ ಪರಿಷತ್ ಸದಸ್ಯರಾದ ಕೆ.ಶಿವಕುಮಾರ್ ಅವರು ತಿಳಿಸಿದ್ದಾರೆ.

ದೆಹಲಿಯ ಜಂತರ್ ಮಂತರ್‌ನಲ್ಲಿ ಅ.3 ರಂದು ನಡೆದಿರುವ ಈ ಘಟನೆಯಲ್ಲಿ ಎಸಿಪಿ ಸೇರಿದಂತೆ ಪೊಲೀಸ್ ಸಿಬ್ಬಂದಿ ಭಾಗಿಯಾಗಿದ್ದಾರೆ ಎಂದು ಸಂತ್ರಸ್ತ ಪತ್ರಕರ್ತೆಯರು ಆರೋಪ ಮಾಡಿದ್ದಾರೆ. ರಕ್ಷಣೆ ಒದಗಿಸಬೇಕಾದ ಪೊಲೀಸರು ಈ ರೀತಿಯಲ್ಲಿ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಅಮಾನವೀಯ ಎಂದಿದ್ದಾರೆ.



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕಾಂಗವು ನಾಲ್ಕನೇ ಆಧಾರ ಸ್ತಂಭವಾಗಿದ್ದು, ಸಮಾಜದಲ್ಲಿ ನಡೆಯುವ ವಿದ್ಯಮಾನಗಳ ಬಗ್ಗೆ ಸತ್ಯ ಮತ್ತು ನಿಖರವಾದ ಮಾಹಿತಿ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಸಾರ್ವಜನಿಕರಿಗೆ ತಮ್ಮ ಹಕ್ಕುಗಳು, ಕರ್ತವ್ಯಗಳು ಹಾಗೂ ಸಮಾಜದ ಅನಿಷ್ಟ ಪಿಡುಗುಗಳ ಬಗ್ಗೆ ಜಾಗೃತಿ ಮೂಡಿಸುತ್ತಿವೆ. ಈ ದೌರ್ಜನ್ಯವು ಪತ್ರಿಕಾಂಗದ ಮೇಲೆ ನಡೆದ ನೇರ ದಾಳಿಯಾಗಿದೆ.

ಪೊಲೀಸರ ಈ ದೌರ್ಜನ್ಯ ಕುರಿತು ಕೂಡಲೇ ಪ್ರಕರಣ ದಾಖಲಿಸಬೇಕು. ಈ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಒತ್ತಾಯಿಸುತ್ತೇನೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಂಗಭೂಮಿ ಕಲೆ ಉಳಿಸಿ ಬೆಳೆಸಿ



ಚಾಮರಾಜನಗರ: ರಂಗಭೂಮಿ ಕಲೆ ಉಳಿಸಿ ಬೆಳೆಸಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಕಲಾವಿದ ಉಮ್ಮತ್ತೂರು ಬಸವರಾಜು ಹೇಳಿದರು.

ತಾಲೂಕಿನ ಉಮ್ಮತ್ತೂರು ಗ್ರಾಮದ ಶ್ರೀಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಗೆಳೆಯರ ಬಳಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶ್ರೀಶನೇಶ್ವರಸ್ವಾಮಿಯ ವಿಶೇಷ ಪೂಜಾ ಮಹೋತ್ಸವ ಅಂಗವಾಗಿ ನಡೆದ ರಂಗಗೀತೆ, ಭಕ್ತಿಗೀತೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ರಂಗಭೂಮಿ ಕ್ಷೇತ್ರ ಉಳಿಸಿ ಬೆಳೆಸಲು ನಿರಂತರ ಚಟುವಟಿಕೆಗಳು ನಡೆಯಬೇಕು. ಯುವ ಪೀಳಿಗೆ ರಂಗಭೂಮಿ ಕ್ಷೇತ್ರದ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು. ಸಾರ್ವಜನಿಕರು ನಾಟಕ ವೀಕ್ಷಿಸುವ ಮೂಲಕ ರಂಗಭೂಮಿ ಕಲಾವಿದರಿಗೆ ಪ್ರೋತ್ಸಾಹ ನೀಡಬೇಕು ಎಂದರು.

ತಾ.ಪಂ.ಮಾಜಿ ಸದಸ್ಯೆ ಸುಧಾಮಲ್ಲಣ್ಣ ಮಾತನಾಡಿ. ಚಾಮರಾಜನಗರ ಜಿಲ್ಲೆಯು ಕಲೆಗಳ ತವರೂರಾಗಿದೆ. ಜಿಲ್ಲೆಯ ಕಲಾವಿದರ ಪ್ರೋತ್ಸಾಹಿಸುವ ಕೆಲಸ ಆಗಬೇಕು ಎಂದರು. ಶ್ರೀಶನೇಶ್ವರಸ್ವಾಮಿ ದೇವಸ್ಥಾನ ಆರ್ಚಕ ಭಾನುಪ್ರಕಾಶ್ ಉದ್ಘಾಟಿಸಿದರು. ಪಿಎಸಿಸಿಬಿ ಅಧ್ಯಕ್ಷ ಸಹಕಾರ ಸಂಘದ ನಾಗೇಂದ್ರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಹಾಲು ಉತ್ಪಾದಕರ ಸಹಕಾರ ಅಧ್ಯಕ್ಷ ಸಿದ್ದಪ್ಪ ಇತರರು ಹಾಜರಿದ್ದರು.

**ಹಂಡರಕಳ್ಳಿಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಭಿವೃದ್ಧಿಪಡಿಸಿದ ಕೆರೆಯನ್ನು ಗ್ರಾಮಸ್ಥರಿಗೆ ಹಸ್ತಾಂತರ ಕಾರ್ಯಕ್ರಮ**

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಕೆರೆಗಳ ಅಭಿವೃದ್ಧಿ

ಚಾಮರಾಜನಗರ: ತಾಲೂಕಿನ ಹಂಡರಕಳ್ಳಿಯಲ್ಲಿ ಡಾ.ಡಿ.ವೀರೇಂದ್ರ ಹೆಗ್ಗಡೆ ಮತ್ತು ಡಾ.ಹೇಮಾವತಿ ವಿ.ಹೆಗ್ಗಡೆಯವರ ಮಾರ್ಗ ದರ್ಶನದೊಂದಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ವತಿಯಿಂದ ನಮ್ಮೂರು ನಮ್ಮ ಕೆರೆ ಯೋಜನೆಯಡಿ ಗ್ರಾಮಸ್ಥರ ಸಹಯೋಗದಲ್ಲಿ ಅಭಿವೃದ್ಧಿ ಪಡಿಸಿರುವ ಹಂಡರಕಳ್ಳಿ ಕೆರೆ ಹಸ್ತಾಂತರ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಗ್ರಾಮಸ್ಥರಿಗೆ ಕೆರೆ ಹಸ್ತಾಂತರ ಪ್ರಮಾಣಪತ್ರ ವಿತರಿಸಿದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ದಿನೇಶ್ ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆಯ ಅನುದಾನ 3.22 ಲಕ್ಷ, ಗ್ರಾಮಸ್ಥರ ಪಾಲು 80 ಸಾವಿರ ಒಟ್ಟು 4.02 ಲಕ್ಷ ರೂ.ವೆಚ್ಚದಲ್ಲಿ ಗ್ರಾಮದ ಸರ್ಕಾರಿ ಕಟ್ಟೆ ಕೆರೆ ಅಭಿವೃದ್ಧಿ ಪಡಿಸಲಾಗಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಅಭಿವೃದ್ಧಿಪಡಿಸಿರುವ ಕೆರೆಯನ್ನು ಗ್ರಾಮಸ್ಥರು ಉತ್ತಮ ರೀತಿಯಲ್ಲಿ ನಿರ್ವಹಿಸುವ ಮೂಲಕ ಇದರ ಸದುಪಯೋಗ



ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಗುರುಗಳಾದ ಶ್ರೀ ವೀರೇಂದ್ರ ಹೆಗಡೆ ಅವರು ಗ್ರಾಮಗಳ ಅಭಿವೃದ್ಧಿ ಕಾರ್ಯಗಳಿಗೆ ಸಹಕಾರ ನೀಡುತ್ತಿದ್ದಾರೆ. ಅದರಲ್ಲಿ ಮುಖ್ಯವಾಗಿ ಗ್ರಾಮದ ಜೀವನಾಡಿಗಳಾದ ಕೆರೆಗಳಲ್ಲಿ ಗ್ರಾಮ ಪಂಚಾಯಿತಿ, ಗ್ರಾಮಸ್ಥರ ಸಹಯೋಗದಲ್ಲಿ ಕೆರೆ ಹೂಳು ತೆಗೆಯುವ ಕೆಲಸವನ್ನು ಮಾಡುತ್ತದೆ. ನಂತರ ಕೆರೆಯನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಕೆಲಸ ಮಾಡಲಾಗುತ್ತಿದೆ. ಕೆರೆಯಲ್ಲಿ ನೀರು ತುಂಬಿದರೆ ಗ್ರಾಮದಲ್ಲಿ ಬೋರ್‌ವೆಲ್‌ಗಳ ಅಂತರ್ಜಲ ವೃದ್ಧಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ಪೂಜ್ಯರು ಮನಗಂಡು ನಮ್ಮ ಯೋಜನೆಗಳ ಕಾರ್ಯಕ್ರಮಗಳ ಮೂಲಕ ಗ್ರಾಮಗಳಲ್ಲಿರುವ ಕೆರೆಗಳನ್ನು ಗುರುತಿಸಿ, ಹೂಳು ಎತ್ತಿ ಅಭಿವೃದ್ಧಿ ಪಡಿಸಿ ಗ್ರಾಮಸ್ಥರಿಗೆ ಹಸ್ತಾಂತರ ಮಾಡುವ ಕೆಲಸ ಮಾಡಲಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆರೆ ಸಮಿತಿ ಅಧ್ಯಕ್ಷ ಪ್ರಕಾಶ್ ಮಾತನಾಡಿ, ಗ್ರಾಮದಲ್ಲಿ ಸುಮಾರು 35 ವರ್ಷಗಳಿಂದಲ್ಲೂ ಪಾಳು ಬಿದ್ದಿತು. ಅದನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆಯು ಗುರುತಿಸಿ ಗ್ರಾಮಸ್ಥರ ಸಹಯೋಗದಲ್ಲಿ ಅಭಿವೃದ್ಧಿ ಪಡಿಸಿಕೊಟ್ಟಿರುವುದು ತುಂಬಾ ಸಂತಸವಾಗಿದೆ. ಇದು ಗ್ರಾಮದ ಅಂತರ್ಜಲ ಅಭಿವೃದ್ಧಿಗೆ ಕಾರಣವಾಗಿದೆ. ಅದಕ್ಕಾಗಿ ಗ್ರಾಮಸ್ಥರ ಪರವಾಗಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆ ಯವರಿಗೆ ಈ ಮೂಲಕ ಅಭಿನಂದನೆ ಸಲ್ಲಿಸಲಾಗುತ್ತದೆ ಎಂದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆಯ ತಾಲೂಕು ಯೋಜನಾಧಿಕಾರಿ ರವಿಚಂದ್ರ, ವಲಯ ಮೇಲ್ವಿಚಾರಕ ಶಿವಣ್ಣ, ಕೃಷಿ ಮೇಲ್ವಿಚಾರಕ ಸುಪ್ರೀತ್ ಕುಮಾರ್ ಸೇವಾಪ್ರತಿನಿಧಿ ಶಾರದ, ಕೆರೆ ಗೌರವಾಧ್ಯಕ್ಷ ರಾಮಪ್ಪ, ಅಧ್ಯಕ್ಷ ಪ್ರಕಾಶ್ ಹಂಡರಕಳ್ಳಿ, ಉಪಾಧ್ಯಕ್ಷ ಎಚ್.ಎನ್. ಮರಿಸ್ವಾಮಿ, ಕೋಶಾಧಿಕಾರಿ ಮೂರ್ತಿ, ಜೊತೆ ಕಾರ್ಯದರ್ಶಿ ರಾಜಪ್ಪ, ತಿಬ್ಬಣ್ಣ, ಚೌಡಶೆಟ್ಟಿ, ರಾಜು, ಮಹದೇವಶೆಟ್ಟಿ, ಮಹದೇವ, ಮಹಾದೇವಸ್ವಾಮಿ ಇದ್ದರು.

# ಓವರ್‌ಹೆಡ್ ಟ್ಯಾಂಕ್‌ಗೆ ಗುದ್ದಲಿಪೂಜೆ

ಗುಂಡ್ಲುಪೇಟೆ: ತಾಲೂಕಿನ ಭೀಮನಬೀಡು ಗ್ರಾಮದಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನದಡಿ ?16 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಓವರ್‌ಹೆಡ್ ಟ್ಯಾಂಕ್‌ಗೆ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ತಾಲೂಕಿನ ನಾಲ್ಕು ಗ್ರಾಮಗಳಲ್ಲಿ ತಲಾ ?16 ಲಕ್ಷ ವೆಚ್ಚದಲ್ಲಿ ನೀರಿನ ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಲಾಗುತ್ತಿದೆ. ಈಗಾಗಲೇ ಹುಂಡೀಪುರ ಗ್ರಾಮದಲ್ಲಿ ಗುದ್ದಲಿಪೂಜೆ ನೆರವೇರಿಸಿದ್ದು, ಭೀಮನಬೀಡು ಗ್ರಾಮದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು. ಜನಸಂಖ್ಯೆಗೆ ಅನುಗುಣವಾಗಿ 50 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್‌ಗಳನ್ನು ನಿರ್ಮಿಸಲಾಗುತ್ತಿದ್ದು, ಇದರಿಂದ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗಲಿದೆ ಎಂದರು. ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್, ಭೀಮನಬೀಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಜಿ. ಶಿವಕುಮಾರ್, ಮಾಜಿ ಸದಸ್ಯರು, ಗ್ರಾಮದ ಯಜಮಾನರು ಹಾಗೂ ಮುಖಂಡರು ಉಪಸ್ಥಿತರಿದ್ದರು.



# ದೀಪಾಲಂಕಾರ ಸುರಕ್ಷತೆಗೆ ಆದ್ಯತೆ: ಎಂ.ಎಸ್.ಅರ್ಚನಾ



**ಮೈಸೂರು:** ನಾಡಹಬ್ಬ ಮೈಸೂರು ದಸರಾ-2026ರ ಹಿನ್ನೆಲೆಯಲ್ಲಿ ನಗರದಲ್ಲಿ ವಿದ್ಯುತ್ ದೀಪಾಲಂಕಾರ ಕಾಮಗಾರಿಗಳು ಹಾಗೂ ವಿದ್ಯುತ್ ವ್ಯವಸ್ಥೆಗಳ ಸಿದ್ಧತೆಗಳನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ವತಿಯಿಂದ ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತಿದೆ ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಎಂ.ಎಸ್.ಅರ್ಚನಾ ಹೇಳಿದ್ದಾರೆ.

ದಸರಾ ಮಹೋತ್ಸವದ ಸಂದರ್ಭದಲ್ಲಿ ಮೈಸೂರು ನಗರಕ್ಕೆ ಆಗಮಿಸುವ ಲಕ್ಷಾಂತರ ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಯಾವುದೇ ರೀತಿಯ ವಿದ್ಯುತ್ ವ್ಯತ್ಯಯ ಉಂಟಾಗದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ದಸರಾ ಪ್ರಮುಖ ಸ್ಥಳಗಳು, ರಸ್ತೆಗಳು, ವೃತ್ತಗಳು ಹಾಗೂ ಪ್ರಮುಖ ಕಟ್ಟಡಗಳಲ್ಲಿ ಕೈಗೊಳ್ಳಲಾಗುತ್ತಿರುವ ವಿದ್ಯುತ್ ದೀಪಾಲಂಕಾರಕ್ಕೆ ಅಗತ್ಯ ವಿದ್ಯುತ್ ಸಂಪರ್ಕ ಮತ್ತು ತಾಂತ್ರಿಕ ವ್ಯವಸ್ಥೆಗಳನ್ನು ಪರಿಶೀಲಿಸಲಾಗುತ್ತಿದೆ. ದೀಪಾಲಂಕಾರಕ್ಕಾಗಿ ಅಳವಡಿಸಲಾಗಿರುವ ವಿದ್ಯುತ್ ಕೇಬಲ್ಗಳು, ಕಂಟ್ರೋಲ್ ಪ್ಯಾನೆಲ್ಗಳು, ಡಿಸ್ಟ್ರಿಬ್ಯೂಷನ್ ಬಾಕ್ಸ್‌ಗಳು ಹಾಗೂ ಇತರೆ ವಿದ್ಯುತ್ ಉಪಕರಣಗಳ ಗುಣಮಟ್ಟ ಮತ್ತು ಸುರಕ್ಷತೆಯನ್ನು ಖಾತರಿಪಡಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಯಾವುದೇ ರೀತಿಯ ಸಡಿಲ ಸಂಪರ್ಕ, ತೆರೆದ ತಂತಿ ಅಥವಾ ಅಪಾಯಕಾರಿ ವಿದ್ಯುತ್ ವ್ಯವಸ್ಥೆ ಕಂಡುಬಂದಲ್ಲಿ ತಕ್ಷಣವೇ ಸರಿಪಡಿಸುವಂತೆ ಸೂಚಿಸಲಾಗಿದೆ ಎಂದಿದ್ದಾರೆ.

ದಸರಾ ಅವಧಿಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗುವ ಹಿನ್ನೆಲೆಯಲ್ಲಿ ಪ್ರಮುಖ ವಿದ್ಯುತ್ ಉಪಕೇಂದ್ರಗಳು, ಫೀಡರ್‌ಗಳು ಮತ್ತು ವಿದ್ಯುತ್ ಮಾರ್ಗಗಳ ಮೇಲೆ ನಿರಂತರ ನಿಗಾ ವಹಿಸಲಾಗುತ್ತಿದೆ. ತುರ್ತು ಸಂದರ್ಭಗಳಲ್ಲಿ ತಕ್ಷಣ ಸ್ಪಂದಿಸಲು ಹೆಚ್ಚುವರಿ ಸಿಬ್ಬಂದಿ, ವಾಹನಗಳು ಹಾಗೂ ಅಗತ್ಯ ಪರಿಕರಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ. ವಿದ್ಯುತ್ ದೀಪಾಲಂಕಾರ ಕಾಮಗಾರಿಗಳ ಸಂದರ್ಭದಲ್ಲಿ ಸಾರ್ವಜನಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ರಸ್ತೆ ಸಂಚಾರಕ್ಕೆ ತೊಂದರೆಯಾಗದಂತೆ ಹಾಗೂ ಸಾರ್ವಜನಿಕರಿಗೆ ಅಪಾಯ ಉಂಟಾಗದ ರೀತಿಯಲ್ಲಿ ಕಾಮಗಾರಿ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ. ಮಳೆ ಅಥವಾ ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿ ವಿದ್ಯುತ್ ಸುರಕ್ಷತೆಗೆ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. ದಸರಾ ವಿದ್ಯುತ್ ದೀಪಾಲಂಕಾರವು ಮೈಸೂರಿನ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುವಂತೆ ಹಾಗೂ ಯಾವುದೇ ವಿದ್ಯುತ್ ಅವಘಡ ಉಂಟಾಗದಂತೆ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ ತಿಳಿಸಿದ್ದಾರೆ.

# ಉಚಿತ ಕಣ್ಣಿನ ತಪಾಸಣಾ ಶಿಬಿರ



ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರ ದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯ ದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರ ನಡೆದು 316 ಮಂದಿ ತಪಾಸಣೆ ಮಾಡಿಸಿಕೊಂಡರು.72 ಮಂದಿ ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾಗಿ ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು.

ರೋಟರಿ ಸಂಸ್ಥಾಪಕ ಸದಸ್ಯ ಸಿ.ವಿ.ಶ್ರೀನಿವಾಸಶೆಟ್ಟಿ ಮಾತನಾಡಿ, ಕಣ್ಣುಗಳು ನಮ್ಮ ದೇಹದ ಅತ್ಯಂತ ಸೂಕ್ಷ್ಮ ಮತ್ತು ಪ್ರಮುಖ ಅಂಗಗಳಾಗಿದ್ದು. ಇಂದಿನ ಡಿಜಿಟಲ್ ಯುಗದಲ್ಲಿ ಕಂಪ್ಯೂಟರ್, ಮೊಬೈಲ್ ಬಳಕೆಯಿಂದಾಗಿ ಕಣ್ಣುಗಳ ಮೇಲಿನ ಒತ್ತಡ ಹೆಚ್ಚಾಗಿದೆ. ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಮುಂದಾಗಬೇಕು ಎಂದರು.

ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ ಮಾತನಾಡಿ, ಪ್ರತಿ ತಿಂಗಳ ಮೊದಲನೆಯ ಭಾನುವಾರ ರೋಟರಿ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ಹೊರ ಜಿಲ್ಲೆಗಳಿಂದ ಜನತೆ ಬರುತ್ತಿದ್ದು, ಶಿಬಿರದ ಪ್ರಯೋಜನ ಪಡೆದುಕೊಳ್ಳುತ್ತಿರುವುದು ತುಂಬಾ ಸಂತಸವಾಗಿದ್ದು, ಮುಂದಿನ ಶಿಬಿರದ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ರೋಟರಿ ಸಂಸ್ಥೆ ಕಾರ್ಯದರ್ಶಿ ಜಿ.ಅಂಕಶೆಟ್ಟಿ, ಮಾಜಿ ಅಧ್ಯಕ್ಷರಾದ ಅಧ್ಯಕ್ಷ ಕಾಗಲವಾಡಿ ಚಂದ್ರು, ಎಲ್.ನಾಗರಾಜು, ಯೋಗರಾಜು, ಸಿ.ಎ. ನಾರಾಯಣ್, ಚಂದ್ರಪ್ರಭಜೈನ್, ಬಿ.ಕೆ.ಮೋಹನ್, ಡಿ.ನಾಗರಾಜ, ಎ.ಶ್ರೀನಿವಾಸನ್, ಎಸ್ ಆರ್ ಎಸ್ ಶ್ರೀನಿವಾಸ, ಹರೀಶ್, ಸದಸ್ಯರಾದ ಮೇರಿ ಅಲಿಸ್, ಪುಳಿಯೋಗರೆ ಮಹಾದೇವಸ್ವಾಮಿ, ಶ್ರೀನಿಧಿಕುದರ್, ಪಿ ಆರ್ ಓ ವಿಜಯಕಾಂತ್, ಮನೋಜ್, ಸವಿತಾ ಇತರರು ಹಾಜರಿದ್ದರು.

# ಅಮೇರಿಕಾ ತಲುಪಿದ ಬೆಲ್ಲದ ದೋಣಿ

## ಹನೂರು ಚೆನ್ನಪ್ಪ ವಿರಚಿತ ನಾಟಕ ಕ್ಯಾಲಿಫೋರ್ನಿಯಾದಲ್ಲಿ ಅ.11ಕ್ಕೆ ಪ್ರದರ್ಶನ



ಮೈಸೂರು: ಖ್ಯಾತ ಬರಹಗಾರ ಹನೂರು ಚೆನ್ನಪ್ಪ ವಿರಚಿತ, ದಲಿತ ಸಂವೇದನೆಯ ಬೆಲ್ಲದ ದೋಣಿ ನಾಟಕವು ಭಾರತವನ್ನು ದಾಟಿ ಅಮೇರಿಕಾದ ಕ್ಯಾಲಿಫೋರ್ನಿಯಾ ತಲುಪಿದೆ. ಈ ನಾಟಕದ ಪ್ರದರ್ಶನ ಅಕ್ಟೋಬರ್ 11ರಂದು ಅನುವಾಸಿ ಭಾರತೀಯ ಕಲಾವಿದರಿಂದ ಪ್ರದರ್ಶನಗೊಳ್ಳುತ್ತಿದೆ. ಇದರ ಪೋಸ್ಟರ್ ಮೈಸೂರಿನಲ್ಲಿ ಬಿಡುಗಡೆಗೊಳಿಸಲಾಯಿತು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬೆಲ್ಲದ ದೋಣಿ ಪೋಸ್ಟರನ್ನು ಬಿಡುಗಡೆಗೊಳಿಸಿದರು. ನಂತರ ಮಾತನಾಡಿದ ಅವರು, ಹಿರಿಯ ಸಾಹಿತಿ ದೇವನೂರು ಮಹದೇವರ ನಂತರ ಚಾಮರಾಜನಗರದ ಭಾಷಾ ಸೊಗಡಿನಲ್ಲಿ ದಲಿತರ ಸಂವೇದನೆಯನ್ನು ಸಾಹಿತ್ಯದ ಮೂಲಕ ಕಟ್ಟಿಕೊಟ್ಟಿರುವ ಹನೂರು ಚೆನ್ನಪ್ಪ ಅವರು ಓರ್ವ ಶ್ರೇಷ್ಠ ಬರಹಗಾರ. ಅವರು ಮೂರು ಕೃತಿಗಳನ್ನು ರಚಿಸಿದ್ದರೂ, ಅವು ನೂರು ಕೃತಿಗಳಿಗೆ ಸಮಾನವಾಗಿವೆ. ಅವರ ಅನ್ನ, ಬೆಲ್ಲದ ದೋಣಿ, ಕಬ್ಬಿಣದ ಕುದುರೆ ಕೃತಿಗಳು ಶ್ರೇಷ್ಠ ಕೃತಿಗಳ ಸಾಲಿನಲ್ಲಿ ನಿಲ್ಲುತ್ತವೆ ಎಂದು ತಿಳಿಸಿದರು.

ಡಾ. ಅಂಬೇಡ್ಕರ್ ಅವರ ಸಮ ಸಮಾಜ ನಿರ್ಮಾಣದ ಕನಸು ಇಂದಿಗೂ ನನಸಾಗಿಲ್ಲ. ದಲಿತರು ಮೇಲ್ವರ್ಗದ ಜನರಿಂದ ಗೌರವ, ಮನ್ನಣೆಯನ್ನು ಪಡೆಯಲು ಕಾಣುವ ಕನಸ್ಸನ್ನು ಹೊತ್ತು ಸಾಗುವ ಬೆಲ್ಲದ ದೋಣಿ ನಾಟಕ ಅಂಬೇಡ್ಕರ್ ಪ್ರಜ್ಞೆಯನ್ನು ಜಾಗೃತಿಗೊಳಿಸುತ್ತದೆ. ಈ ನಾಟಕ ಕರ್ನಾಟಕದಿಂದ ಅಮೇರಿಕಾದ ಕ್ಯಾಲಿಫೋರ್ನಿಯಾ ತಲುಪಿರುವುದು ನಿಜಕ್ಕೂ ಸಂತಸದ ಸಂಗತಿ ಮತ್ತು ದೊಡ್ಡ ಸಾಧನೆ ಎಂದು ಬಣ್ಣಿಸಿದರು. ನಾಟಕದ ರಚನಾಕಾರ ಹನೂರು ಚೆನ್ನಪ್ಪ ಮಾತನಾಡಿ, ನನ್ನ ಸಹಜ ಬರಹಗಳು ಸಹಜವಾಗಿಯೇ ಜನರನ್ನು ತಲುಪಿದಿದೆ. ಇಲ್ಲಿ ಘಟಿಸುತ್ತಿರುವ ಪ್ರತಿಯೊಂದು ಸನ್ನಿವೇಶವೂ ತನ್ನಷ್ಟಕ್ಕೆ ತಾನೇ ನಡೆಯುತ್ತಿದೆಯೇ ವಿನಃ ಇದರಲ್ಲಿ ಯಾರ ಒತ್ತಾಸೆಯೂ ಇಲ್ಲ ಎಂದು ಹೇಳುತ್ತಾ, ತಮ್ಮ ಕೃತಿಗಳ ಸಾರ್ಥಕತೆಗೆ ಶ್ರಮಿಸಿದ ತಮ್ಮ ನಡುವೆ ಇರುವ ಸ್ನೇಹಿತರನ್ನು ಸ್ಮರಿಸಿದರು. ಮಾಧ್ಯಮಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ರಂಗವಾಹಿನಿ ಸಂಸ್ಥೆಯ ಅಧ್ಯಕ್ಷ ಸಿ.ಎಂ. ನರಸಿಂಹಮೂರ್ತಿ, ನಾಟಕದ ಮೂಲ ನಿರ್ದೇಶಕ ರಾಬಿನ್ ಮೊದಲಾದವರು ಹಾಜರಿದ್ದರು.

### ಅಕ್ಟೋಬರ್ 11ಕ್ಕೆ ಪ್ರದರ್ಶನ

**ವಿನಯ್ ಭಾರದ್ವಜ್ ನಿರ್ದೇಶನದಲ್ಲಿ ಪ್ರದರ್ಶನ ಕಾಣುತ್ತಿರುವ ಬೆಲ್ಲದ ದೋಣಿ ನಾಟಕದಲ್ಲಿ ಧನಂಜಯ ಕೆಂಗೆಯ್ಯ, ಮಧು ಕೃಷ್ಣಮೂರ್ತಿ, ರಮ್ಯ ವೆಂಕಟೇಶ್, ರಮ್ಯಾ ಶ್ರೀ ಕೇಶವನ್, ರಶ್ಮಿ ಭಟ್, ಶರತ್ ರಿಗ್ವೇದಿ, ಸ್ನೇಜ ಪ್ರಸಾದ್, ಸುಮಂತ್ ಶಾಂತರಾಂ ಅಭಿನಯಿಸಿದ್ದಾರೆ. ಸಂಗೀತ ಅವಿನಾಶ್ ಪ್ರರಬ್, ಕೇದರ್ ದೇಶಪಾಂಡೆ, ಶ್ರೆಯಾ ರವೀಂದ್ರ, ಬೆಳಕು ಗೌವರ್ ಶೆಟ್, ಸಂಗೀತ ಕೇದರ್ ದೇಶಪಾಂಡೆ, ಪ್ರಚಾರ ಮಾನಸ ಗಿರೀಶ್, ನಿರ್ಮಾಣ ಪ್ರೇಮಾ ಆನಂದ್, ಸಮರ್ಥ್ ಕೆ.ಎನ್, ಕಲಾ ನಿರ್ದೇಶನದ ಹೊಣೆಯನ್ನು ಸುಜಯ್ ರಾಮಯ್ಯ ಅವರದ್ದು.**

> **ಆನೆಯನ್ನು ಪ್ರೀತಿಸುವ ಜನ ಅಸ್ಪೃಶ್ಯರನ್ನು ದ್ವೇಷಿಸುತ್ತಾರೆ. ಈ ದೇಶದಲ್ಲಿ ಪ್ರಾಣಿಗಳಿಗೆ ಸುತ್ತಿರುವ ಮಾನ್ಯತೆ, ಜಾತಿಯ ಕಾರಣಕ್ಕೆ ಮನುಷ್ಯರಿಗೆ ಸಿಗುತ್ತಿಲ್ಲ. ಇಂದಿಗೂ ಜಾತಿಯ ಕಾರಣಕ್ಕೆ ದಲಿತ ಶಾಲಾ ಮಕ್ಕಳಿಗೆ ಅನ್ನ ಹಾಕದ ಘಟನೆ, ಗಣೇಶನ ದೇವಸ್ಥಾನ ಪ್ರವೇಶಿಸಿದಕ್ಕೆ ದಲಿತರ ಮೇಲೆ ಹಲ್ಲೆ ಪ್ರಕರಣ ನಡೆದಿದೆ. ದಲಿತರು ಬೆಲ್ಲದ ದೋಣಿಯ ಪಯಣವನ್ನು ನಿಲ್ಲಿಸಿ, ವೈಚಾರಿಕ ನೆಲೆಯಲ್ಲಿ ಸಾಗಬೇಕು. ಸಂವಿಧಾನ ಮತ್ತು ಅಂಬೇಡ್ಕರ್ ಚಿಂತನೆಗಳು ಮಾತ್ರ ದಲಿತರನ್ನು ವಿಮೋಚನೆಗೊಳಿಸಲು ಸಾಧ್ಯ.**
>
> ▶▶ **ಕೆ.ದೀಪಕ್** ಅಧ್ಯಕ್ಷ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ.

## ಆದಿವಾಸಿಗಳ ಗೃಹಭಾಗ್ಯ ವರದಿಗೆ ಸಿಎಂ ಕಚೇರಿ ಸ್ಪಂದನೆ

# ಮಾಹಿತಿ ಕೇಳಿದ ವಿಶೇಷ ಕರ್ತವ್ಯಾಧಿಕಾರಿ

## ಅಸತ್ಯ ವರದಿ ಸಲ್ಲಿಸುತ್ತಿರುವ ಅಧಿಕಾರಿಗಳು

▶▶ **ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: "ಆದಿವಾಸಿಗಳಿಗೆ ಗೃಹಭಾಗ್ಯ ಮರೀಚಿಕೆ" ಎಂಬ ಶೀರ್ಷಿಕೆಯಡಿ ಪ್ರಕಟಿಸಿದ್ದ ವರ್ತಮಾನ ದಿನಪತ್ರಿಕೆಯ ವರದಿಯು ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿ ಗಮನ ಸೆಳೆದಿದೆ.

ಆದಿವಾಸಿಗಳಿಗೆ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಇತ್ತೀಚೆಗೆ ಮುಖ್ಯಮಂತ್ರಿ ಗೃಹಭಾಗ್ಯ ಯೋಜನೆ ಜಾರಿಗೆ ತಂದಿದ್ದು, ಅರ್ಹರು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು.


ವರ್ತಮಾನ

ಆದಿವಾಸಿಗಳಿಗೆ ಗೃಹಭಾಗ್ಯ ಮರೀಚಿಕೆ

ಒಂದು ಗುಂಟೆ ಹಕ್ಕುಪತ್ರ । ಹಲವು ಕುಟುಂಬಗಳು । ದಾಖಲೆಗಳ ಕೊರತೆ

ಕೊಟ್ಟಿರುವುದು ಒಂದೇ ಗುಂಟೆ ಹಕ್ಕುಪತ್ರ!

epaper.varthaman.in

ಯೋಜನೆಯ ಸದುಪಯೋಗಕ್ಕಾಗಿ ಆಕಾಂಕ್ಷಿಗಳು ಜಾತಿ, ಆದಾಯ ಪ್ರಮಾಣ ಪತ್ರ, ವಸತಿ ನಿರ್ಮಿಸಲು ಉದ್ದೇಶಿಸಿರುವ ಸ್ಥಳದ ದಾಖಲೆಗಳನ್ನು ಲಗತ್ತಿಸುವುದು ಕಡ್ಡಾಯವಾಗಿತ್ತು. ಆದರೆ, ಕಾಡಂಚಿನ, ತಾಲೂಕಿನ ಗಡಿಗಳಲ್ಲಿ ವಾಸಿಸುವ ಡಿ.ಬಿ.ಕುಪ್ಪೆ, ಎನ್.ಬೆಳತ್ತೂರು ಗ್ರಾ.ಪಂನ ಕೆಲ ಹಾಡಿಗಳ ಬಹುತೇಕರಿಗೆ ಈ ದಾಖಲೆಗಳು ಇಲ್ಲದೆ ಯೋಜನೆಯಿಂದ ವಂಚಿತರಾಗುವುದನ್ನು ಮನಗಂಡ ಪತ್ರಿಕೆ ಸೆ.22ರಂದು ವರದಿ ಪ್ರಕಟಿಸಿತ್ತು. ಈ ವರದಿಯನ್ನು ಗಂಭೀರವಾಗಿ ಪರಿಗಣಿಸಿದ ಸಿಎಂ ವಿಶೇಷ ಕರ್ತವ್ಯಾಧಿಕಾರಿ ಡಾ.ಕೆ.ವೈಷ್ಣವಿ ಅವರು, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗೆ ಪತ್ರ ಬರೆದು ಮಾಹಿತಿ ಕೇಳಿದ್ದರು.

**ವರ್ತಮಾನ**
**ವರದಿ**
**ಪರಿಣಾಮ**

### ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ನಾಂದಿ ಹಾಡಿದ ವರದಿ

ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿಗೆ ಪತ್ರ ಮುಖೇನ ಮಾಹಿತಿ ನೀಡಿರುವ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಮುಖ್ಯಮಂತ್ರಿ ಆದಿವಾಸಿ ಗೃಹ ಭಾಗ್ಯ ಯೋಜನೆಯಡಿ ಮನೆ ನಿರ್ಮಾಣ ಮಾಡಲು ಎಚ್.ಡಿ.ಕೋಟೆ, ಸರಗೂರು ತಾಲ್ಲೂಕಿನಲ್ಲಿ ಇಲ್ಲಿಯವರೆಗೆ 1011 ಅರ್ಜಿಗಳು ಸ್ವೀಕೃತಗೊಂಡಿವೆ. ಸದರಿ ಅರ್ಜಿಗಳನ್ನು ತಾ.ಪಂ ಕಾರ್ಯನಿರ್ವಹಣಾಧಿಕಾರಿ ಅಧ್ಯಕ್ಷತೆಯಲ್ಲಿ ಪರಿಶೀಲಿಸಲಾಗುತ್ತಿದೆ. ಅರ್ಹ ಅರ್ಜಿಗಳನ್ನು ಆದ್ಯತೆಯ ಮೇರೆಗೆ ಆಯ್ಕೆ ಮಾಡಲು ಜಿಲ್ಲಾಧಿಕಾರಿ ನೇತೃತ್ವದಲ್ಲಿ ತುರ್ತಾಗಿ ಆಯ್ಕೆ ಪ್ರಕ್ರಿಯೆ ಕೈಗೊಳ್ಳಲಾಗುವುದು. ಹದಿನೈದು ಅರ್ಜಿಗಳಿಗೆ ಜಿಪಿಎಸ್ ನಕ್ಷೆ ತಯಾರಿಸುವುದು ಬಾಕಿಯಿದೆ. ಇಲಾಖೆಯಿಂದ ಆದಿವಾಸಿಗಳಿಗೆ ಕಾಲ, ಕಾಲಕ್ಕೆ ನೀಡಲಾಗುವ ಸವಲತ್ತುಗಳು ತಲುಪುತ್ತಿದ್ದು, ಪತ್ರಿಕೆ ವರದಿ ಸತ್ಯಕ್ಕೆ ದೂರವಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ. "ಆದಿವಾಸಿಗಳಿಗೆ ಮೂಲ ದಾಖಲೆಗಳಿಲ್ಲದ" ಬಗ್ಗೆ ಪತ್ರಿಕೆ ವರದಿ ಮಾಡಿದೆ. ಎಲ್ಲವೂ ಸರಿಯಿದೆ ಎಂಬರ್ಥದಲ್ಲಿ ಪ.ವರ್ಗಗಳ ಕಲ್ಯಾಣಾಧಿಕಾರಿ ಮಾಹಿತಿ ನೀಡಿದ್ದಾರೆ. ಆದರೆ, "ದಾಖಲೆಗಳೇ ಇಲ್ಲದವರಿಗೆ ಮನೆ ಮಂಜೂರು ಮಾಡಿಕೊಡುತ್ತಾರೆಯೇ" ಎಂಬ ಚರ್ಚೆಗೆ ಸಾರ್ವಜನಿಕ ವಲಯದಲ್ಲಿ ನಾಂದಿ ಹಾಡಿದೆ.

> **ಸರ್ಕಾರದ ಯೋಜನೆಗಳ ಮಾಹಿತಿ ನಮಗೆ ಇರುವುದಿಲ್ಲ. ನಮ್ಮ ಬಳಿ ಮೊಬೈಲ್, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಜಾತಿ, ಆದಾಯ ಪ್ರಮಾಣ ಪತ್ರಗಳಿಲ್ಲ. ಅಧಿಕಾರಿಗಳು ನಮ್ಮ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಪರಿಹರಿಸಲು ಮುಂದಾಗುತ್ತಿಲ್ಲ. ಗಿರಿಜನ ಕಲ್ಯಾಣಾಧಿಕಾರಿ ಮಹೇಶ್ ಸೌಜನ್ಯಕ್ಕಾದರೂ ನಮ್ಮ ಹಾಡಿಗೆ ಭೇಟಿ ನೀಡಿಲ್ಲ.**
>
> 
>
> ▶▶ **ಮುಂಜುಳಾ**
> ಗೋಳೂರು ಹಾಡಿ ನಿವಾಸಿ.

> 
>
> **ಜಾತಿ, ಆದಾಯ ಪ್ರಮಾಣಪತ್ರವಿಲ್ಲದ ಆದಿವಾಸಿ ಜನರು ನಮ್ಮ ಕಚೇರಿಗೆ ಭೇಟಿ ನೀಡಿ ಸಂಪರ್ಕಿಸಿದರೆ, ಈ ಬಗ್ಗೆ ನಾನು ತಹಶೀಲ್ದಾರ್ ಅವರಿಗೆ ಒಂದು ಪ್ರಮಾಣಪತ್ರ ಕೊಡುತ್ತೇನೆ. ಅದರ ಆಧಾರದಲ್ಲಿ ಕಂದಾಯ ಅಧಿಕಾರಿಗಳು ಜಾತಿ, ಆದಾಯ ಪ್ರಮಾಣ ನೀಡುವಂತೆ ಕ್ರಮವಹಿಸುತ್ತೇನೆ.**
>
> ▶▶ **-ಮಹೇಶ್** ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ

### ಸತ್ಯ ಮರೆಮಾಚಿ ವರದಿ ನೀಡುತ್ತಿರುವುದೇಕೆ ?

**ದಿನಪತ್ರಿಕೆಗಳ ವರದಿ ಗಮನಿಸುತ್ತಿರುವ ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿ ಡಾ.ಕೆ.ವೈಷ್ಣವಿ ಅವರು ತ್ವರಿತಗತಿಯಲ್ಲಿ ಸ್ಪಂದಿಸಿ, ಪತ್ರ ಮುಖೇನ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಹಾಗೂ ಅನುಪಾಲನಾ ವರದಿ ಕೇಳುತ್ತಿದ್ದಾರೆ. ವಿಷಯದ ವಸ್ತುಸ್ಥಿತಿಯನ್ನು ಪರಿಶೀಲಿಸದೆ ತಕ್ಷಣವೇ ತರಾತುರಿಯಲ್ಲಿ ಉತ್ತರ ನೀಡುತ್ತಿರುವ ಇಲಾಖೆಗಳ ಅಧಿಕಾರಿಗಳು, ಸತ್ಯ ಮರೆಮಾಚಿ ಪ್ರತಿಕ್ರಿಯೆ ನೀಡುತ್ತಿದ್ದು, ತಮ್ಮ ಇಲಾಖೆಗಳ ಅಧಿಕಾರಿಗಳ ತಪ್ಪನ್ನು ಮುಚ್ಚಿಡುತ್ತಿದ್ದಾರೆ. ಇದಕ್ಕೆ ತಾಜಾ ಉದಾಹರಣೆ ಎಂಬಂತೆ ಎಚ್.ಡಿ.ಕೋಟೆ ಡಿಪೋದ ಸುರಕ್ಷತೆಯಿಲ್ಲದ ಸಾರಿಗೆ ಬಸ್ಸುಗಳು ಸಾರ್ವಜನಿಕರ ಪ್ರಾಣಕ್ಕೆ ಎರವಾಗುತ್ತಿರುವ ಬಗ್ಗೆ, ಪತ್ರಿಕೆ ಇತ್ತೀಚೆಗೆ ವರದಿ ಮಾಡಿತ್ತು. ಸಿಎಂ ಕಚೇರಿಯಿಂದ ಮಾಹಿತಿ ಕೇಳಿದ ನಂತರ, ತಮ್ಮ ಅಧೀನ ಹಂತದ ಅಧಿಕಾರಿಗಳನ್ನು ರಕ್ಷಿಸುವ ಉದ್ದೇಶದಿಂದ ಸಾರಿಗೆ ಇಲಾಖೆ ಅಧಿಕಾರಿಗಳು ಮಾರ್ಗದಿಂದ ಬಂದ ಬಸ್ಸುಗಳನ್ನು ಪರಿಶೀಲಿಸಲಾಗಿದ್ದು, ಬಸ್ಸಿನ ಟಯರ್‌ಗಳು, ಕಿಟಕಿ, ತುರ್ತುನಿರ್ಗಮನ, ವಾಹನದ ಸ್ವಚ್ಛತೆ ಎಲ್ಲವೂ ಸುಸ್ಥಿತಿಯಲ್ಲಿವೆ ಎಂದು ಕೆ.ಎಸ್.ಆರ್.ಟಿ.ಸಿ ಜಿಲ್ಲಾ ಹಂತದ ಅಧಿಕಾರಿಗಳು ಅನುಪಾಲನಾ ವರದಿ ಸಲ್ಲಿಸಿದ್ದರು. ಆದರೆ, ಬಸ್ಸುಗಳ ದುಸ್ಥಿತಿಯ ಬಗ್ಗೆ ಛಾಯಾಚಿತ್ರಗಳ ಸಾಕ್ಷ್ಯ ಸಮೇತ ವರದಿಗಾರ ಸುದ್ದಿ ಪ್ರಕಟಿಸಿದ್ದರು. ಇದೀಗ, ಬುಡಕಟ್ಟು ಸಮುದಾಯಗಳಿಗಾಗಿ ಸರ್ಕಾರ ತಂದಿರುವ "ಯೋಜನೆಯೊಂದು ದಾಖಲೆಗಳಿಲ್ಲದೆ ಕೈತಪ್ಪುವ" ಬಗ್ಗೆ ಪತ್ರಿಕೆ ಪ್ರಕಟಿಸಿರುವ ವರದಿಯನ್ನು ಸತ್ಯಕ್ಕೆ ದೂರವಾದ ವರದಿ ಎಂದು ಪ.ವರ್ಗಗಳ ಕಲ್ಯಾಣಾಧಿಕಾರಿ ಉತ್ತರ ನೀಡಿರುವುದು ಹಲವು ಅನುಮಾನಕ್ಕೆ ಕಾರಣವಾಗಿದೆ.**

# ಛಲವಾದಿ ಮಹಾಸಂಘ ಅಸ್ತಿತ್ವಕ್ಕೆ

ಮೈಸೂರು: ರಾಜ್ಯದಾದ್ಯಂತ ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿರುವ ಬಲಗೈ ಸಂಬಂಧಿತ ಸಮುದಾಯಗಳನ್ನು ಗುರುತಿಸಿ, ಎಲ್ಲಾ ಉಪ ಜಾತಿಗಳನ್ನು ಒಂದೇ ಸೂರಿನಡಿ ಸಂಘಟಿಸುವ ಉದ್ದೇಶದಿಂಧ ರಾಜ್ಯ ಛಲವಾದಿ ಸಂಗಮ ಸಂಘಟನೆ ಅಸ್ತಿತ್ವಕ್ಕೆ ತರಲಾಗಿದೆ ಎಂದು ರಾಜ್ಯಾಧ್ಯಕ್ಷ ಡಾ. ನವೀನ್‌ಕುಮಾರ್ ಮನಿಯ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಮುದಾಯಕ್ಕಾಗುವ ಅನ್ಯಾಯದ ವಿರುದ್ಧ ಜಾಗೃತಿ ಮೂಡಿಸಿ ಹಕ್ಕನ್ನು ಪಡೆಯುವ ನಿಟ್ಟಿನಲ್ಲಿ ಕಾರ್ಯಕಕ್ರಮ ರೂಪಿಸುವಂತೆ ಸ್ಥಳೀಯ ವಾಗಿ ರಚಿಸಿರುವ ಸಮಿತಿಗಳು ಕೆಲಸ ಮಾಡುತ್ತವೆ. ಬಹಳಷ್ಟು ವರ್ಷದ ಹಿಂದೆ ಪರಿಶಿಷ್ಟ ಜಾತಿಯ 101 ಸಮುದಾಯದವರು ಸಾಮರಸ್ಯದಿಂದ ಬದುಕುತ್ತಿದ್ದರು. ಆದರೆ, ಒಳ ಮೀಸಲಾತಿ ವಿಷಯ ಬಂದ ಬಳಿಕ ಪರಸ್ಪರ ವೈಮನಸ್ಯ ಹೆಚ್ಚುತ್ತಿರುವುದು ಬೇಸರದ ಸಂಗತಿಯಾಗಿದೆ. ಹೀಗಾಗಿ ಎಲ್ಲರೂ ಒಗ್ಗೂಡಬೇಕಾಗಿದೆ. ಎಂದರು. ಉಪ ಮೇಯರ್ ಶೈಲೇಂದ್ರ, ಇನ್ನಿತರ ಪದಾಧಿಕಾರಿಗಳಾದ ಪಟಾಪಟ್ ಶ್ರೀನಿವಾಸ್, ಪ್ರೊ. ನಾರಾಯಣಸ್ವಾಮಿ, ಡಾ. ರಂಗಸ್ವಾಮಿ, ಹುಯಿಲಾಳು ರಾಮಸ್ವಾಮಿ ಮೊದಲಾದವರು ಇದ್ದರು.



# ಜೆಡಿಎಸ್ ಕಾರ್ಯಕರ್ತರು ಚುನಾವಣೆಗೆ ಸಜ್ಜಾಗಿ

## ನಗರದಲ್ಲಿ ಜಾತ್ಯಾತೀತ ಜನತಾದಳ ಕಾರ್ಯಕರ್ತರು ಮತ್ತು ಮುಖಂಡರ ಸಭೆ



ಚಾಮರಾಜನಗರ: ಮುಂಬರುವ ದಿನಗಳಲ್ಲಿ ತಾ.ಪಂ, ಜಿ.ಪಂ ಹಾಗೂ ಸ್ಥಳೀಯ ಸಂಸ್ಥೆಯ ಚುನಾವಣೆ ಬರುವ ಹಿನ್ನಲೆಯಲ್ಲಿ ಜಾದಳ ಕಾರ್ಯಕರ್ತರು ಸಜ್ಜಾಗಬೇಕು ಎಂದು ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಜಾ ದಳ ಅಧ್ಯಕ್ಷ ಎ.ಎಂ. ಮಲ್ಲಿಕಾರ್ಜುನಸ್ವಾಮಿ(ಆಲೂರುಮಲ್ಲು) ಕರೆ ನೀಡಿದರು.

ನಗರದ ಪ್ರವಾಸಿಮಂದಿರದಲ್ಲಿ ಜಾತ್ಯಾತೀತ ಜನತಾದಳ ಕಾರ್ಯಕರ್ತರು ಮತ್ತು ಮುಖಂಡರ ಸಭೆಯಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸುಮಾರು 20 ವರ್ಷಗಳಿಂದ ಹಿಂದೆ ಚಾಮರಾಜನಗರ ಜಿಲ್ಲೆಯು ಜಾ ದಳ ಭದ್ರಕೋಟೆಯಾಗಿತು. ಇಂದು ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಶಾಸಕರಾದ ಮಂಜುನಾಥ್ ಇದ್ದಾರೆ. ಇನ್ನೂ ಮೂರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆದ್ದು, ಶಾಸಕರು ಇದ್ದಾರೆ. ಆಗಾಗಿ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲದಲ್ಲಿ ಪಕ್ಷ ಸಂಘಟನೆಯಾಗಬೇಕು. ಕೊಳ್ಳೇಗಾಲದಲ್ಲಿ ಪುಟ್ಟಸ್ವಾಮಿ ಅವರು ಪಕ್ಷದ ಸಂಘಟನೆಯಲ್ಲಿ ತೊಡಗಿದ್ದು ಸಂಘಟನೆ ಮಾಡುತ್ತಿದ್ದಾರೆ. ಅದೇ ರೀತಿ ಚಾಮರಾಜನಗರದಲ್ಲೂ ಪಕ್ಷ ಸಂಘಟನೆ ಆಗಬೇಕು ಅದಕ್ಕಾಗಿ ಈಗಿನಿಂದಲ್ಲೇ ಬೂತಮಟ್ಟದಿಂದ ಕಾರ್ಯಕರ್ತರು ಸಂಘಟಿ ತರಾಗಿ ಪಕ್ಷ ಕಟ್ಟುವ ಕೆಲಸ ಮಾಡಬೇಕು ಎಂದರು.

ಸಭೆಯಲ್ಲಿ ಜಾ ದಳ ಸಾಮಾಜಿಕ ಜಾಲತಾಲ ಜಿಲ್ಲಾಧ್ಯಕ್ಷ ದಾಸನಹುಂಡಿ ಸುನಿಲ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಪಿ.ವಿಜಯ್, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಸಾಮಾಜಿಕ ಜಾಲತಾಣದ ಅಧ್ಯಕ್ಷ ಅರಕಲವಾಡಿ ಅಜಯ್, ಹನೂರು ವಿಧಾನಸಭಾ ಕ್ಷೇತ್ರದ ಸಾಮಾಜಿಕ ಜಾಲತಾಣ ಅಧ್ಯಕ್ಷ ದೇವರಾಜು ಎಸ್.ಸತ್ಯಗಾಲ, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಸಾಮಾಜಿಕ ಜಾಲತಾಣ ಅಧ್ಯಕ್ಷ ಚೇತನ್‌ಮೂರ್ತಿ,ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಸಾಮಾಜಿಕ ಜಾಲತಾಣ ಅಧ್ಯಕ್ಷ ಲೋಕೇಶ್, ರಾಜ್ಯ ಕಾರ್ಯದರ್ಶಿ ಹೊಂಗನೂರು ರಾಜಣ್ಣ, ಟೌನ್ ಅಧ್ಯಕ್ಷ ಜಿ.ಎಂ.ಶಂಕರ್, ಎಸ್‌ಟಿ ಘಟಕ ತಾಲೂಕು ಅಧ್ಯಕ್ಷ ಹರದನಹಳ್ಳಿ ರಾಮಚಂದ್ರ, ಪಣ್ಯದಹುಂಡಿರಾಜು, ನಾಗರಾಜು, ಮೇಗಲಹುಂಡಿ ಪಾಪಣ್ಣಿ, ಬ್ಯಾಡಮೂಡ್ಲು ವರದರಾಜು, ಹೆಗ್ಗೋಠಾರಮಂಜು, ಸಿದ್ದಶೆಟ್ಟಿ, ಸುಬ್ಬಣ್ಣ, ಅಮಚವಾಡಿ ಶಿವಕುಮಾರ್ ಇತರರು ಭಾಗವಹಿಸಿದ್ದರು.

# ಅ.6ರಿಂದ ವಿಶೇಷಚೇತನರ ಅನಿರ್ದಿಷ್ಟಾವಧಿ ಮುಷ್ಕರ

ಮೈಸೂರು: ವಿಶೇಷ ಚೇತನರ ಹಲವಾರು ಬೇಡಿಕೆ ಈಡೇರಿಕೆಗೆ ಸಂಬಂಧಿಸಿದಂತೆ ಸಿಎಂ ಡಿ.ಕೆ. ಶಿವಕುಮಾರ್ ತವರು ಜಿಲ್ಲೆ ರಾಮನಗರದ ಗೌಸಿಯಾ ಎಂಜಿನಿಯರಿಂಗ್ ಕಾಲೇಜು ಮುಂಭಾಗ ವಿಶೇಷ ಚೇತನರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಮೈಸೂರಿನ ಸ್ವಾಭಿಮಾನಿ ವಿಶೇಷ ಚೇತನರ ಹಕ್ಕುಗಳ ಹೋರಾಟ ಸಮಿತಿಯಿಂದ ಸುಮಾರು ಸಾವಿರ ಮಂದಿ ಅ. 6 ರಂದು ಪಾಲ್ಗೊಳ್ಳಲಿದ್ದಾರೆ ಎಂದು ಪದಾಧಿಕಾರಿ ದಿಲೀಪ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಬೆಳಗ್ಗೆ 8ಕ್ಕೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಬೈಕ್ ರ?ಯಾಲಿ, ವಿವಿಧ ವಾಹನಗಳ ಮೂಲಕ ಇವರು ತೆರಳಲಿದ್ದಾರೆ. ಮಾರ್ಚ್ ತಿಂಗಳಿನಿಂದ ಬಾಕಿ ಉಳಿಸಿಕೊಂಡಿರುವ ಅಂಗವಿಕಲರ ಮಾಸಾಶನ ಕೂಡಲೇ ಬಿಡುಗಡೆಗೊಳಿಸಬೇಕು. ಮಾಸಾಶನ ಕನಿಷ್ಠ 5 ಸಾವಿರ ರೂ.ಗೆ ಹೆಚ್ಚಿಸಬೇಕು, ರಾಜ್ಯದಲ್ಲಿ ವಿಶೇಷ ಚೇತನರು ಸಂಚರಿಸಲು ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಪ್ರಯಾಣದ ಪಾಸ್ ನೀಡಬೇಕು, ರಾಜಕೀಯ ಮೀಸಲಾತಿ ನೀಡಬೇಕು ಎಂಬಿವೇ ಮೊದಲಾದವು ಬೇಡಿಕೆಗಳಾಗಿವೆ. ಈಗಾಗಲೇ ರಾಜ್ಯದ ವಿವಿಧೆಡೆಯಿಂದ ಒಂದೊಂದು ದಿನ ವಿಶೇಷ ಚೇತನರು ಆಗಮಿಸಿ ಆ ಅನಿರ್ದಿಷ್ಟಾವಧಿ ಧರಣಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಬೇಡಿಕೆ ಈಡೇರುವವರೆಗೂ ಅದು ಮುಂಧುವರಿಯುತ್ತದೆ ಎಂದರು. ಪದಾಧಿಕಾರಿಗಳಾದ ಗಿರೀಶ್, ಶರಣಯ್ಯ, ಶಿಯಾಬುದ್ದೀನ್, ಫೈರೋಜ್ ಪಾಷಾ, ಸಲ್ಮಾ ಇದ್ದರು.

## ಮಾಜಿ ಮಹಾಪೌರ ಶಿವಕುಮಾರ್ ಮಾಹಿತಿ

# ಸೇವಾ ಸಂಕಲ್ಪದಡಿ: 9ರಂದು ಚಿತ್ರಕಲೆ, ಭಾಷಣೆ ಸ್ಪರ್ಧೆ



ಮೈಸೂರು: ಪ್ರಧಾನಿ ನರೇಂದ್ರ ಮೋದಿ ಅವರ ಸುದೀರ್ಘ 25 ವರ್ಷಗಳ ಸೇವೆಯ ಅಂಗವಾಗಿ ದೇಶಾದ್ಯಂತ ನಡೆಯುತ್ತಿರುವ ಸೇವಾ ಸಂಕಲ್ಪ ಅಭಿಯಾನದಡಿ ಮೈಸೂರು ನಗರ ಭಾಗದ ಶಾಲಾ ಮಕ್ಕಳಿಗಾಗಿ ಅ.9ರಂದು ವಿಕಸಿತ ಭಾರತ ವಿಷಯ ಕುರಿತು ಚಿತ್ರಕಲೆ ಮತ್ತು ಭಾಷಣ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಮಾಜಿ ಮಹಾಪೌರ ಶಿವಕುಮಾರ್ ಮಾಹಿತಿ ನೀಡಿದರು.

ನಗರದ ಖಾಸಗಿ ಹೋಟೇಲ್‌ನಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅಭಿಯಾನದಲ್ಲಿ ಸುಮಾರು 25 ಕೋಟಿ ಮಕ್ಕಳು ಚಿತ್ರಕಲೆ ಹಾಗೂ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂಬ ಉದ್ದೇಶವಿದೆ. ದೇಶಾದ್ಯಂತ ಎಲ್ಲಾ ಶಾಲಾ ಕಾಲೇಜುಗಳಲ್ಲಿ ವಿಕಸಿತ ಭಾರತಕ್ಕೆ ಸಂಬಂಧಪಟ್ಟಂತೆ ಹಾಗೂ ವಿಕಸಿತ ಭಾರತ 2047ರ ಭಾರತ ಯಾವ ರೀತಿ ಇರಬೇಕು ಎನ್ನುವ ಮಕ್ಕಳಿನ ಕನಸಿನ ಭಾವನೆಯನ್ನು ವ್ಯಕ್ತಪಡಿಸಲು ಚಿತ್ರಕಲೆ ಹಾಗೂ ಭಾಷಣದ ಮುಖಾಂತರ ಅವಕಾಶ ಮಾಡಿಕೊಡಲಾಗುತ್ತಿದೆ. ಸ್ವಚ್ಛ ಹಾಗೂ ಪ್ಲಾಸ್ಟಿಕ್ ಮುಕ್ತ ಭಾರತವನ್ನು ಮಾಡುವ ಹಾಗೂ ಜಲ ಸಂರಕ್ಷಣೆ ಮಾಡುವ ವಿಚಾರಗಳನ್ನು ಮಕ್ಕಳಿಗೆ ನೀಡಲಾಗುವುದು. ಇಂದು ಭಾರತವನ್ನು ಜಗತ್ತನ್ನು ನೋಡುತ್ತಿದೆ. ನರೇಂದ್ರ ಮೋದಿ ಅವರು ಭಾರತವನ್ನು ಅಭಿವೃದ್ಧಿಯತ್ತ ಕೊಂಡೊಯುತ್ತಿದ್ದಾರೆ. ಯಾವುದೇ ವಿಚಾರ ಬಂದರೂ ಕೂಡ ಜಗತ್ತು ಭಾರತದ ಕಡೆ ತಿರುಗಿ ನೋಡುವ ವ್ಯವಸ್ಥೆ ನಿರ್ಮಾಣವಾಗಿದೆ ಎಂದು ತಿಳಿಸಿದರು.

ಯಾವುದೇ ವಿಚಾರವಿದ್ದರೂ ಕೂಡ ಭಾರತದ ಪ್ರಧಾನಿಯನ್ನೂ ಕೂಡ ಕೇಳಬೇಕು ಎನ್ನುವ ಭಾವನೆಯನ್ನು ಜಗತ್ತಿನ ಎಲ್ಲಾ ದೇಶಗಳಲ್ಲಿ ಮೂಡಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಇಂದು ಭಾರತ ಎಲ್ಲಾ ರೀತಿಯಲ್ಲೂ ಮುಂದಿದೆ. ಭಾರತ ಇಂದು ಆರ್ಥಿಕವಾಗಿ ಭಾರತ 4 ನೇ ಸ್ಥಾನದಲ್ಲಿದ್ದು, ಮುಂದಿನ ದಿನಗಳಲ್ಲಿ 3ನೇ ಸ್ಥಾನಕ್ಕೂ ಏರಲಿದ್ದೇವೆ. ವಿಕಸತಿ ಭಾರತ 2047ಕ್ಕೆ ಭಾರತ ಆರ್ಥಿಕವಾಗಿ ಮೊದಲ ಸ್ಥಾನದಲ್ಲಿರಬೇಕು ಎಂಬ ಆಶಯ ಮುಂದಿನ ದಿನಗಳಲ್ಲಿ ನೆರವೇರುವ ನಿಟ್ಟಿನಲ್ಲಿ ದೇಶ ಮುನ್ನಡೆಯುತ್ತಿದೆ. ಭಾಷಣ ಸ್ಪರ್ಧೆಯಲ್ಲಿ ಮಕ್ಕಳು ಪ್ರಧಾನಿ ನರೇಂದ್ರ ಮೋದಿ ಅವರು 25 ವರ್ಷಗಳಲ್ಲಿ ಯಾವ ಯಾವ ಕೆಲಸಗಳನ್ನು ಮಾಡಿದ್ದಾರೆ ಎಂದು ಹೇಳಲಿದ್ದಾರೆ. ರಕ್ಷಣಾ ವ್ಯವಸ್ಥೆಯಲ್ಲಿ ಇಂದು ಭಾರತ ಮುಂದೆ ಇದೆ. ರಕ್ಷಣಾ ಉಪಕರಣಗಳನ್ನು ಭಾರತವೇ ಸ್ವಾವಲಂಬಿಯಾಗಿ ಆತ್ಮನಿರ್ಭರ ಯೋಜನೆಯಡಿ ತಯಾರಿಸಿ ಅದನ್ನು ಹೊರ ದೇಶಗಳಿಗೂ ಕೂಡ ರಫ್ತು ಮಾಡುವ ಕೆಲಸವನ್ನೂ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಬುಲೆಟ್ ಟ್ರೈನ್ ಎಂದರೆ ಕೇವಲ ಮುಂದುವರೆದ ರಾಷ್ಟ್ರಗಳೇ ನೆನಪಾಗುತ್ತಿತ್ತು. ಮುಂದಿನ ವರ್ಷ ಭಾರತದಲ್ಲಿ ಬುಲೆಟ್ ಟ್ರೈನ್ ಪ್ರಯಾಣ ಮಾಡಲಿದೆ. ಪ್ರಧಾನಿ ಮೋದಿ ಅವರ ಸೇವಾವಧಿಯಲ್ಲಿ ಭಾರತ ಅತ್ಯಂತ ಶ್ರೇಷ್ಠ ಉನ್ನತ ರಾಷ್ಟ್ರವಾಗಿ ಹೊರಹೊಮ್ಮುತ್ತಿರುವುದನ್ನು ನಾವು ನೋಡುತ್ತಿದ್ದೇವೆ ಎಂದರು. ಸಂಸದ ಯದುವೀರ್ ಒಡೆಯರ್ ಅವರು ಭಾಗವಹಿಸುತ್ತಿದ್ದು, ಸೇವಾ ಸಂಕಲ್ಪ ಅಭಿಯಾನದ ರಾಜ್ಯ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು. ನಗರಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಬಿ.ವಿ.ಮಂಜುನಾಥ್, ವೇದಾವತಿ, ವಿಶ್ವೇಶ್ವರಯ್ಯ ವಾಣೀಶ್ ಕುಮಾರ್, ಜೋಗಿ ಮಂಜು, ಶ್ರೀಕಂಠ ಸ್ವಾಮಿ ಹಾಗೂ ವೀರಭದ್ರ ಉಪಸ್ಥಿತರಿದ್ದರು.

# ಮನ್ಮುಲ್ ಅಕ್ರಮಗಳ ತನಿಖೆಗೆ ಸಿಬಿಐ/ಇಡಿ ಆಗ್ರಹ

## ಬಗರ್‌ಹುಕುಂ ಸಾಗುವಳಿ ಅಕ್ರಮದ ಸಮಗ್ರ ತನಿಖೆಗೆ ಜವರೇಗೌಡ ಒತ್ತಾಯ



**ಮಂಡ್ಯ:** ಜಿಲ್ಲಾ ಹಾಲು ಒಕ್ಕೂಟ (ಮನ್ಮುಲ್) ಮತ್ತು ಕೆಎಂಎಫ್‌ನ ರಕ್ಷಣೆಗೆ ಒಕ್ಕೂಟದಲ್ಲಿ ನಡೆದಿರುವ ಅಕ್ರಮಗಳ ಕುರಿತು ಸಿಬಿಐ/ಇಡಿ ತನಿಖೆ ನಡೆಸಬೇಕು ಎಂದು ಮನ್ಮುಲ್ ಮಾಜಿ ಅಧ್ಯಕ್ಷ ಜವರೇಗೌಡ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2014 ರಿಂದೀಚೆಗೆ ಮನ್ಮುಲ್ ಒಕ್ಕೂಟವು ಸಂಪೂರ್ಣವಾಗಿ ಅಧೋಗತಿಗೆ ತಲುಪುತ್ತಿದೆ. ಹಾಲಿಗೆ ನೀರು ಬೆರೆಸುವ ಹಗರಣವನ್ನು ಅಧಿಕಾರಿಗಳೊಂದಿಗೆ ಸೇರಿ ಹಿಡಿದ ನಂತರವೂ, ಸಿಒಡಿ ತನಿಖೆಯಲ್ಲಿ ಚಾಲಕರು ಮತ್ತು ಕ್ಲೀನರ್‌ಗಳನ್ನು ಹೊರತುಪಡಿಸಿ ಉನ್ನತ ಮಟ್ಟದವರಿಗೆ ಕ್ಲೀನ್ ಚಿಟ್ ನೀಡಲಾಗಿದೆ. ನೇಮಕಾತಿ ಹಗರಣದಲ್ಲಿ ಎಸ್‌ಎಸ್‌ಎಲ್‌ಸಿ ಫೇಲ್ ಆದವರಿಗೆ ಐಟಿಐ ನಕಲಿ ಪ್ರಮಾಣಪತ್ರ ನೀಡಿಕ ಕೆಲಸ ನೀಡಲಾಗಿದೆ. ಮೆಗಾ ಡೈರಿ ನಿರ್ಮಾಣದಲ್ಲಿ ಸುಮಾರು 100 ಕೋಟಿಗೂ ಅಧಿಕ ವೆಚ್ಚದ ಪೈಕಿ, ನಕಲಿ ಕಂಪನಿಗೆ ಆದೇಶ ನೀಡಿ ಹಗರಣ ನಡೆಸಲಾಗಿತ್ತು. ಇದರ ವಿರುದ್ಧದ ಹೋರಾಟದಿಂದ 72 ಕೋಟಿ ರೂ. ವಸೂಲಿಗೆ ಆಡಳಿತ ಮಂಡಳಿಯಿಂದ ಆದೇಶವಾಗಿತ್ತು. 72 ಕೋಟಿ ರೂ. ಹಣವನ್ನು ವಸೂಲಿ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ ಇಂದಿನ ಸರ್ಕಾರ ಹಾಗೂ ಆಡಳಿತ ಮಂಡಳಿ ಇದೆ ಎಂದರು.

ಮನ್ಮುಲ್ ರಕ್ಷಣೆಗೆ ಪಕ್ಷಾತೀತವಾಗಿ ಎಲ್ಲಾ ನಾಯಕರು, ರೈತರು ಹಾಗೂ ಸಂಘಟನೆಗಳು ಒಂದಾಗಬೇಕು. ಮನ್ಮುಲ್‌ನಲ್ಲಿ ನಡೆದಿರುವ ಸರಣಿ ಅಕ್ರಮ ಹಾಗೂ ಹಗರಣಗಳ ಕುರಿತು ಸಿಬಿಐ ಅಥವಾ ಈಡಿ ಮೂಲಕ ಸಮಗ್ರ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

**ಬಗರ್‌ಹುಕುಂ ಸಾಗುವಳಿ ಅಕ್ರಮ:** ನಂತರ ಬಗರ್‌ಹುಕುಂ ಸಾಗುವಳಿ ಅಕ್ರಮದ ವಿಚಾರ ಪ್ರಸ್ತಾಪಿಸಿದ ಅವರು, ನಾಗಮಂಗಲ ತಾಲೂಕಿನಲ್ಲಿ ಸಾವಿರಾರು ಪ್ರಕರಣಗಳಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದರು. ಬಗರ್‌ಹುಕುಂ ಸಾಗುವಳಿ ಅಧಿಕಾರಿಗಳಿಗೆ ಹುಲ್ಲುಗಾವಲೋ ಅಥವಾ ರಾಜಕಾರಣಿಗಳಿಗೆ ಹುಲ್ಲುಗಾವಲೋ ಗೊತ್ತಿಲ್ಲ, ತಾವೇ ಇದರ ಸಂತ್ರಸ್ತರು ಎಂದು ಹೇಳಿಕೊಂಡರು.1984–85ರಲ್ಲಿ ಕಿಮ್ಮತ್ತು ಕಟ್ಟಿಸಿ ಆರ್‌ಟಿಸಿ ಮಾಡಿಸಿದ್ದ ತಮ್ಮ 12 ಎಕರೆ 14 ಗುಂಟೆ ಜಮೀನಿನ ಫೈಲ್ 2019ರ ನಂತರ ಲಪಟಾಯಿಸಲಾಗಿದೆ ಎಂದು ಆರೋಪಿಸಿದರು.

ಅಂದಿನ ಶಾಸಕ ಸುರೇಶ್ ಗೌಡ, ತಹಸೀಲ್ದಾರ್, ಎಸಿ, ಡಿಸಿ ಮೂಲಕ ರಾಜ್ಯಪಾಲರವರೆಗೆ ಅರ್ಜಿ ಸಲ್ಲಿಸಿದರೂ 'ಫೈಲ್ ಲಭ್ಯವಿಲ್ಲ' ಎಂದು ಅರ್ಜಿಯನ್ನು ವಿಲೇವಾರಿ ಮಾಡಲಾಗಿದೆ ಎಂದು ದೂರಿದರು.ಲೋಕಾಯುಕ್ತರಿಗೆ ದೂರು ಸಲ್ಲಿಸಿದ ಬಳಿಕ 'ಸದರಿ ಜಮೀನು ಖರಾಬು ಜಮೀನಾಗಿರುವ ಕಾರಣ' ಎಂದು ಎಂಡಾರ್ಸ್‌ಮೆಂಟ್ ನೀಡಲಾಗಿದೆ. ಆದರೆ ಆರ್‌ಟಿಸಿಯಲ್ಲಿ ಕೇವಲ 36 ಗುಂಟೆ ಮಾತ್ರ ಖರಾಬು ಇದೆ. ಎಸಿ ಕೋರ್ಟ್‌ನಲ್ಲಿ ತಮ್ಮ ಹೆಸರಿನಲ್ಲಿ ಭೋಗಸ್ ಪ್ರೊಸೀಡಿಂಗ್ಸ್ ಸೃಷ್ಟಿಸಲಾಗಿದೆ ಎಂದು ಆರೋಪಿಸಿದ ಅವರು, ದಾಖಲೆಗಳನ್ನು ಲೋಕಾಯುಕ್ತರಿಗೆ ಸಲ್ಲಿಸಿದ್ದು, ಸಮಗ್ರ ತನಿಖೆಗಾಗಿ ಹೈಕೋರ್ಟ್‌ನಲ್ಲಿ ಪಿಐಎಲ್ ಹಾಕಬೇಕು ಎಂದು ಒತ್ತಾಯಿಸಿದರು.

ಮಾಜಿ ಶಾಸಕ ಸುರೇಶ್ ಗೌಡ ಮೂರೂವರೆ ವರ್ಷಗಳ ನಂತರ ಪ್ರತಿಭಟನೆ ನಡೆಸುತ್ತಿರುವುದು ರಾಜಕೀಯ ಉದ್ದೇಶದ್ದಾಗಿದೆ ಎಂದು ಟೀಕಿಸಿದ ಅವರು, ರೈತರನ್ನು ಪಾರ್ಟಿ ಬಾವುಟ ಹಿಡಿದು ಹಾಳುಮಾಡದೆ ಸಮಸ್ಯೆಗಳನ್ನು ಕುಳಿತು ಚರ್ಚಿಸಿ ಬಗೆಹರಿಸಬೇಕು ಎಂದು ಮನವಿ ಮಾಡಿದರು.

ನಂತರ ಮಾತನಾಡಿದ ಎಪಿಎಂಸಿ ಅಧ್ಯಕ್ಷ ಬಿ.ಎಂ. ಪ್ರಕಾಶ್, ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಭಾರಿ ನೀರಾವರಿ ಸಚಿವ ಚಲುವರಾಯಸ್ವಾಮಿ ವಿರುದ್ಧ ಮಾಜಿ ಶಾಸಕ ಸುರೇಶ್ ಗೌಡ ಏಕವಚನದಲ್ಲಿ ಅವಹೇಳನಕಾರಿಯಾಗಿ ಮಾತನಾಡಿರುವುದನ್ನು ಖಂಡಿಸಿದರು.

ಚುನಾವಣೆ ಸಮೀಪಿಸುತ್ತಿರುವಾಗ ವೈಯಕ್ತಿಕ ತೇಜೋವಧೆ ಮಾಡುವುದು ಸರಿಯಲ್ಲ. ಅಭಿವೃದ್ಧಿ ಕುರಿತು ಚರ್ಚಿಸಿ ಸಲಹೆ ನೀಡಲಿ ಎಂದು ಸಲಹೆ ನೀಡಿದ ಅವರು, ನಾಲಿಗೆ ಸರಿಯಾಗಿದ್ದರೆ ಎಲ್ಲೆಡೆ ಗೌರವ ಸಿಗುತ್ತದೆ ಎಂದು ಹೇಳಿದರು.

ಗೋಷ್ಠಿಯಲ್ಲಿ ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಕಂಬದಹಳ್ಳಿ ಪುಟ್ಟಸ್ವಾಮಿ ಉಪಸ್ಥಿತರಿದ್ದರು.

# ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳಿ



**ಚಾಮರಾಜನಗರ:** ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಹೆಚ್ಚಿನ ಗಮನಹರಿಸಿ, ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳಿ ಎಂದು ಪಿಎಂಶ್ರೀ ಜವಹರ ನವೋದಯ ವಿದ್ಯಾಲಯದ ಉಪ ಪ್ರಾಂಶುಪಾಲ ರೆಹಮಾನ್ ತಿಳಿಸಿದರು.

ಹೊನಲು ಅಸೋಸಿಯೇಷನ್ನ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಉತ್ತಮ ಆರೋಗ್ಯ, ಮನಸ್ಸು ಹೊಂದಿದರೆ, ಉತ್ತಮವಾದ ಸಮಾಜಸೇವೆ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ಎಲ್ಲರೂ ಕೂಡಾ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಎಂದರು.

ಅಲುಮ್ನಿ 24ನೇ ಬ್ಯಾಚ್ನ ವಿದ್ಯಾರ್ಥಿಗಳು ಉತ್ತಮವಾದ ಕಾರ್ಯವನ್ನು ಮಾಡುತ್ತಿದ್ದಾರೆ. ಇದರಿಂದ ಪ್ರಭಾವಿತರಾಗಿ ನೀವೂ ಕೂಡಾ ಮುಂದಿನ ದಿನಗಳಲ್ಲಿ ಇಂತಹ ಸಮಾಜಮುಖಿ ಕಾರ್ಯಗಳನ್ನು ಮಾಡುವ ಮೂಲಕ ನೊಂದವರಿಗೆ ನೆರವಾಗಬೇಕು ಎಂದರು.

ಬಳ್ಳಾರಿ ನವೋದಯದ ಹಳೆಯ ವಿದ್ಯಾರ್ಥಿ ಹಾಗೂ ಸೇನೆಯ ನಿವೃತ್ತ ಸುಬೇದಾರ್ ಪ್ರಸಾದ್ ಜಿ.ವಿ. ಮಾತನಾಡಿ, ಪ್ರತಿಯೊಬ್ಬರೂ ಕೂಡಾ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ನಿಮ್ಮ ದೇಹ ಆರೋಗ್ಯವಾಗಿದ್ದರೆ, ನಿಮ್ಮ ಮನಸ್ಸು ಆರೋಗ್ಯವಾಗಿರುತ್ತದೆ. ನಿಮ್ಮ ಮನಸ್ಸು, ಬುದ್ಧಿ ಆರೋಗ್ಯವಾಗಿದ್ದರೆ, ನೀವು ಅತ್ಯುತ್ತಮ ಸಾಧನೆ ಮಾಡಲು ಸಹಕಾರಿಯಾಗುತ್ತದೆ ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸಿ ಎಂದರು.

ಹೊನಲು ಅಸೋಸಿಯೇಷನ್ ಅಧ್ಯಕ್ಷ ಡಾ.ಶಿವಕುಮಾರ್ ಮಾತನಾಡಿ, ಉತ್ತಮ ಆಹಾರವನ್ನು ಸೇವಿಸುವುದರ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಿ, ಇದರೊಂದಿಗೆ ಯೋಗ, ವ್ಯಾಯಾಮ ಸೇರಿದಂತೆ ಇನ್ನಿತರ ದೈಹಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ದೇಹವನ್ನು ಸದೃಢವಾಗಿಟ್ಟುಕೊಳ್ಳಿ ಎಂದರು.

ಪ್ರತಿವರ್ಷದಂತೆ ಈ ವರ್ಷವೂ ಕೂಡಾ ಆರೋಗ್ಯ ತಪಾಸಣೆ ಶಿಬಿರವನ್ನು ಹೊನಲು ಅಸೋಸಿಯೇಷನ್ (ಹೊಂಡರಬಾಳು ನವೋದಯ ಅಲುಮ್ನಿ) ವತಿಯಿಂದ ಆಯೋಜಿಸಲಾಗಿದೆ.

ನವೋದಯ ವಿದ್ಯಾಲಯದ 24ನೇ ಬ್ಯಾಚ್ನ ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರ ವತಿಯಿಂದ ಪ್ರತಿ ವರ್ಷವೂ ಕೂಡಾ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದೇವೆ. ಈ ಬಾರಿಯೂ ಕೂಡಾ ಆಯೋಜಿಸಿರುವ ಈ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ದೊರೆತಿದೆ ಎಂದ ಅವರು, ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಿಮ್ಸ್ನ ವೈದ್ಯ ತಂಡದವರಿಗೆ ಹಾಗೂ ಜವಹರ ನವೋದಯ ವಿದ್ಯಾಲಯದ ಎಲ್ಲಾ ಶಿಕ್ಷಕ ಸಿಬ್ಬಂದಿವರ್ಗದವರಿಗೆ ದನ್ಯವಾದಗಳನ್ನು ತಿಳಿಸಿದರು.

ಆರೋಗ್ಯ ತಪಾಸಣಾ ಶಿಬಿರದಲ್ಲಿ ವಿದ್ಯಾರ್ಥಿಗಳು, ಜವಹರ ನವೋದಯ ವಿದ್ಯಾಲಯದ ಬೋಧಕ ಮತ್ತು ಬೋಧಕೇತರ ವರ್ಗ ಹಾಗೂ ಸೋಲಿಗ ಸಮುದಾಯದ ಶಾಲೆ ಹಾಗೂ ಸಮುದಾಯದವರು ಸೇರಿದಂತೆ 500 ಹೆಚ್ಚು ಮಂದಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಹೊನಲು ಅಸೋಸಿಯೇಷನ್ನ ಕಾರ್ಯದರ್ಶಿ ಹಾಗೂ ಕೈಗಾರಿಕೋದ್ಯಮಿ ಅರ್ಚನಾ ಎಸ್.ಎನ್., ಸಿಮ್ಸ್ನ ಇಎನ್ಟಿ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಡಾ.ದಿವಾಕರ್, ಆರ್ಥೋ ವಿಭಾಗದ ಅಸಿಸ್ಟೆಂಟ್ ಪ್ರೊ. ಡಾ.ಹೇಮಂತ್, 6ನೇ ಬ್ಯಾಚ್ನ ಹಳೆಯ ವಿದ್ಯಾರ್ಥಿ ಡಾ.ಮಂಜು ಭಾರ್ಗವ್ರೆಡ್ಡಿ, ಕ್ಲಿನಿಕ್ ಹೆಡ್ ನರ್ಸ್ ವಾಸಂತಿ, ಸಿಮ್ಸ್ನ ವೈದ್ಯಕೀಯ ತಂಡ ಹಾಗೂ ನವೋದಯ ಶಾಲೆಯ 24ನೇ ಬ್ಯಾಚ್ನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕೇಂದ್ರ ತಂಡದಿಂದ ಬರ ವಾಸ್ತವ ಅಧ್ಯಯನ



**ಮೈಸೂರು:** ಕೇಂದ್ರ ಸರ್ಕಾರದ ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯ ಉಪ ಆಯುಕ್ತ ಸುಧಾಮ್ ಬೇಗ್, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಉಪ ಸಲಹೆಗಾರ ಆಶಿಶ್ ಪಾಂಡೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧೀನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಭಾರತ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಮಹಾಲನೋಬಿಸ್ ರಾಷ್ಟ್ರೀಯ ಬೆಳೆ ಮುನ್ಸೂಚನೆ ಕೇಂದ್ರದ ಉಪನಿರ್ದೇಶಕ ಕರಣ್ ಚೌಧರಿ ತಂಡ ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕಿನ ಗೇರ್ ದಡ ಗ್ರಾಮಕ್ಕೆ ಹಾಗೂ ಅರಕೆರೆ ಗ್ರಾಮಕ್ಕೆ ಭೇಟಿ ನೀಡಿ ಬರ ಪರಿಶೀಲನೆಯ ಅಧ್ಯಯನ ನಡೆಸಿದರು.

ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ ಸೇರಿ ಅಧಿಕಾರಿಗಳ ತಂಡ ಮಳೆಯ ಕೊರತೆಯಿಂದ ಬೆಳೆಗಳಿಗೆ ಉಂಟಾಗಿರುವ ಹಾನಿ, ಬರಿದಾಗಿರುವ ಕೆರೆಗಳು, ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಅಧಿಕಾರಿಗಳ ತಂಡಕ್ಕೆ ಮಾಹಿತಿ ನೀಡಿದರು. ಕೇಂದ್ರದ ಅಧಿಕಾರಿಗಳ ತಂಡ ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರ ಗ್ರಾಮಸ್ಥರೊಂದಿಗೆ ಮಾತನಾಡಿ ಬರ ಪರಿಸ್ಥಿತಿ ಕುರಿತು ಮಾಹಿತಿ ಸಂಗ್ರಹಿಸಿದರು. ಗೇರ್ ದಡ ಗ್ರಾಮದಲ್ಲಿ ಹೊಗೆಸೊಪ್ಪು ಬೆಳೆ ಹಾಗೂ ಅರಕೆರೆ ಗ್ರಾಮದಲ್ಲಿ ರಾಗಿ ಬೆಳೆ ಹಾನಿಯ ಬಗ್ಗೆ ಕೃಷಿ ಇಲಾಖೆ ಅಧಿಕಾರಿಗಳು ವಿವರಿಸಿದರು.



# ಕನ್ನಡ ರಾಜ್ಯೋತ್ಸವಕ್ಕೆ 100 ಕವನಗಳ ಸ್ಮರಣ ಸಂಚಿಕೆಗೆ ಕವನ ಆಹ್ವಾನ



**ಮಂಡ್ಯ:** ಜೈ ಕರ್ನಾಟಕ ಪರಿಷತ್ ವತಿಯಿಂದ ನವೆಂಬರ್ ಕನ್ನಡ ರಾಜ್ಯೋತ್ಸವದ ಅಂಗವಾಗಿ 100 ಕವನಗಳ ಸ್ಮರಣ ಸಂಚಿಕೆ ಹೊರತರಲಾಗುವುದು ಎಂದು ಪರಿಷತ್ ರಾಜ್ಯಾಧ್ಯಕ್ಷ ಎಸ್. ನಾರಾಯಣ್ ತಿಳಿಸಿದರು.

ನಗರದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೈ ಕರ್ನಾಟಕ ಪರಿಷತ್ ಮತ್ತು ತ್ರಿವರ್ಣ ಫೌಂಡೇಶನ್ ಜಂಟಿಯಾಗಿ ಈ ಸಂಚಿಕೆಯನ್ನು ರೂಪಿಸುತ್ತಿವೆ. ಮಂಡ್ಯ ಜಿಲ್ಲೆಯ ಕವಿಗಳು ಜಲ, ನೆಲ, ನುಡಿ, ಸಾಹಿತ್ಯ, ಪರಿಸರ, ಕ್ರೀಡೆ ಸೇರಿದಂತೆ ಯಾವುದೇ ವಿಷಯದ ಕುರಿತು 20 ಸಾಲುಗಳ ಕವನವನ್ನು ಈ ತಿಂಗಳ 20ರೊಳಗೆ ಕಳುಹಿಸಬೇಕು. ಬಂದ ಕವನಗಳಿಂದ ಪ್ರಬುದ್ಧ ಸಾಹಿತಿಗಳ ಮೂಲಕ 100 ಕವನಗಳನ್ನು ಆಯ್ಕೆ ಮಾಡಿ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಆಯ್ಕೆಯಾದ ಕವಿಗಳಿಗೆ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪುಸ್ತಕ, ಗೌರವ ಪ್ರಶಸ್ತಿ, ಪ್ರಮಾಣಪತ್ರ ಮತ್ತು ಸ್ಮರಣಿಕೆ ನೀಡಿ ಗೌರವಿಸಲಾಗುವುದು ಎಂದು ವಿವರಿಸಿದರು.

ಕಳೆದ ಸೆ.29ರಂದು ಮಂಡ್ಯದ ಗಾಂಧಿ ಭವನದಲ್ಲಿ ನಡೆದ 'ಸಾಹಿತ್ಯ ಸಂಭ್ರಮ' ಕಾರ್ಯಕ್ರಮ ಯಶಸ್ವಿಯಾಗಿದ್ದಕ್ಕೆ ಕೃತಜ್ಞತೆ ಸಲ್ಲಿಸಿದ ಅವರು, ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಕೆಂಗೇರಿ ಮಠದ ನೇಕಾರರ ಮಹಾಸಂಸ್ಥಾನ ಮಠದ ಪರಮಪೂಜ್ಯ ಶ್ರೀ ಚನ್ನಬಸವ ಸ್ವಾಮೀಜಿ ಅವರಿಗೆ ಸಾಷ್ಟಾಂಗ ನಮಸ್ಕಾರ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ರೈತರು, ಕಲಾ ಸಂಘಟನೆಗಳು, ಸಾಹಿತಿಗಳು, ಪರಿಸರ ಪ್ರೇಮಿಗಳು, ಪುಸ್ತಕ ಪ್ರೇಮಿಗಳು ಹಾಗೂ ಸಹಕರಿಸಿದ ಪರಿಷತ್ತಿನ ಪದಾಧಿಕಾರಿಗಳು ಮತ್ತು ಮಾಧ್ಯಮದವರಿಗೆ ಧನ್ಯವಾದ ಅರ್ಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪರಿಷತ್ ಉಪಾಧ್ಯಕ್ಷ ಜೆ. ಬಸವರಾಜು, ಖಜಾಂಚಿ ಕೆಂಪೇಗೌಡ, ಸಹಕಾರ್ಯದರ್ಶಿಗಳಾದ ಎಂ. ಕುಮಾರಸ್ವಾಮಿ, ರಾಜೇಶ್, ಜಿ.ಟಿ. ಕೃಷ್ಣಪ್ಪ ಸೇರಿದಂತೆ ಶಾಖಾಧ್ಯಕ್ಷ ಎಂ. ಪುಟ್ಟಸ್ವಾಮಿ, ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

# ದರ್ಶನ್ ಪುಟ್ಟಣ್ಣಯ್ಯ ವಿರುದ್ಧದ ಅಪಪ್ರಚಾರ ಸತ್ಯಕ್ಕೆ ದೂರವಾದದ್ದು



**ಮಂಡ್ಯ:** ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ವಿರುದ್ಧ 18 ಬಾರಿ ಅಮೆರಿಕಕ್ಕೆ ಹೋಗಿದ್ದಾರೆ ಎಂದು ಅಪಪ್ರಚಾರ ಮಾಡಲಾಗುತ್ತಿದ್ದು, ಇದು ಸತ್ಯಕ್ಕೆ ದೂರವಾದ ವಿಚಾರ ಎಂದು ಖಂಡಿಸಿದರು. ಅವರ ಕುಟುಂಬ ಅಮೆರಿಕದಲ್ಲಿ ನೆಲೆಸಿದ್ದು, ಪತ್ನಿಯ ದೀರ್ಘಕಾಲದ ಅನಾರೋಗ್ಯ ಹಾಗೂ ತಾಯಿಯ ಆರೋಗ್ಯದ ಕಾರಣಕ್ಕೆ ಹೋಗುತ್ತಾರೆ. ಇದನ್ನು ರಾಜಕಾರಣಕ್ಕೆ ಬಳಸಿಕೊಳ್ಳುವುದು ನಾಚಿಕೆಗೇಡು ಎಂದು ಕರ್ನಾಟಕ ಶೋಷಿತ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ರಾಜೇಂದ್ರ ಸಿಂಗ್ ಬಾಬು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಶಾಸಕರು ಎಂಎಲ್‌ಎ ಎಂಬ ಅಹಂಕಾರವಿಲ್ಲದೆ ಸಾಮಾನ್ಯರಂತೆ ಕ್ಷೇತ್ರದಲ್ಲಿ ಪ್ರವಾಸ ಮಾಡಿ ಜನರ ಕಷ್ಟ–ಸುಖ ಆಲಿಸುತ್ತಾರೆ. ರಾಷ್ಟ್ರೀಯ–ಅಂತರಾಷ್ಟ್ರೀಯ ಸಂಸ್ಥೆಗಳ ಸಹಕಾರದೊಂದಿಗೆ ರೈತರ ಸಬಲೀಕರಣಕ್ಕಾಗಿ ಪಾಂಡವಪುರದಲ್ಲಿ ರೈತ ಹಬ್ಬ, ಮಹಿಳೆಯರಿಗೆ ಗುಡಿಕೈಗಾರಿಕೆ–ಸ್ವಯಂ ಉದ್ಯೋಗ ತರಬೇತಿ, ಮನೆ ಬಾಗಿಲಿಗೆ ಸರ್ಕಾರಿ ಸೌಲಭ್ಯ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದು ಹೇಳಿದರು.

ಕ್ಷೇತ್ರದ ಅಭಿವೃದ್ಧಿ ವಿವರಿಸಿದ ಅವರು, ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು, ರಸ್ತೆ–ಚರಂಡಿ ಅಭಿವೃದ್ಧಿ, 36 ಹಳ್ಳಿಗಳಿಗೆ ಗ್ರಾಮೀಣ ಅಭಿವೃದ್ಧಿ ಯೋಜನೆ, 22 ಕೋಟಿ ರೂ. ರಸ್ತೆ ಕಾಮಗಾರಿ, 6 ಕೋಟಿ ರೂ. ವೆಚ್ಚದಲ್ಲಿ ವಿದ್ಯುತ್ ಪ್ರಸರಣ ಉಪಕೇಂದ್ರ, ಲೋಡ್‌ಶೆಡ್ಡಿಂಗ್ ಸಮಸ್ಯೆಗೆ ಪರಿಹಾರ, ಹುಚ್ಚೇಗೌಡನ ಕೊಪ್ಪಲು ಗ್ರಾಮಗಳಿಗೆ ಹಕ್ಕುಪತ್ರ ವಿತರಣೆ, ಮಲ್ಲಿಗೆರೆ ಕೆರೆಕಟ್ಟೆಗಳ ತುಂಬುವಿಕೆ ಕೆಲಸ ಮಾಡಲಾಗಿದೆ ಎಂದರು.

ಇದಲ್ಲದೆ ವೃದ್ಧರಿಗೆ ಆರೋಗ್ಯ ಶಿಬಿರ, 800 ಕಾರ್ಡ್‌ಗಳ ವಿತರಣೆ, 3000ಕ್ಕೂ ಹೆಚ್ಚು ಜನರಿಗೆ ತಪಾಸಣೆ, 3000 ನಿವೇಶನ ರಹಿತರಿಗೆ ಸರ್ಕಾರಿ ಭೂಮಿ ಗುರುತಿಸುವಿಕೆ, ರೈತರಿಗೆ 155 ಕಟಾವು ಯಂತ್ರಗಳ ವಿತರಣೆ, ಕೆರೆ ಏತ ನೀರಾವರಿಗೆ 29 ಕೋಟಿ ರೂ. ಸೇರಿದಂತೆ ಕೋಟ್ಯಂತರ ರೂ. ಅನುದಾನದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಇಂತಹ ಜನಪರ ಕೆಲಸ ಮಾಡಿದವರ ವಿರುದ್ಧ ಸಹಿಸದೆ ಅಪಪ್ರಚಾರ ಮಾಡಲಾಗುತ್ತಿದೆ. ಟೀಕಿಸುವವರು ಬಂದು ಕ್ಷೇತ್ರದ ಅಭಿವೃದ್ಧಿಯನ್ನು ನೋಡಲಿ ಎಂದು ಸವಾಲು ಹಾಕಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಮಂಜುನಾಥ್, ಟಿಎಪಿಸಿಎಂಎಸ್ ನಿರ್ದೇಶಕ ಹಾಳಪ್ಪ, ಹುಳೇನಹಳ್ಳಿ ಮುಖಂಡ ಸುಚೇಂದ್ರ, ಯುವ ಮುಖಂಡ ವಿಜಯ್ ಹಾಗೂ ಬಾಬು ಜಗಜೀವನರಾಮ್ ಸಂಘದ ಅಧ್ಯಕ್ಷ ಚಂದ್ರಶೇಖರ್ ಉಪಸ್ಥಿತರಿದ್ದರು.

# ಸಂಘಟನ್ ಸೃಜನ್ ಅಭಿಯಾನ–2 ರಡಿ 14 ಬ್ಲಾಕ್ ಅಧ್ಯಕ್ಷರ ನೇಮಕ ಪ್ರಕ್ರಿಯೆ ಆರಂಭ



**ಮಂಡ್ಯ:** ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಿಗೆ ತಲಾ ಇಬ್ಬರಂತೆ 14 ಬ್ಲಾಕ್ ಅಧ್ಯಕ್ಷರು, ಪ್ರತಿ 10 ಬೂತ್‌ಗೆ ಒಬ್ಬ ವಲಯ ಅಧ್ಯಕ್ಷ, ಬೂತ್ ಅಧ್ಯಕ್ಷರು ಹಾಗೂ ಜಿಲ್ಲಾ–ಬ್ಲಾಕ್ ಸಮಿತಿಗಳ ರಚನೆ ಪ್ರಕ್ರಿಯೆ ಆರಂಭವಾಗಿದೆ. ಪಕ್ಷದ ಹಿನ್ನೆಲೆ, ಸಂಘಟನಾ ಶಕ್ತಿ ಆಧಾರದಲ್ಲಿ ಆಯ್ಕೆ ನಡೆಯಲಿದೆ ಎಂದು ಜಿಲ್ಲಾ ಉಸ್ತುವಾರಿ ಎಂ. ಲಕ್ಷ್ಮಣ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಇಲ್ಲಿಯವರೆಗೆ ಶಾಸಕರು, ಮುಖಂಡರನ್ನು ಕೇಳಿ ಜಿಲ್ಲಾ–ಬ್ಲಾಕ್ ಅಧ್ಯಕ್ಷರನ್ನು ನೇಮಕ ಮಾಡಲಾಗುತ್ತಿತ್ತು. ಇದು ಕಾಂಗ್ರೆಸ್‌ನ ಪೀಪಲ್ ಮ್ಯಾಂಡೇಟ್ ಸಿದ್ಧಾಂತಕ್ಕೆ ಹೊಂದಿಕೆಯಾಗುತ್ತಿರಲಿಲ್ಲ. ಹೀಗಾಗಿ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ 'ಸಂಘಟನ್ ಸೃಜನ್ ಅಭಿಯಾನ' ಜಾರಿಗೆ ತರಲಾಗಿದೆ ಎಂದರು.

**1046 ಅಧ್ಯಕ್ಷರ ನೇಮಕ ಪೂರ್ಣ:** ದೇಶದ 28 ರಾಜ್ಯ, 9 ಕೇಂದ್ರಾಡಳಿತ ಪ್ರದೇಶಗಳ 1,046 ಜಿಲ್ಲಾಧ್ಯಕ್ಷರನ್ನು ಕಾರ್ಯಕರ್ತರ ಅಭಿಪ್ರಾಯ, ಸಾಮಾಜಿಕ ನ್ಯಾಯದ ಆಧಾರದಲ್ಲಿ ನೇಮಕ ಮಾಡುವ ಪ್ರಕ್ರಿಯೆ ಮುಗಿದಿದೆ. ಕರ್ನಾಟಕದ 40 ಜಿಲ್ಲಾಧ್ಯಕ್ಷರ ನೇಮಕವೂ ಪೂರ್ಣಗೊಂಡಿದೆ ಎಂದರು.

**ಕಾರ್ಯಕರ್ತರ ಆಕ್ರೋಶಕ್ಕೆ ಸ್ಪಂದನೆ:** 'ಸರ್ಕಾರ ಬಂದು ಮೂರು ವರ್ಷವಾದರೂ ಏನೂ ಮಾಡಿಲ್ಲ' ಎಂಬ ಕಾರ್ಯಕರ್ತರ ಆಕ್ರೋಶವನ್ನು ಸಮಗ್ರವಾಗಿ ಆಲಿಸಿ ಕೆಪಿಸಿಸಿ ಮತ್ತು ಮುಖ್ಯಮಂತ್ರಿಗಳಿಗೆ ತಲುಪಿಸುವ ಕೆಲಸ ಪ್ರಾಮಾಣಿಕವಾಗಿ ಮಾಡುತ್ತೇವೆ ಎಂದರು.

**ಮತ ಕಳ್ಳತನದ ವಿರುದ್ಧ ಹೋರಾಟ:** ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸುಭಾಷ್ ರೆಡ್ಡಿ ಅವರೇ ಚುನಾವಣಾ ಆಯೋಗದ ಮೂಲಕ ಮತ ಕಳ್ಳತನ ನಡೆಯುತ್ತಿದೆ ಎಂದು ಹೇಳಿದ್ದಾರೆ. 145 ಕೋಟಿ ಜನಸಂಖ್ಯೆಯಲ್ಲಿ ಮತದಾರರ ಹಕ್ಕುಳ್ಳವರು–ಇಲ್ಲದವರು ಎಂದು ಎರಡು ವ್ಯವಸ್ಥೆ ನಿರ್ಮಿಸಲಾಗುತ್ತಿದೆ. ಫಾರ್ಮ್ 6ಎ ತಿದ್ದುಪಡಿ ಹಿಂಪಡೆಯುವಂತೆ ಒತ್ತಡ ಹೇರಲಾಗಿದೆ. ಎಸ್‌ಐಆರ್ ಪ್ರಕ್ರಿಯೆ ಸಂಪೂರ್ಣ ಸ್ಥಗಿತವಾಗಬೇಕು. ಅ.7ರಂದು ಇಂಡಿಯಾ ಒಕ್ಕೂಟದಿಂದ ಚುನಾವಣಾ ಆಯೋಗದ ಮುಂದೆ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದರು. ಕರ್ನಾಟಕದಲ್ಲಿ ಮುಖ್ಯಮಂತ್ರಿಗಳ ಹೋರಾಟದ ಬಳಿಕ 120 ಎಫ್‌ಐಆರ್ ದಾಖಲಾಗಿವೆ, ಫಾರ್ಮ್ 7 ದುರ್ಬಳಕೆಯಾಗುತ್ತಿದೆ ಎಂದು ಆರೋಪಿಸಿದರು.

**ಸಂಘಟನೆ ಗಟ್ಟಿಯಾದರೆ ಮಾತ್ರ ಚುನಾವಣೆ ಗೆಲ್ಲಲು ಸಾಧ್ಯ: ಮಂಜುಳಾ ನಾಯ್ಡು**

ಬಳಿಕ ಮಾತನಾಡಿದ ಮಹಿಳಾ ಮುಖಂಡೆ ಮಂಜುಳಾ ನಾಯ್ಡು, ಯುದ್ಧಕ್ಕೆ ಶಸ್ತ್ರಾಸ್ತ್ರ ಬೇಕಾದಂತೆ ಪಕ್ಷಗಳಿಗೆ ಸಂಘಟನೆಯೇ ಬಲ. ಎಐಸಿಸಿ ನಿರ್ದೇಶನ, ಡಿ.ಕೆ. ಶಿವಕುಮಾರ್ ಮತ್ತು ಮುಖ್ಯಮಂತ್ರಿಗಳ ಆದೇಶದಂತೆ ಎರಡನೇ ಹಂತದ ಪ್ರಕ್ರಿಯೆಗೆ ಬಂದಿದ್ದೇವೆ ಎಂದರು.

ಕೆಪಿಸಿಸಿ ಮಟ್ಟದಲ್ಲೇ ಶಾರ್ಟ್‌ಲಿಸ್ಟ್ ನಡೆಯಲಿದ್ದು, ಜಿಲ್ಲಾ ಕಾರ್ಯಕರ್ತರು–ಅಧ್ಯಕ್ಷರ ಅಭಿಪ್ರಾಯದ ಮೇಲೆ ಬ್ಲಾಕ್ ನಿಭಾಯಿಸಬಲ್ಲವರಿಗೆ ಅವಕಾಶ ನೀಡಲಾಗುವುದು ಎಂದರು. ಮಂಡ್ಯ ಎಂದರೆ ಇಂಡಿಯಾ ಇದ್ದ ಹಾಗೆ, ತನ್ನದೇ ಸಾಂಸ್ಕೃತಿಕ ಇತಿಹಾಸ ಹೊಂದಿದೆ. 2028ರಲ್ಲಿ ಏಳು ವಿಧಾನಸಭಾ ಸ್ಥಾನಗಳನ್ನೂ, 2029ರಲ್ಲಿ ಲೋಕಸಭೆ ಗೆದ್ದು ರಾಹುಲ್ ಗಾಂಧಿಯನ್ನು ಪ್ರಧಾನಿ ಮಾಡುವುದೇ ಗುರಿ ಎಂದರು.

ಚುನಾವಣಾ ಆಯೋಗ, ಇಡಿ, ಸಿಬಿಐಗಳಂತಹ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಕೈಗೊಂಬೆ ಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. "ಕಾಂಗ್ರೆಸ್ ಸಂವಿಧಾನ ರಕ್ಷಣೆಯ ಹೊಣೆ ಹೊತ್ತಿದೆ ಎಂದರು." ಎಂದು ಹೇಳಿದರು. ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದಿದ್ದರೆ ನಾಳೆ ಪಾಸ್‌ಪೋರ್ಟ್, ಸರ್ಕಾರಿ ಸ್ಕೀಮ್‌ಗಳು ಸಿಗುವುದಿಲ್ಲ. ಈ ವಿಕೃತ ಹುನ್ನಾರವನ್ನು ಹಳ್ಳಿ ಹಳ್ಳಿಗೆ ತಲುಪಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಮುಖಂಡರಾದ ಸಿ.ಎಂ. ದ್ಯಾವಪ್ಪ, ಎಂ.ಎಲ್. ಸುರೇಶ್, ರಾಮಕೃಷ್ಣ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶುಭದಾಯಿನಿ ಮತ್ತಿತರರಿದ್ದರು.

# ಆತ್ಮಬಲವೇ ಅಮೃತ, ಅಪನಂಬಿಕೆಯೇ ಮೃತ್ಯು



ಆತ್ಮವಿಶ್ವಾಸವು ಜೀವಕೋಶದ ರಣಕಹಳೆಯಿದ್ದಂತೆ. ಸ್ವಪ್ರತ್ಯಯ ಚಿಗುರಿದಾಗ ಮೆದುಳಿನ ಬೇಸಲ್ ಗ್ಯಾಂಗ್ಲಿಯಾ ಚುರುಕಾಗಿ ಹಾರ್ಮೋನುಗಳ ಲಯ ಮೂಡುತ್ತದೆ, ಮೂಳೆ ಸಾಂದ್ರತೆ ಹೆಚ್ಚಿ ಸ್ನಾಯು ಬಲಗೊಳ್ಳುತ್ತದೆ. ಡೆನ್ಮಾರ್ಕ್ ಅಧ್ಯಯನ ಸಾರುವಂತೆ, ತಮ್ಮ ಮೇಲೆ ನಂಬಿಕೆ ಇಟ್ಟವರಲ್ಲಿ ಪಾರ್ಶ್ವವಾಯುವಿನ ಅಪಾಯ ಶೇ.33ರಷ್ಟು ಕಡಿಮೆ, ಏಕೆಂದರೆ ರಕ್ತನಾಳಗಳು ಸ್ಥಿತಿಸ್ಥಾಪಕತ್ವ ಉಳಿಸಿಕೊಳ್ಳುತ್ತವೆ. ಅಂದರೆ ಆತ್ಮಬಲವೇ ರೋಗಕ್ಕೆ ಅಗ್ನಿಶಾಮಕ. ಇದು ವೈಯಕ್ತಿಕ ಆಸ್ತಿಯಲ್ಲ, ಸಮುದಾಯದ ಬೆಳಕು. ಕೈಕೊಟ್ಟ ಬೆಳೆಯಿಂದ ಕುಗ್ಗದೆ ಸಾವಯವ ಕೃಷಿಗೆ ತೊಡಗುವ ರೈತ ಮಹಿಳೆ ಹಳ್ಳಿಗೆ ಅನ್ನದ ಭದ್ರತೆ ನೀಡುತ್ತಾಳೆ. ಅಂಗವೈಕಲ್ಯ ಮೆಟ್ಟಿ ಶಿಖರವೇರುವ ಯುವಕ, ಸಹಪಾಠಿಗಳ ನಿಘಂಟಿನಿಂದ 'ಅಸಾಧ್ಯ' ಪದವನ್ನೇ ಅಳಿಸುತ್ತಾನೆ. ಸೋತರೂ ಮತ್ತೆ ಪರೀಕ್ಷೆಗೆ ಕುಳಿತ ವಿದ್ಯಾರ್ಥಿನಿ ಓಣಿಗೇ ಛಲದ ಪಾಠವಾಗುತ್ತಾಳೆ. ಒಬ್ಬರ ಕಿಡಿ ಸಾವಿರ ಕನಸುಗಳಿಗೆ ಕಾವು ಕೊಡುತ್ತದೆ.

ಈ ಬೆಳಕನ್ನು ಬೆಳೆಸುವುದು ಹೇಗೆ? ನಿತ್ಯ ಕನ್ನಡಿಯ ಮುಂದೆ ನಿಂತು ನಿಮ್ಮ ಮೂರು ಒಳಗುಣಗಳನ್ನು ಗಟ್ಟಿಯಾಗಿ ನುಡಿಯಿರಿ. ವಾರಕ್ಕೊಮ್ಮೆ ಅಪರಿಚಿತರ ನೆರವು ಕೇಳಿ 'ಇಲ್ಲ' ಎಂಬುದನ್ನು ಸಹಿಸಿಕೊಳ್ಳಿ. ಪಕ್ಷಕ್ಕೊಮ್ಮೆ ಸಾರ್ವಜನಿಕವಾಗಿ ನಿಮ್ಮ ನಿಲುವನ್ನು ಸ್ಪಷ್ಟವಾಗಿ ಮಂಡಿಸಿ. ತಿಂಗಳಿಗೊಮ್ಮೆ ಹೊಸ ಅಡುಗೆ ಮಾಡಿ ಹಂಚಿಕೊಳ್ಳಿ, ವರ್ಷಕ್ಕೊಮ್ಮೆ ಭಯದ ಪಟ್ಟಿಯ ಒಂದು ಅಂಶವನ್ನು ಗೆದ್ದುಬಿಡಿ.

ಛಲದ ಅಂಬು ಹೂಡಿದವನ ಎದೆ ಹಿಗ್ಗುತ್ತದೆ, ದೃಷ್ಟಿ ಹರಳಾಗುತ್ತದೆ. ಸ್ವಾಭಿಮಾನದ ಸೌಧ ಕಟ್ಟಿದವನಿಗೆ ಕಾಲನೇ ಕಾವಲುಗಾರನಾಗುತ್ತಾನೆ. ಆತ್ಮಬಲವಿದ್ದವನಿಗೆ ಯಮನೂ ಅಂಜುತ್ತಾನೆ, ಆತ್ಮಬಲವೇ ಅಜರಾಮರತೆಯ ಅಸ್ತ್ರ

ಅಂಕಣ-37

**ಸಾವು ಸಂಕಟಪಡುವ ಸಂಗತಿಗಳು..!**



| ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

# ಅ.06 ರಂದು ವಿದ್ಯುತ್ ವ್ಯತ್ಯಯ

**ಮಡಿಕೇರಿ:** ಮಡಿಕೇರಿ 66/11ಕೆ.ವಿ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ದಸರಾ ಹಬ್ಬದ ತುರ್ತು ನಿರ್ವಹಣಾ ಕಾಮಗಾರಿ ನಡೆಸಬೇಕಿರುವುದರಿಂದ ಅಕ್ಟೋಬರ್, 06 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಎಫ್3 ಗದ್ದಿಗೆ ಮಾರ್ಗದಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ಸಂಪಿಗೆಕಟ್ಟೆ, ಕನ್ನಂಡಬಾಣೆ, ವಿ.ವಿ. ಶಾಲೆ, ಗದ್ದಿಗೆ, ಉಕ್ಕುಡ, ಆಜಾದ್ ನಗರ, ತ್ಯಾಗರಾಜ್ ಕಾಲೋನಿ, ಅಬ್ಬಿಫಾಲ್ಸ್ ರಸ್ತೆ, ಭಗವತಿ ನಗರ, ಮಲ್ಲಿಕಾರ್ಜುನ ನಗರ, ರಾಣಿಪೇಟೆ, ಮಾರ್ಕೆಟ್ ರಸ್ತೆ, ಮಹದೇವಪೇಟೆ, ಕಾನ್ವೆಂಟ್ ಜಂಕ್ಷನ್, ಕೂರ್ಗ್ ಇಂಟರ್‌ನ್ಯಾಷನಲ್, ಐ.ಟಿ.ಐ. ಹಿಂಭಾಗ, ಕಾವೇರಿ ಲೇಔಟ್, ಟಿ.ಜಾನ್ ಲೇಔಟ್, ಅಬ್ದುಲ್ ಕಲಾಂ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

# ಅರ್ಜಿ ಆಹ್ವಾನ

**ಮಡಿಕೇರಿ:** ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ ವತಿಯಿಂದ 2026–27ನೇ ಸಾಲಿನ ಕ್ರಿಶ್ಚಿಯನ್ ಜನಾಂಗದವರಿಗೆ ಅರಿವು, ಫಾಸ್ಟ್ ಫುಡ್ ಟ್ರಕ್, ಸ್ವ ಸಹಾಯ ಸಂಘಗಳಿಗೆ ಸಹಾಯಧನ ಯೋಜನೆಯಡಿ ಸಾಲ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ನಿಗಮದ ವೆಬ್‌ಸೈಟ್ https://kccdclonline.karnataka.gov.in/ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಮೌಲಾನಾ ಆಜಾದ್ ಭವನ, ಗ್ರಾಮಾಂತರ ಪೊಲೀಸ್ ಠಾಣೆ ಹತ್ತಿರ, ಎಫ್‌ಎಂಸಿ ಕಾಲೇಜು ರಸ್ತೆ, ಮಡಿಕೇರಿ ಇಲ್ಲಿಗೆ ಭೇಟಿ ನೀಡಬಹುದು ಹಾಗೂ ದೂ.ಸಂ.08272–201449 ನ್ನು ಸಂಪರ್ಕಿಸಬಹುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅಕ್ಟೋಬರ್, 31 ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಪ್ಲಾಸ್ಟಿಕ್ ಎಂಬ ಪೆಡಂಭೂತ ಹಾಗಾದರೆ ನಾವೆಲ್ಲರೂ ಅಪಾಯದಲ್ಲಿದ್ದೇವೆಯೇ



| ರೂಪ ಮಂಜುನಾಥ ಹೊಳೆನರಸೀಪುರ

ಬೆಳಿಗ್ಗೆ ಎದ್ದ ತಕ್ಷಣ ಹಲ್ಲುಜ್ಜುವ ಬ್ರಷ್‌ನಿಂದ ಶುರುವಾಗುವ ನಮ್ಮ ಪ್ಲಾಸ್ಟಿಕ್ ಜೊತೆಗಿನ ಅನುಬಂಧ,ಸಂಬಂಧ,ಋಣಾನುಬಂಧ ರಾತ್ರಿ ಮಲಗುವವರೆಗೂ ಮುಗಿಯುವುದೇ ಇಲ್ಲ!

ಎಲ್ಲೆಲ್ಲೀ ನೋಡಲೀ, ನಿನ್ನನ್ನೇ ಕಾಣುವೇ .. ಎನ್ನುವಂತೆ, ಹಲ್ಲುಜ್ಜುವ ಬ್ರಷ್ ಪ್ಲಾಸ್ಟಿಕ್, ಬಕೆಟ್ ಪ್ಲಾಸ್ಟಿಕ್, ನೀರಿನ ಬಾಟಲಿ ಪ್ಲಾಸ್ಟಿಕ್, ಟಿಫಿನ್ ಡಬ್ಬಿ ಪ್ಲಾಸ್ಟಿಕ್, ಮೊಬೈಲ್‌ನ ಹಲವು ಭಾಗಗಳು ಪ್ಲಾಸ್ಟಿಕ್, ಅಡುಗೆ ಮನೆಯ ಡಬ್ಬಿಗಳು ಪ್ಲಾಸ್ಟಿಕ್, ತರುವ ಸಾಮಾನುಗಳು ಪ್ಲಾಸ್ಟಿಕ್ ಹೀಗೆ ಕಣ್ಣು ಹಾಯಿಸಿದಲ್ಲೆಲ್ಲ ಪ್ಲಾಸ್ಟಿಕ್ ನದ್ದೇ ವಿಶ್ವರೂಪ, ವಿರಾಟ್ ದರ್ಶನ!

ಇಷ್ಟೆಲ್ಲದರ ನಡುವೆ ಈ ದಿನಗಳಲ್ಲಿ ಆಗಾಗ ನಮಗೆಲ್ಲಾ ಶಾಕ್ ಕೊಡುವಂಥ ಮಾತು ಕಿವಿಗೆ ಬೀಳುತ್ತಲೇ ಇರುತ್ತದೆ

ಪ್ಲಾಸ್ಟಿಕ್‌ನಿಂದ ಕ್ಯಾನ್ಸರ್ ಬರುತ್ತದೆ!

ಅಯ್ಯೋ ದೇವರೇ!ಹಾಗಾದರೆ ಇಷ್ಟು ವರ್ಷ ಪ್ಲಾಸ್ಟಿಕ್ ಡಬ್ಬಿಯಲ್ಲಿ ತಿಂಡಿ ತುಂಬಿಕೊಂಡು, ಪ್ಲಾಸ್ಟಿಕ್ ಬಾಟಲಿಯಲ್ಲಿ ನೀರು ಕುಡಿದು, ಪ್ಲಾಸ್ಟಿಕ್ ಚೀಲದಲ್ಲಿ ತರಕಾರಿ,ಹಣ್ಣು, ದಿನಸಿ ತಂದುಕೊಂಡು ಬದುಕಿದ್ದ ನಾವೆಲ್ಲರೂ ಈಗ ಆಸ್ಪತ್ರೆಯ ಬಾಗಿಲ ಮುಂದೆ ಸಾಲಿನಲ್ಲಿ ನಿಲ್ಲಬೇಕೇ ! ಅನ್ನುವ ಆತಂಕ ಸದಾ ಪ್ಲಾಸ್ಟಿಕ್ ಕಂಡಾಗಲೆಲ್ಲಾ ಕಾಡದೇ ಇರದು.

ಇಲ್ಲಿ ನಿಜವಾಗಿಯೂ ಗಂಭೀರವಾದ ಪ್ರಶ್ನೆಯೊಂದಿದೆ.ಪ್ಲಾಸ್ಟಿಕ್ ಅಷ್ಟೊಂದು ಅಪಾಯಕಾರಿ ಎಂದಾದರೆ ಸರ್ಕಾರಗಳು ಅದನ್ನು ಸಂಪೂರ್ಣವಾಗಿ ನಿಷೇಧಿಸುವುದೇಕೆ ಇಲ್ಲ

ಅಭಿವೃದ್ಧಿ ಹೊಂದಿದ ರಾಷ್ಟ್ರವಾದ ಅಮೆರಿಕದಲ್ಲೂ ಪ್ಲಾಸ್ಟಿಕ್ ಬಳಕೆ ಇಷ್ಟೊಂದು ವ್ಯಾಪಕವಾಗಿರುವುದೇಕೆ ಅಲ್ಲಿನ ವಿಜ್ಞಾನಿಗಳು, ವೈದ್ಯರು, ಪರಿಸರ ತಜ್ಞರು, ಸರ್ಕಾರಗಳಿಗೆ ಇದರ ಅಪಾಯದ ಅರಿವಿಲ್ಲವೇ ಎನ್ನುವುದಾದರೆ, ಅರಿವಿದೆ.ಆದರೆ ವಿಷಯ ನಾವು ಕೇಳುವಷ್ಟು ಸರಳವೂ ಅಲ್ಲ.

**ಪ್ಲಾಸ್ಟಿಕ್ ಎಂದರೆ ಒಂದೇ ವಸ್ತುವಲ್ಲ!:** ಮೊದಲನೆಯದಾಗಿ, ಪ್ಲಾಸ್ಟಿಕ್ ಎನ್ನುವುದು ಒಂದೇ ರೀತಿಯ ವಸ್ತುವಿನ ಹೆಸರು ಅಲ್ಲ. ನಮ್ಮ ಸುತ್ತ ಹಲವಾರು ಬಗೆಯ ಪ್ಲಾಸ್ಟಿಕ್‌ಗಳಿವೆ. ಅವುಗಳ ತಯಾರಿಕೆಯಲ್ಲಿ ಬಳಸುವ ರಾಸಾಯನಿಕಗಳೂ ಬೇರೆ ಬೇರೆ. ಆದ್ದರಿಂದ ಎಲ್ಲ ಪ್ಲಾಸ್ಟಿಕ್‌ಗಳೂ ಕ್ಯಾನ್ಸರ್ ಉಂಟುಮಾಡುತ್ತವೆ ಎನ್ನುವುದು ವೈಜ್ಞಾನಿಕವಾಗಿ ಸರಿಯಾದ ಹೇಳಿಕೆಯಲ್ಲ.

ಆದರೆ ಕೆಲವು ಪ್ಲಾಸ್ಟಿಕ್‌ಗಳಲ್ಲಿ ಬಳಸುವ ರಾಸಾಯನಿಕಗಳ ಬಗ್ಗೆ ನಿಜವಾಗಿಯೂ ಆರೋಗ್ಯದ ಕಳವಳಗಳಿವೆ.

ಉದಾಹರಣೆಗೆ, PVC ಮುಂತಾದ ಪ್ಲಾಸ್ಟಿಕ್‌ಗಳನ್ನು ಮೃದುವಾಗಿಸಲು



ಬಳಸಲಾಗುವ phthalates (ಇವು ಪ್ಲಾಸ್ಟಿಕ್ಗಳನ್ನು ಮೃದುವಾಗಿ, ಬಾಗುವಂತೆ,ಮತ್ತು ಹೆಚ್ಚು ಬಾಳಿಕೆ ಬರುವಂತೆ ಮಾಡಲು ಬಳಸುವ ರಾಸಾಯನಿಕಗಳ ಗುಂಪು)ಎಂಬ ರಾಸಾಯನಿಕಗಳ ಬಗ್ಗೆ ವಿಜ್ಞಾನಿಗಳು ಬಹಳ ವರ್ಷಗಳಿಂದ ಅಧ್ಯಯನ ನಡೆಸುತ್ತಿದ್ದಾರೆ.

2026ರ ಜುಲೈನಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಅಂಗಸಂಸ್ಥೆಯಾದ International Agency for Research on Cancer IARC ಮೂರು phthalatesಗಳನ್ನು ಮಾನವರಿಗೆ ಕ್ಯಾನ್ಸರ್ ಉಂಟುಮಾಡುವ ಸಾಧ್ಯತೆಯಿರುವ Group 2B ಗುಂಪಿಗೆ ಸೇರಿಸಿದೆ. ಆದರೆ ಅದೇ ಮೌಲ್ಯಮಾಪನದಲ್ಲಿ ಮಾನವರಲ್ಲಿ ಕ್ಯಾನ್ಸರ್ ಉಂಟುಮಾಡುತ್ತವೆ ಎನ್ನಲು ಸಾಕಷ್ಟು ಪುರಾವೆಗಳಿಲ್ಲವೆಂದೂ ಕೂಡಾ ಸ್ಪಷ್ಟಪಡಿಸಲಾಗಿದೆ. ಪ್ರಾಣಿಗಳಲ್ಲಿನ ಸಾಕ್ಷ್ಯ ಮತ್ತು ಜೈವಿಕ ಪರಿಣಾಮಗಳ ಆಧಾರದ ಮೇಲೆ ಈ ವರ್ಗೀಕರಣ ಮಾಡಲಾಗಿದೆ.

ಅಂದರೆ ಪ್ಲಾಸ್ಟಿಕ್ ಮುಟ್ಟಿದರೂ ಕ್ಯಾನ್ಸರ್ ಬರುತ್ತದೆ ಎನ್ನುವುದೂ ತಪ್ಪು.

ಪ್ಲಾಸ್ಟಿಕ್‌ನಲ್ಲಿ ಏನೂ ಅಪಾಯವಿಲ್ಲ! ಎನ್ನುವುದೂ ತಪ್ಪು.ನಿಜವಾದ ಉತ್ತರ ಈ ಎರಡರ ಮಧ್ಯೆ ಇದೆ.ಹಾಗಾದರೆ ಸರ್ಕಾರ ಇದರ ಬಳಕೆಗೆ ಏಕೆ ಅನುಮತಿ ಕೊಡುತ್ತದೆ

ಇಲ್ಲೇ ಮತ್ತೊಂದು ಕುತೂಹಲವಿದೆ!ಸರ್ಕಾರ ಒಂದು ವಸ್ತುವಿಗೆ ಅನುಮತಿ ಕೊಟ್ಟಿದೆ ಎಂದರೆ, ಇದು ಯಾವುದೇ ಪರಿಸ್ಥಿತಿಯಲ್ಲೂ ಶೇಕಡಾ ನೂರರಷ್ಟು ಅಪಾಯರಹಿತ ಎಂದು ಪ್ರಮಾಣಪತ್ರ ಕೊಟ್ಟಂತಲ್ಲ. ಯಾವ ವಸ್ತು ಯಾವ ಉದ್ದೇಶಕ್ಕೆ, ಎಷ್ಟು ಪ್ರಮಾಣದಲ್ಲಿ, ಯಾವ ರೀತಿಯಲ್ಲಿ ಬಳಸಲಾಗುತ್ತದೆ ಎಂಬುದನ್ನೂ ಪರಿಗಣಿಸಲಾಗುತ್ತದೆ.

ಅಮೆರಿಕದ ಈಆಂ ಆಹಾರಕ್ಕೆ ಸಂಪರ್ಕಕ್ಕೆ ಬರುವ ವಸ್ತುಗಳ ವಿಚಾರದಲ್ಲಿ ಅವುಗಳಿಂದ ಆಹಾರಕ್ಕೆ ಎಷ್ಟು ರಾಸಾಯನಿಕಗಳು ಸೇರಬಹುದು, ಆ ಪ್ರಮಾಣದ exposure ಸುರಕ್ಷಿತವೇ, toxicological data ಏನು ಎಂಬುದನ್ನು ಪರಿಶೀಲಿಸುತ್ತದೆ. ಹೊಸ ವೈಜ್ಞಾನಿಕ ಮಾಹಿತಿ ಬಂದಾಗ ಈಗಾಗಲೇ ಅನುಮತಿಸಿರುವ ವಸ್ತುಗಳನ್ನೂ ಮರುಪರಿಶೀಲಿಸುತ್ತದೆ.

ಇದಕ್ಕೆ ಒಂದು ಆಸಕ್ತಿಕರ ಉದಾಹರಣೆಯೂ ಇದೆ.ಅಮೆರಿಕದ ಈಆಂ 2022ರಲ್ಲಿ ಆಹಾರದ ಸಂಪರ್ಕ ಬಳಕೆಗೆ ಸಂಬಂಧಿಸಿದ 23 phthalatesಗಳ ಅನುಮತಿಯನ್ನು ಹಿಂಪಡೆದಿತ್ತು; 2026ರಲ್ಲೂ ಉಳಿದಿರುವ ಕೆಲವು phthalatesಗಳ ಸಂಯುಕ್ತ ಅಪಾಯವನ್ನು ಮೌಲ್ಯಮಾಪನ ಮಾಡುವ ಪ್ರಕ್ರಿಯೆಯನ್ನು ಮುಂದುವರಿಸುತ್ತಿದೆ. (U.S. Food and Drug Administration)

ಹಾಗಾಗಿ ವಿಜ್ಞಾನದ ಸಂಶೋಧನೆಗಳು ನಡೆಯುತ್ತಲೇ ಇದೆ. ಇಂದು ಸುರಕ್ಷಿತವೆಂದು ಪರಿಗಣಿಸಿರುವ ವಸ್ತುವನ್ನು ನಾಳೆಯ ಹೊಸ ಸಂಶೋಧನೆಯ ಬೆಳಕಿನಲ್ಲಿ ಮತ್ತೆ ಪರೀಕ್ಷಿಸುವುದು ವಿಜ್ಞಾನದ ಸಹಜ ಪ್ರಕ್ರಿಯೆ.

**ಅಮೆರಿಕದಲ್ಲೂ ಇಷ್ಟೊಂದು ಪ್ಲಾಸ್ಟಿಕ್ ಇದೆಯಲ್ಲ!**

ಹೌದು.ಅದರಿಂದಲೇ ಮತ್ತೊಂದು ಮುಖ್ಯ ವಿಷಯ ಅರ್ಥವಾಗುತ್ತದೆ. ಅರಿವು ಇಲ್ಲ ಎನ್ನುವುದು ಸಮಸ್ಯೆಯಲ್ಲ; ಅರಿವಿದ್ದರೂ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗದಿರುವುದೇ ದೊಡ್ಡ ಸಮಸ್ಯೆ. ಆಸ್ಪತ್ರೆಗಳಲ್ಲಿ ಸಿರಿಂಜ್‌ಗಳು, ಔಷಧ ಪ್ಯಾಕೇಜಿಂಗ್, ವೈದ್ಯಕೀಯ ಉಪಕರಣಗಳು, ಆಹಾರ ಸಂರಕ್ಷಣೆ, ವಾಹನಗಳು, ವಿದ್ಯುತ್ ಉಪಕರಣಗಳು ಹೀಗೆ ಅನೇಕ ಕ್ಷೇತ್ರಗಳಲ್ಲಿ ಪ್ಲಾಸ್ಟಿಕ್‌ನ ಬಳಕೆ ಹಾಸುಹೊಕ್ಕಾಗಿದೆ.ಹಾಗೇ ಅದರ ಅಗತ್ಯತೆಯೂ ಅಷ್ಟೇ ಇದೆ.

ಅದರ ಕಾರಣದಿಂದಲೇ ಇಂದಿನಿಂದ ಪ್ಲಾಸ್ಟಿಕ್ ಬೇಡ ಎನ್ನುವುದು ಪ್ರಾಯೋಗಿಕ ಪರಿಹಾರವಲ್ಲ.ಅದು ಸಾಧ್ಯವೂ ಅಲ್ಲ. ಹಾಗಿದ್ದರೆ ಧಾರಾಳವಾಗಿಯೇ ಬಳಸೋಣ ಎನ್ನುವುದೂ ಪರಿಹಾರವಲ್ಲ!

ಅಮೆರಿಕದ ಇಕಂ ಕೂಡ ಪ್ಲಾಸ್ಟಿಕ್ ಮಾಲಿನ್ಯವನ್ನು ಗಂಭೀರ ಸಮಸ್ಯೆಯಾಗಿ ಪರಿಗಣಿಸಿ 2024ರಲ್ಲಿ ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟಲು ರಾಷ್ಟ್ರೀಯ ಕಾರ್ಯತಂತ್ರ ಪ್ರಕಟಿಸಿತು. ಅಂದರೆ ಅಭಿವೃದ್ಧಿ ಹೊಂದಿದ ದೇಶಗಳಿಗೂ ಸಮಸ್ಯೆಯ ಅರಿವಿದೆ; ಅವರು ಕೂಡ ಪರಿಹಾರ ಹುಡುಕುತ್ತಿದ್ದಾರೆ.

ನಮ್ಮ ಸಮಸ್ಯೆ ಪ್ಲಾಸ್ಟಿಕ್‌ಗಿಂತಲೂ ನಮ್ಮ ಅಭ್ಯಾಸವೇ!

ನಮ್ಮ ಅಜ್ಜಿಯಂದಿರು ಮಣ್ಣಿನ ಮಡಿಕೆ, ಹಿತ್ತಾಳೆ, ತಾಮ್ರ, ಸ್ಟೀಲ್ ಪಾತ್ರೆಗಳನ್ನು ಬಳಸುತ್ತಿದ್ದರು. ಮಾರುಕಟ್ಟೆಗೆ ಹೋಗುವಾಗ ಬಟ್ಟೆಯ ಚೀಲ ತೆಗೆದುಕೊಂಡು ಹೋಗುತ್ತಿದ್ದರು.ಈಗಲೂ ನಮ್ಮ ಬಳಿ ಬೇಕಾದಷ್ಟು ಬಟ್ಟೆಯ ಚೀಲಗಳು ಮನೆಯಲ್ಲಿ ಇದ್ದೇ ಇರುತ್ತವೆ.ಇನ್ನು ತಿಂಡಿತೀರ್ಥಗಳನ್ನು ಪಾರ್ಸಲ್ ತರಲು ಸಾಕಷ್ಟು ಸ್ಟೀಲ್ ಡಬ್ಬಿಗಳು, ಗಾಜಿನ ಹಾಗೂ ಸ್ಟೀಲ್ ನೀರಿನ ಬಾಟಲಿಗಳೂ ಇದ್ದೇ ಇದ್ದರೂ, ಆಚೆ ಹೋಗುವ ಆತುರದಲ್ಲಿಯೋ, ಸೊಂಬೇರಿತನದಲ್ಲಿಯೋ ಅವುಗಳನ್ನು ಕೊಂಡೊಯ್ಯದೇ, ಪ್ಲಾಸ್ಟಿಕ್ ಚೀಲ, ಡಬ್ಬಿಗಳಲ್ಲಿಯೇ ಪಾರ್ಸಲ್ ತಂದು ತಿನ್ನುತ್ತೇವೆ. ಹಾಗೇ,ಅಂಗಡಿಗೆ ಹೋದಾಗ ಗುರೂ ಒಂದು ಕವರ್ ಕೊಡಪ್ಪಾ! ಅಂತ ಸರಾಗವಾಗಿ ಪ್ಲಾಸ್ಟಿಕ್ ಬಳಸುತ್ತೇವೆ.

ಆ ಡಬ್ಬಿಗಳನ್ನೆಲ್ಲ ದೊಡ್ಡ ಪ್ಲಾಸ್ಟಿಕ್ ಕಸದ ಚೀಲಗಳಲ್ಲಿ ತುಂಬುತ್ತೇವೆ

ಕೊನೆಗೆ ಪ್ಲಾಸ್ಟಿಕ್‌ನಿಂದ ಮುಕ್ತರಾಗಲು ಹೊರಟ ನಾವು ಪ್ಲಾಸ್ಟಿಕ್‌ನಲ್ಲೇ ಸಿಕ್ಕಿ ಹೆಣಗಾಡುವ ಸ್ಥಿತಿ ನಮ್ಮ ಸ್ವಯಂಕೃತ ಅಪರಾಧವಲ್ಲವೇ

ಹಾಗಾದರೆ ಏನು ಮಾಡಬೇಕು

ಬಿಸಿಬಿಸಿ ಆಹಾರವನ್ನು ಅನಗತ್ಯವಾಗಿ ಪ್ಲಾಸ್ಟಿಕ್ ಪಾತ್ರೆಗಳಲ್ಲಿ ತುಂಬಿಡುವುದನ್ನು ತಪ್ಪಿಸಬಹುದು.

ಆಹಾರ ಬಿಸಿಮಾಡಲು ನಿರ್ದಿಷ್ಟವಾಗಿ ಅದಕ್ಕಾಗಿ ಅನುಮೋದಿಸದ ಪ್ಲಾಸ್ಟಿಕ್ ಪಾತ್ರೆಗಳನ್ನು ಬಳಸಬಾರದು.

ಹಾನಿಗೊಳಗಾದ, ಗೀರು ಬಿದ್ದ ಪ್ಲಾಸ್ಟಿಕ್ ಆಹಾರಪಾತ್ರೆಗಳನ್ನು ಬದಲಾಯಿಸಬಹುದು.

ಒಮ್ಮೆ ಬಳಸಿ ಎಸೆಯುವ ಪ್ಲಾಸ್ಟಿಕ್ ಚೀಲ, ಕಪ್, ತಟ್ಟೆ, ಸ್ಟ್ರಾ ಮುಂತಾದವುಗಳ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಬಹುದು.

ಸಾಧ್ಯವಾದಲ್ಲಿ ಸ್ಟೀಲ್, ಗಾಜು, ಮಣ್ಣಿನ ಪಾತ್ರೆ ಮತ್ತು ಬಟ್ಟೆಯ ಚೀಲಗಳಿಗೆ ಆದ್ಯತೆ ನೀಡಬಹುದು.

ಇವೆಲ್ಲವೂ ಕ್ಯಾನ್ಸರ್ ಬರುವುದೇ ಇಲ್ಲ ಎಂಬ ಗ್ಯಾರಂಟಿ ಅಲ್ಲ.

ಆದರೆ ಅನಗತ್ಯ exposure ಮತ್ತು ಅನಗತ್ಯ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ವಿವೇಕಯುತ ಹೆಜ್ಜೆಗಳು.

ಕೊನೆಗೆ ಒಂದು ಪ್ರಶ್ನೆ

ಪ್ಲಾಸ್ಟಿಕ್‌ನ್ನು ಸಂಪೂರ್ಣವಾಗಿ ನಮ್ಮ ಜೀವನದಿಂದ ಹೊರಹಾಕಲು ಸಾಧ್ಯವೇ ಬಹುಶಃ ಕಷ್ಟ.

ಅದು ನಮಗೆ ಕೊಟ್ಟಿರುವ ಅನುಕೂಲಗಳೂ ಅಷ್ಟೇ ದೊಡ್ಡವು.

ಆದರೆ ಅದಕ್ಕಾಗಿ ಅದರ ದಾಸರಾಗಬೇಕೇ

ಅದೂ ಬೇಡ.

ಪ್ಲಾಸ್ಟಿಕ್ ನಮ್ಮ ಬದುಕನ್ನು ಸುಲಭಗೊಳಿಸಬೇಕೇ ಹೊರತು, ನಮ್ಮ ಬದುಕಿನ ಮೇಲೆ ಆಳ್ವಿಕೆ ನಡೆಸಬಾರದು.

ಸರ್ಕಾರ ನಿಯಮ ರೂಪಿಸಬೇಕು.

ಉತ್ಪಾದಕರು ಸುರಕ್ಷಿತ ಪರ್ಯಾಯಗಳನ್ನು ಹುಡುಕಬೇಕು.

ವಿಜ್ಞಾನಿಗಳು ಇನ್ನಷ್ಟು ಸಂಶೋಧನೆ ಮಾಡಬೇಕು.

ಆದರೆ ಗ್ರಾಹಕರಾದ ನಾವೂ ನಮ್ಮ ಪಾಲಿನ ಜವಾಬ್ದಾರಿ ತೆಗೆದುಕೊಳ್ಳಬೇಕು.

ಪ್ಲಾಸ್ಟಿಕ್ ಕಂಡುಹಿಡಿದದ್ದು ಮಾನವನ ಬುದ್ಧಿವಂತಿಕೆಗೆ ಸಾಕ್ಷಿಯಾದರೆ, ಅದರ ಅತಿಯಾದ ಬಳಕೆ ಮತ್ತು ಅಸಮರ್ಪಕ ವಿಲೇವಾರಿ ನಮ್ಮ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಬಾರದು.

ನಾವು ಚಂದ್ರನ ಅಂಗಳಕ್ಕೆ ಕಾಲಿಟ್ಟಿದ್ದೇವೆ.ಮಂಗಳ ಗ್ರಹದಲ್ಲಿ ಮನೆ ಕಟ್ಟುವ ಕನಸು ಕಾಣುತ್ತಿದ್ದೇವೆ.ಆದರೆ ನಮ್ಮ ಮನೆಯ ಅಂಗಳದಲ್ಲಿ ಬಿದ್ದಿರುವ ಒಂದು ಪ್ಲಾಸ್ಟಿಕ್ ಕವರ್‌ನ್ನು ಸರಿಯಾಗಿ ವಿಲೇವಾರಿ ಮಾಡಲು ಮಾತ್ರ ಹೆಣಗಾಡುತ್ತಿದ್ದೇವೆ!ಇದಲ್ಲವೇ ವಿಪರ್ಯಾಸ!

ಅಂತೂ ಪ್ಲಾಸ್ಟಿಕ್‌ನೊಂದಿಗೆ ಯುದ್ಧ ಮಾಡಿ ಗೆಲ್ಲುವುದಂತೂ ಸಾಧ್ಯವಿಲ್ಲದಷ್ಟು ನಾವು ಹೆಜ್ಜೆಹೆಜ್ಜೆಯಲ್ಲೂ ಪ್ಲಾಸ್ಟಿಕ್ ನೊಂದಿಗೆ ಬೆರೆತು ಹೋಗಿಬಿಟ್ಟಿದ್ದೇವೆ. ನಿನ್ನ ಬಿಟ್ಟು ನನ್ನಾ, ನನ್ನ ಬಿಟ್ಟು ನಿನ್ನಾ ಜೀವನಾ ಸಾಗದೂ ,ಎನ್ನುವ ಸ್ಥಿತಿಗೆ ತಲುಪಿಬಿಟ್ಟಿದ್ದೇವೆ.ಪ್ಲಾಸ್ಟಿಕ್ ಎನ್ನುವ ಪೆಡಂಭೂತ ನಮ್ಮ ಹೆಗಲೇರಿಬಿಟ್ಟಿದೆ! ಆದರೆ,ಅದನ್ನು ವಿವೇಕದಿಂದ ಬಳಸುವ ಪ್ರಜ್ಞೆ, ಸಂಸ್ಕೃತಿ ಬೇಕು.

ಭಯದಿಂದ ಪ್ಲಾಸ್ಟಿಕ್‌ನ್ನು ತ್ಯಜಿಸುವುದಕ್ಕಿಂತ, ಅರಿವಿನಿಂದ ಅದನ್ನು ಬಳಸುವುದು ಏಕೆಂದರೆ ಪ್ಲಾಸ್ಟಿಕ್ ಬಳಸಬೇಕೋ, ಮನುಷ್ಯ ಬದುಕಬೇಕೋ ಎಂಬುದು ಪ್ರಶ್ನೆಯಲ್ಲ. ಪ್ಲಾಸ್ಟಿಕ್‌ನ ಸೌಲಭ್ಯವನ್ನೂ ಉಳಿಸಿಕೊಂಡು, ಮನುಷ್ಯನ ಆರೋಗ್ಯವನ್ನೂ ಪರಿಸರವನ್ನೂ ಹೇಗೆ ಕಾಪಾಡಿಕೊಳ್ಳಬೇಕು ಎನ್ನುವುದೇ ಮನುಕುಲಕ್ಕಿರುವ ನಿಜವಾದ ಸವಾಲು! ವಂದನೆಗಳು.

# ಬೇಂದ್ರೆ-ಕುವೆಂಪು ಎತ್ತರದ ಕಾವ್ಯ, ಆಳದ ಅನುಭಾವ



| ಲಿಖಿತ್ ಹೊನ್ನಾಪುರ

ಕನ್ನಡ ಸಾಹಿತ್ಯದ ಆಕಾಶದಲ್ಲಿ ಕೆಲವು ನಕ್ಷತ್ರಗಳು ಕೇವಲ ಬೆಳಗುವುದಿಲ್ಲ; ಅವುಗಳ ಬೆಳಕಿನಿಂದ ಇಡೀ ಯುಗವೊಂದು ತನ್ನ ದಾರಿಯನ್ನು ಕಂಡುಕೊಳ್ಳುತ್ತದೆ. ಅಂತಹ ಎರಡು ಮಹಾನ್ ಕಾವ್ಯಪ್ರತಿಭೆಗಳು ರಾಷ್ಟ್ರಕವಿ ಕುವೆಂಪು ಮತ್ತು ವರಕವಿ ದ. ರಾ. ಬೇಂದ್ರೆ. ಇವರಿಬ್ಬರ ಕಾವ್ಯಲೋಕ ಒಂದೇ ರೀತಿಯದ್ದಲ್ಲ. ಒಬ್ಬರ ಕಾವ್ಯದಲ್ಲಿ ವಿಶ್ವಮಾನವತೆಯ ಎತ್ತರ ಕಾಣಿಸಿದರೆ, ಮತ್ತೊಬ್ಬರ ಕಾವ್ಯದಲ್ಲಿ ಬದುಕಿನ ಒಳಾಳದ ಅನುಭಾವ ಮೊಳಗುತ್ತದೆ. ಆದರೂ ಇಬ್ಬರನ್ನೂ ಜೋಡಿಸುವ ಒಂದು ಅದೃಶ್ಯ ಸೇತುವೆ ಇದೆ ಅದು ಕನ್ನಡದ ಮೇಲಿನ ಅಪಾರ ಪ್ರೀತಿ ಮತ್ತು ಕಾವ್ಯದ ಮೇಲಿನ ಅಚಲ ನಿಷ್ಠೆ.

ನಾ ಹೇರಬಲ್ಲ ಎತ್ತರಕ್ಕೆ ನೀ ಹೇರಬಲ್ಲೆಯ!? ಎಂಬ ಕುವೆಂಪು ಅವರ ಮಾತನ್ನು ಕೇವಲ ಸವಾಲಿನ ಸಾಲಾಗಿ ನೋಡಿದರೆ ಅದರ ಅರ್ಥ ಸೀಮಿತವಾಗುತ್ತದೆ. ಅದರೊಳಗೆ ಕವಿಯ ಆತ್ಮವಿಶ್ವಾಸವಿದೆ; ಅದಕ್ಕಿಂತ ಮುಖ್ಯವಾಗಿ ಎದುರಿನ ಮಹಾಕವಿಯ ಪ್ರತಿಭೆಯ ಅರಿವೂ ಇದೆ. ಕಾವ್ಯದಲ್ಲಿ ತಾನು ತಲುಪಿದ ಎತ್ತರವನ್ನು ಮತ್ತೊಬ್ಬ ಕವಿ ತಲುಪಬಲ್ಲನೇ ಎಂಬ ಪ್ರಶ್ನೆಯಂತೆ ಅದು ಕೇಳಿಸಿದರೂ, ಅದರ ಆಂತರ್ಯದಲ್ಲಿ ಕಾವ್ಯದ ಮಹತ್ವವನ್ನು ಪರಸ್ಪರ ಗುರುತಿಸುವ ಮನಸ್ಸಿದೆ.

ಅದಕ್ಕೆ ಬೇಂದ್ರೆಯ ಪ್ರತಿಕ್ರಿಯೆ ಮತ್ತೊಂದು ದಿಕ್ಕಿನ ಕಾವ್ಯಲೋಕವನ್ನು ತೆರೆದಿಡುತ್ತೆ

ನಾ ಇಳಿಯಬಲ್ಲ ಹಾಳಕ್ಕೆ ನೀ ಇಳಿಯಬಲ್ಲೆಯಾ!!!?

ಇಲ್ಲಿ ?ಎತ್ತರ?ಕ್ಕೆ ಎದುರಾಗಿ ?ಆಳ? ನಿಲ್ಲುತ್ತದೆ. ಕುವೆಂಪು ಅವರು ಮನುಷ್ಯನ ಚಿಂತನೆ, ವಿಶ್ವಮಾನವತೆಯ ದೃಷ್ಟಿ, ಪ್ರಕೃತಿ ಮತ್ತು ಸಮಾಜದ ವಿಶಾಲತೆಯನ್ನು ಕಾವ್ಯದ ಎತ್ತರಕ್ಕೆ ಕೊಂಡೊಯ್ದರೆ, ಬೇಂದ್ರೆ ಅವರು ಸಾಮಾನ್ಯ ಬದುಕಿನ ಅನುಭವ, ನೋವು, ಪ್ರೀತಿ, ಪ್ರಕೃತಿ, ಜನಪದ ಮನಸ್ಸು ಮತ್ತು ಅಂತರಂಗದ ಸೂಕ್ಷ್ಮ ಕಂಪನಗಳನ್ನು ಕಾವ್ಯದ ಆಳಕ್ಕೆ ಇಳಿಸಿದರು. ಹೀಗಾಗಿ ಈ ಎರಡು ಸಾಲುಗಳು ಇಬ್ಬರು ಕವಿಗಳ ನಡುವಿನ ಸ್ಪರ್ಧೆಯ ಮಾತುಗಳಿಗಿಂತಲೂ ಕನ್ನಡ ಕಾವ್ಯದ ಎರಡು ಆಯಾಮಗಳ ಪ್ರತೀಕಗಳಾಗಿ ಕಾಣುತ್ತವೆ.

> ನಾ ಹೇರಬಲ್ಲ ಎತ್ತರಕ್ಕೆ ನೀ ಹೇರಬಲ್ಲೆಯ!?
> | ಕುವೆಂಪು
> ನಾ ಇಳಿಯಬಲ್ಲ ಹಾಳಕ್ಕೆ ನೀ ಇಳಿಯಬಲ್ಲೆಯಾ!!!?
> | ಬೇಂದ್ರೆ

ಕುವೆಂಪು ಅವರ ಕಾವ್ಯದಲ್ಲಿ ?ವಿಶ್ವಮಾನವ?ನ ಕನಸು ಪ್ರಮುಖವಾದದ್ದು. ಮನುಷ್ಯನನ್ನು ಜಾತಿ, ಮತ, ಭಾಷೆ, ಗಡಿ ಮತ್ತು ಸಂಕುಚಿತತೆಯಾಚೆಗೆ ನೋಡುವ ವಿಶಾಲ ದೃಷ್ಟಿ ಅವರ ಸಾಹಿತ್ಯದ ಜೀವಾಳ. ಪ್ರಕೃತಿಯ ಸೌಂದರ್ಯದಿಂದ ಹಿಡಿದು ಮಾನವ ಬದುಕಿನ ಸಂಕೀರ್ಣತೆಗಳವರೆಗೆ ಅವರು ಕಾವ್ಯವನ್ನು ವಿಶಾಲ ಚಿಂತನೆಯ ವೇದಿಕೆಯನ್ನಾಗಿ ಮಾಡಿದರು. ಅವರ ಬರಹದಲ್ಲಿ ಬೆಟ್ಟಗಳು ಕೇವಲ ಬೆಟ್ಟಗಳಲ್ಲ; ಅವು ಮನುಷ್ಯನ ಒಳಗಿನ ಎತ್ತರದ ಸಂಕೇತಗಳಾಗುತ್ತವೆ. ಪ್ರಕೃತಿ ಕೇವಲ ದೃಶ್ಯವಲ್ಲ; ಅದು ಜೀವನದ ಗುರುವಾಗುತ್ತದೆ.

ಇನ್ನೊಂದೆಡೆ ಬೇಂದ್ರೆಯ ಕಾವ್ಯದಲ್ಲಿ ಬದುಕು ತನ್ನ ಅತ್ಯಂತ ಸಹಜ ರೂಪದಲ್ಲಿ ಎದುರಾಗುತ್ತದೆ. ಅವರ ಭಾಷೆ ಜನಜೀವನದ ಮಣ್ಣಿನಿಂದ ಬಂದದ್ದು. ಸರಳವೆನಿಸುವ ಪದಗಳಲ್ಲೇ ಅಸಾಧಾರಣ ಅನುಭಾವವನ್ನು ತುಂಬುವ ಶಕ್ತಿ ಅವರಿಗೆ ಇತ್ತು. ಪ್ರೀತಿ, ವಿರಹ, ನೋವು, ಸಂತೋಷ, ಪ್ರಕೃತಿ, ಮನುಷ್ಯನ ಅಂತರಂಗ ಇವೆಲ್ಲವೂ ಅವರ ಕಾವ್ಯದಲ್ಲಿ ಹೊಸ ಅರ್ಥ ಪಡೆದುಕೊಳ್ಳುತ್ತವೆ. ಬೇಂದ್ರೆಯ ಕಾವ್ಯವನ್ನು ಓದಿದಾಗ ಕೆಲವೊಮ್ಮೆ ಅದು ಹಾಡಿನಂತೆ ಕೇಳಿಸುತ್ತದೆ; ಕೆಲವೊಮ್ಮೆ ಒಗಟಿನಂತೆ ಕಾಡುತ್ತದೆ; ಮತ್ತೊಮ್ಮೆ ನಮ್ಮದೇ ಬದುಕಿನ ಯಾವುದೋ ಮರೆತ ಭಾವವನ್ನು ಎಚ್ಚರಿಸುತ್ತದೆ.

ಆದ್ದರಿಂದಲೇ ಕುವೆಂಪು ಮತ್ತು ಬೇಂದ್ರೆಯವರನ್ನು ಹೋಲಿಸುವುದು ಸುಲಭವಲ್ಲ. ಇಬ್ಬರೂ ಕನ್ನಡದ ಮಹತ್ವದ ಕವಿಗಳು; ಆದರೆ ಅವರ ಕಾವ್ಯದ ದಿಕ್ಕುಗಳು ವಿಭಿನ್ನ. ಕುವೆಂಪು ಅವರ ಕಾವ್ಯ ಆಕಾಶದತ್ತ ಕೈಚಾಚುವಂತೆ ಕಂಡರೆ, ಬೇಂದ್ರೆಯ ಕಾವ್ಯ ಮಣ್ಣಿನೊಳಗೆ ಬೇರು ಹುಡುಕುವಂತೆ ಕಾಣುತ್ತದೆ. ಒಬ್ಬರು ಮನುಷ್ಯನನ್ನು ಎತ್ತರಕ್ಕೆ ಕರೆದೊಯ್ಯುತ್ತಾರೆ; ಮತ್ತೊಬ್ಬರು ಮನುಷ್ಯನೊಳಗಿನ ಆಳವನ್ನು ಪರಿಚಯಿಸುತ್ತಾರೆ.

ಆದರೆ ಎತ್ತರಕ್ಕೂ ಆಳಕ್ಕೂ ಒಂದೇ ಮೂಲವಿದೆ ಅದು ಅನುಭವ.

ಮಹಾಕಾವ್ಯ ಬರೆಯುವುದರಿಂದ ಮಾತ್ರ ಕವಿ ಮಹಾಕವಿಯಾಗುವುದಿಲ್ಲ; ಒಂದು ಸಾಮಾನ್ಯ ಅನುಭವವನ್ನು ಅಸಾಮಾನ್ಯ ಕಾವ್ಯಾನುಭವವಾಗಿ ಪರಿವರ್ತಿಸುವ ಶಕ್ತಿಯೇ ಕವಿಯ ನಿಜವಾದ ಸಾಮರ್ಥ್ಯ. ಕುವೆಂಪು ಅವರು ತಮ್ಮ ವಿಶಾಲ ದೃಷ್ಟಿಯಿಂದ ಕನ್ನಡ ಸಾಹಿತ್ಯಕ್ಕೆ ವಿಶ್ವದರ್ಶನ ನೀಡಿದರು. ಬೇಂದ್ರೆ ಅವರು ತಮ್ಮ ಅನುಭಾವದ ಆಳದಿಂದ ಕನ್ನಡದ ಪದಗಳಿಗೆ ಹೊಸ ಜೀವ ತುಂಬಿದರು.



ಇವರಿಬ್ಬರ ಕಾವ್ಯದಲ್ಲಿ ಕನ್ನಡ ಭಾಷೆ ತನ್ನ ಎರಡು ವಿಭಿನ್ನ ಮುಖಗಳನ್ನು ತೋರಿಸುತ್ತದೆ. ಕುವೆಂಪು ಅವರಲ್ಲಿ ಕನ್ನಡವು ವಿಶಾಲ ಮಾನವೀಯತೆಯ ಭಾಷೆಯಾಗುತ್ತದೆ. ಬೇಂದ್ರೆಯವರಲ್ಲಿ ಅದು ಮನೆಯಂಗಳದ ಮಾತು, ಹೊಲದ ಮಣ್ಣು, ಹಳ್ಳಿಯ ಗಾಳಿ, ತಾಯಿಯ ಮಮತೆ ಮತ್ತು ಮನುಷ್ಯನ ಅಂತರಂಗದ ನುಡಿಯಾಗುತ್ತದೆ.

ಒಬ್ಬರ ಕಾವ್ಯದಲ್ಲಿ ?ಎಷ್ಟು ದೂರ ನೋಡಬಲ್ಲೆ?? ಎಂಬ ಪ್ರಶ್ನೆ ಮೂಡಿದರೆ, ಮತ್ತೊಬ್ಬರ ಕಾವ್ಯದಲ್ಲಿ ?ಎಷ್ಟು ಆಳಕ್ಕೆ ಇಳಿಯಬಲ್ಲೆ?? ಎಂಬ ಪ್ರಶ್ನೆ ಮೂಡುತ್ತದೆ.

ಇದೇ ಈ ಎರಡು ಸಾಲುಗಳ ಸೌಂದರ್ಯ. ಕುವೆಂಪು ಬೇಂದ್ರೆಯ ಸಂಬಂಧವನ್ನು ಗೆಲುವು ಸೋಲಿನ ಅಳತೆಯಲ್ಲಿ ನೋಡುವುದು ಅವರ ಸಾಹಿತ್ಯದ ಮಹತ್ವವನ್ನು ಕುಗ್ಗಿಸುವಂತಾಗುತ್ತದೆ. ಮಹಾನ್ ಕವಿಗಳ ನಡುವೆ ಇರುವ ಆರೋಗ್ಯಕರ ಕಾವ್ಯಸಂವಾದವೇ ಇಲ್ಲಿ ಮುಖ್ಯ. ತಮ್ಮ ಪ್ರತಿಭೆಯ ಬಗ್ಗೆ ಇಬ್ಬರಿಗೂ ಅರಿವಿತ್ತು; ಎದುರಿನ ಕವಿಯ ಸಾಮರ್ಥ್ಯದ ಬಗ್ಗೆಯೂ ಗೌರವವಿತ್ತು. ಅದಕ್ಕಾಗಿಯೇ ಈ ಮಾತುಗಳಲ್ಲಿ ಅಹಂಕಾರಕ್ಕಿಂತ ಆತ್ಮವಿಶ್ವಾಸ, ಸ್ಪರ್ಧೆಗಿಂತ ಸೃಜನಶೀಲ ಉತ್ಸಾಹ, ವೈಯಕ್ತಿಕ ಪೈಪೋಟಿಗಿಂತ ಕನ್ನಡ ಕಾವ್ಯದ ಶ್ರೀಮಂತಿಕೆ ಕಾಣುತ್ತದೆ.

ಕನ್ನಡ ಸಾಹಿತ್ಯಕ್ಕೆ ಇವರ ಕೊಡುಗೆಗಳನ್ನು ಒಟ್ಟಾಗಿ ನೋಡಿದಾಗ ಒಂದು ಅದ್ಭುತ ಚಿತ್ರ ಮೂಡುತ್ತದೆ. ಕುವೆಂಪು ಕನ್ನಡದ ಕಲ್ಪನೆಯನ್ನು ವಿಸ್ತರಿಸಿದರು; ಬೇಂದ್ರೆ ಕನ್ನಡದ ಅನುಭವವನ್ನು ಗಾಢಗೊಳಿಸಿದರು. ಕುವೆಂಪು ಚಿಂತನೆಯ ಕ್ಷಿತಿಜವನ್ನು ವಿಸ್ತರಿಸಿದರೆ, ಬೇಂದ್ರೆ ಭಾವನೆಯ ಆಳವನ್ನು ಹೆಚ್ಚಿಸಿದರು. ಒಬ್ಬರು ಕನ್ನಡದ ಕಾವ್ಯಕ್ಕೆ ವಿಶಾಲವಾದ ಆಕಾಶ ನೀಡಿದರು; ಮತ್ತೊಬ್ಬರು ಅದಕ್ಕೆ ಆಳವಾದ ನೆಲ ನೀಡಿದರು.

**ಆಕಾಶವಿಲ್ಲದೆ ಎತ್ತರ ಸಾಧ್ಯವಿಲ್ಲ.**

**ನೆಲವಿಲ್ಲದೆ ಬೇರು ಸಾಧ್ಯವಿಲ್ಲ.**

ಆದ್ದರಿಂದ ಕುವೆಂಪು ಮತ್ತು ಬೇಂದ್ರೆ ಇಬ್ಬರೂ ಕನ್ನಡದ ಕಾವ್ಯಪರಂಪರೆಯಲ್ಲಿ ಪರಸ್ಪರ ಪೂರಕವಾದ ಮಹಾಶಕ್ತಿಗಳು. ಒಬ್ಬರನ್ನು ಎತ್ತಿಹಿಡಿಯಲು ಮತ್ತೊಬ್ಬರನ್ನು ಕಡಿಮೆ ಮಾಡಬೇಕಾಗಿಲ್ಲ. ಬದಲಾಗಿ, ಇಬ್ಬರನ್ನೂ ಓದಿದಾಗ ಕನ್ನಡ ಕಾವ್ಯದ ಸಂಪೂರ್ಣ ವೈಭವವನ್ನು ಅನುಭವಿಸಲು ಸಾಧ್ಯವಾಗುತ್ತದೆ.

ನಾ ಹೇರಬಲ್ಲ ಎತ್ತರಕ್ಕೆ ನೀ ಹೇರಬಲ್ಲೆಯ!? ಎಂಬ ಕುವೆಂಪು ಅವರ ಧ್ವನಿಗೂ, ?ನಾ ಹಿಳಿಯಬಲ್ಲ ಹಾಳಕ್ಕೆ ನೀ ಹಿಳಿಯಬಲ್ಲೆಯಾ!!!? ಎಂಬ ಬೇಂದ್ರೆಯ ಪ್ರತಿಧ್ವನಿಗೂ ನಡುವೆ ನಿಜವಾಗಿ ಕೇಳಿಸುವುದು ಕನ್ನಡ ಕಾವ್ಯದ ವಿಜಯಘೋಷ. ಒಬ್ಬರು ಎತ್ತರವನ್ನು ತೋರಿಸಿದರು; ಮತ್ತೊಬ್ಬರು ಆಳವನ್ನು ತೋರಿಸಿದರು.

ಆ ಎತ್ತರಕ್ಕೂ ಆಳಕ್ಕೂ ಮಧ್ಯೆ ಸೇತುವೆಯಾದದ್ದು ಕನ್ನಡ.

ಕನ್ನಡ ಸಾಹಿತ್ಯದ ಭವ್ಯ ಪರಂಪರೆಯನ್ನು ನೆನಪಿಸಿಕೊಳ್ಳುವಾಗ ಕುವೆಂಪು ಮತ್ತು ಬೇಂದ್ರೆ ಕೇವಲ ಇಬ್ಬರು ಮಹಾಕವಿಗಳಾಗಿ ಉಳಿಯುವುದಿಲ್ಲ. ಅವರು ಕನ್ನಡದ ಎರಡು ಕಣ್ಣುಗಳಂತೆ ಕಾಣುತ್ತಾರೆ ಒಂದು ದೂರದ ಕ್ಷಿತಿಜವನ್ನು ನೋಡುತ್ತದೆ; ಮತ್ತೊಂದು ಅಂತರಂಗದ ಆಳವನ್ನು ಕಾಣುತ್ತದೆ.

ಆ ಎರಡು ದೃಷ್ಟಿಗಳು ಒಂದಾಗುವಾಗ ಮಾತ್ರ ಕನ್ನಡ ಕಾವ್ಯದ ಪೂರ್ಣ ಸೌಂದರ್ಯ ಗೋಚರಿಸುತ್ತದೆ.

# ಏಕಾಂತದ ರಾಮಯ್ಯ



| ವೀಣಾ ಹೇಮಂತ್‌ಗೌಡ ಪಾಟೀಲ್



ಉಪೇಕ್ಷಿತ ವಚನಕಾರರು

ಬಸವಾದಿ ಶರಣರ ಕಾಲದ ಮತ್ತೋರ್ವ ಶರಣ ಏಕಾಂತದ ರಾಮಯ್ಯ. ಇಂದಿನ ಕಲಬುರ್ಗಿ ಜಿಲ್ಲೆಯ ತಾಲೂಕು ಸ್ಥಳ ಆಳಂದದಲ್ಲಿ ಜನಿಸಿದ ಅವರು ಪುರುಷೋತ್ತಮ ಭಟ್ಟ ಸೀತಾದೇವಿ ದಂಪತಿಗಳ ಪುತ್ರ. ಆಳಂದ ಕ್ಷೇತ್ರಕ್ಕೆ ಎಂಟನೇ ಶತಮಾನದಲ್ಲಿ ಆಳಂದತೀರ್ಥ ಎಂದು ಕರೆಯುತ್ತಿದ್ದರು. ಅಲ್ಲಿಯ ಪ್ರಸಿದ್ಧ ಸೋಮನಾಥ ದೇವರ ನೆಚ್ಚಿನ ಭಕ್ತರಾಗಿದ್ದ ದಂಪತಿಗಳು ಆತನ ವರದಿಂದಲೇ ಹುಟ್ಟಿದ ತಮ್ಮ ಪುತ್ರನಿಗೆ ರಾಮ ಎಂದು ಹೆಸರಿಟ್ಟರು.

ರಾಮ ಎಂದು ಹೆಸರಿಟ್ಟ ಮಗು ಆತ್ಮ ರಾಮ ವಿರಾಮನಾಗಿದ್ದನು ...ಅಂದರೆ ನುಡಿದು ತಪ್ಪದ ನಡತೆಯನ್ನು ಹೊಂದಿದಾತನಾಗಿದ್ದನು. ನಿರ್ಲಿಪ್ತತೆ ಆತನನ್ನು ಆವರಿಸಿತ್ತು ಲೌಕಿಕ ವಿಷಯಗಳಲ್ಲಿ ನಿರಾಸಕ್ತಿಯನ್ನು ಹೊಂದಿದ್ದ ಆತ ನಿಸ್ಪ್ರಹ, ನಿರಾಡಂಬರ ಜೀವಿಯಾಗಿದ್ದ. ಸದಾ ಏಕಾಂತದಲ್ಲಿದ್ದು ಶಿವಯೋಗ ಸಾಧನೆ ಮಾಡುವುದರಲ್ಲಿ ತಲ್ಲೀನನಾಗುತ್ತಿದ್ದ ಆತನಿಗೆ ಏಕಾಂತದ ರಾಮಯ್ಯ ಎಂದು ಜನರು ಕರೆಯಲು ಆರಂಭಿಸಿದರು.

ಯೋಗಸ್ತನಾಗಿ ಸದಾ ಇರುತ್ತಿದ್ದ ಏಕಾಂತರಾಮಯ್ಯನಿಗೆ ಒಂದೊಮ್ಮೆ ಶಿವಶರಣರ ಸ್ಥಾನಗಳನ್ನು ನೋಡಬೇಕೆಂಬ ಅಭಿಲಾಶೆ ಉಂಟಾಯಿತು. ಅಂತೆಯೇ ಮೊದಲು ಕಲ್ಯಾಣಕ್ಕೆ ಹೋಗಿ ನಂತರ ಅಲ್ಲಿಗೆ ಹತ್ತಿರದಲ್ಲಿರುವ ಶಿವಪುರದಲ್ಲಿ ಕೆಲವು ದಿನ ಶಿವಾನುಭವ ಗೋಷ್ಠಿಯಲ್ಲಿ ಸಮಯ ಕಳೆದನು.

ಮುಂದೆ ಇಂದಿನ ಲಕ್ಷ್ಮೇಶ್ವರ (ಅಂದಿನ ಪುಲಿಗೆರೆ) ಪಟ್ಟಣಕ್ಕೆ ಬಂದರು. ಅಲ್ಲಿ ಆದಯ್ಯನಿಂದ ಸ್ಥಾಪಿತವಾಗಿದ್ದ ಸೋಮನಾಥ ಲಿಂಗಕ್ಕೆ ನಮಸ್ಕರಿಸಿ ಮುಂದೆ ಬನವಾಸಿ ಪ್ರಾಂತ್ಯಕ್ಕೆ ಹೋದರು ಅಲ್ಲಿಂದ ಬಳ್ಳಿಗಾವಿ, ರೇವಣಸಿದ್ದ ಗಿರಿ, ಮುತ್ತಿಗಿ, ಹಿರೇಜಂಬೂರು ಮೊದಲಾದ ಪುಣ್ಯ ಸ್ಥಳಗಳನ್ನು ಸಂದರ್ಶಿಸಿ ನಂತರ ಬನವಾಸಿಯತ್ತ ಹೊರಟರು.

ಬನವಾಸಿಗೆ 24 ಕಿಲೋಮೀಟರ್ ದೂರದಲ್ಲಿ ಇರುವ ಅಬ್ಬಲೂರಿಗೆ ಬಂದ ಏಕಾಂತದ ರಾಮಯ್ಯನವರಿಗೆ ಇಡೀ ಊರನ್ನು ಸುತ್ತಿದರೂ ಕೂಡ ಒಂದೇ ಒಂದು ಶಿವಾಲಯವು ದೊರೆಯಲಿಲ್ಲ. ಜೈನ ಕೇಂದ್ರವಾಗಿದ್ದ ಕಾರಣ ಅಲ್ಲಿ ಜೈನಮಂದಿರ ಹಾಗೂ ಬಸದಿಗಳು ಮಾತ್ರ ಇದ್ದವು ಅಂತಿಮವಾಗಿ ಊರೆಲ್ಲ ಅಲೆದ ಮೇಲೆ ಬ್ರಹ್ಮೇಶ್ವರ ದೇವಾಲಯ ಎಂಬ ಪಾಳು ದೇಗುಲ ಆತನಿಗೆ ಗೋಚರಿಸಿತು. ತವನಿಧಿ ದೊರೆತಂತೆ ಭಾವಿಸಿದ ಏಕಾಂತದ ರಾಮಯ್ಯ ಅಲ್ಲಿದ್ದ ಲಿಂಗವನ್ನು ನೋಡಿ ಸಂತಸ ಪಟ್ಟ.

ಆದರೆ ಮುಂದಿನ ಕ್ಷಣದಲ್ಲಿ ಪೂಜೆ ಇಲ್ಲದೆ ಮಜ್ಜನಕ್ಕೆ ಎರೆವರಿಲ್ಲದೆ ಅನಾಥವಾಗಿರುವ ಮಗುವಿನಂತೆ ಶಿವಲಿಂಗ ಗೋಚರಿಸಿತು ಆತನಿಗೆ ಅಂತೆಯೇ ಆ ಶಿವಲಿಂಗವನ್ನು ಅಪ್ಪಿಕೊಂಡು ಮುದ್ದಾಡಿ ಮನದಣಿಯುವಂತೆ ಪೂಜೆಯನ್ನು ಮಾಡಿದ ಆತ ಅಲ್ಲಿಯೇ ಒಂದೆಡೆ ಮೂಲೆಯಲ್ಲಿ ಮಲಗಿದ.

ದಣಿದ ದೇಹಕ್ಕೆ ನಿದ್ರೆ ಆವರಿಸಿತು.

ಮರುದಿನ ಮುಂಜಾನೆ ಎಂದಿನಂತೆ ಸೂರ್ಯನ ಚುರುಗುಡುವ ಬಿಸಿಲಿಗೆ ಎದ್ದು ಕುಳಿತ ಆತ ಕೈ ಕಾಲು ಮುಖ ತೊಳೆದು ಶಿವ ಪೂಜೆಗೆ ಹೂವು ತರಲು ಹೊರಟ. ಹಾಗೆ ರಂಗ ಮಂಟಪದ ಮಧ್ಯಕ್ಕೆ ಬರಲು ಅಲ್ಲಿ ಲಿಂಗದ ಬಳಿ ಕಾಲು ಚಾಚಿ, ಓರ್ವ ವ್ಯಕ್ತಿ ಮಲಗಿರುವುದನ್ನು ನೋಡಿದ.

ಅಯ್ಯೋ ನನ್ನ ಲಿಂಗವೇ, ನಿನಗೆ ಇಂತಹ ಗತಿಯೇ ಎಂದು ಬೇಸರ ವ್ಯಕ್ತಪಡಿಸಿದ ಆತ ಅಲ್ಲಿ ಮಲಗಿರುವ ವ್ಯಕ್ತಿಯನ್ನು ಎಬ್ಬಿಸಿ ದೇವರ ಕಡೆಗೆ ಕಾಲು ಮಾಡಿ ಮಲಗುವುದು ಸರಿಯಲ್ಲ ಎಂದು ತಿಳಿ ಹೇಳಲು ಪ್ರಯತ್ನಿಸಿದ. ಇದನ್ನು ಕೇಳಿದ ಆ ವ್ಯಕ್ತಿ ಇಲ್ಲಿ ದೇವರಿದ್ದಾನೆ? ಯಾವ ದೇವರು ಆತ ಎಂದು ತುಸು ಅಪಹಾಸ್ಯದಿಂದ ಕೇಳಿದ.

ತ್ರಿಪುರಗಳನ್ನು ಸುಟ್ಟ ಕಾಲನನ್ನುರುಹಿದ, ಕಾಮನನ್ನು ದಹಿಸಿದ, ಸೋಮನನ್ನು ಸೂಡಿದ ವಿಷಯವನ್ನು ತೆಗೆದುಕೊಂಡು ಬಾ ಅಣ್ಣ ಮಯೂರ ಕಾಳಿದಾಸ ನಂಬಿಯಣ್ಣ ಓಹಿಲ, ಕೋಳೂರು ಕೊಡಗೂಸಿಗೆ ಅನುಗ್ರಹಿಸಿದ ದೇವರು ಯಾರೆಂದು ಕೇಳುತ್ತೀಯಾ ಎಂದು ತುಸು ತೀಕ್ಷ್ಣವಾಗಿ ಹೇಳಿದ.

ಆಗ ಹಾಗೆ ಮಲಗಿದ ಜೈನ ವ್ಯಕ್ತಿ ಪುರಾಣದ ಮಾತು ಬೇಡ..ನಿನ್ನ ದೇವರು ಇರುವುದೇ ಆದರೆ ನೀನು ಆತನನ್ನು ತೋರಿಸು... ಇಲ್ಲವೇ ನಿನ್ನ ತಲೆಯನ್ನು ಅರಿದು ಪಡೆ ಎಂದು ಹೇಳಿದ.

ಇದರಿಂದ ಕುಪಿತನಾದ ಏಕಾಂಗದ ವೀರಯ್ಯ ಅರಿದು ಪಡೆದರೆ ನೀನು ಏನು ಮಾಡುವೆ ಎಂದು ಕೇಳಿದ. ಅದಕ್ಕೆ ಉತ್ತರವಾಗಿ ದಿನ ಭಕ್ತ ನಾನು ಕೂಡ ನಿನ್ನ ದೇವರನ್ನು ಪೂಜಿಸಿ ಆತನ ಭಕ್ತನಾಗುವೆ ಎಂದು ಹೇಳಿದ.

ಆಯ್ತು? ಹಾಗಾದರೆ ನನ್ನ ಶಿರಸನ್ನು ಕತ್ತರಿಸಿ ಬೇರೆ ಇಟ್ಟು ಮತ್ತೆ ಮರಳಿ ಪಡೆಯುತ್ತೇನೆ ಎಂದು ಏಕಾಂತದ ವೀರ ಪ್ರತಿಜ್ಞೆ ಮಾಡಿದ.

ಈ ಸುದ್ದಿ ಇಡೀ ಊರು ಕೇರಿಗಳಿಗೆಲ್ಲ ಹಬ್ಬಿ ಸಾವಿರಾರು ಜನರು ಇದನ್ನು ನೋಡಲು ಬಂದರು. ಅದರಲ್ಲಿ ಅಗ್ಗಳಿಯ ದೇವರ ಸಹ ಹಾಗೂ ಅಗ್ಣಿಯ ಹೊನ್ನಿ ತಂದೆಯ ಎಂಬ ಶಿವಶರಣರು ಇದ್ದರು.

ನೆರೆದ ಜನರ ಸಮ್ಮುಖದಲ್ಲಿ ತನ್ನ ಶಿರವನ್ನು ಹರಿದು ಬೇರಿಟ್ಟ ಏಕಾಂತದ ವೀರಯ್ಯ. ಅದನ್ನು ಚಿನ್ನದ ಹರಿವಾಣದಲ್ಲಿ ಇರಿಸಿ ಏಳು ದಿನಗಳವರೆಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಮೆರೆಸಿ ಮತ್ತೆ ತಂದು ಮುಂಡದ ಮೇಲೆ ರುಂಡವನ್ನು ಇರಿಸಿದರು.... ಹೀಗೆ ರುಂಡದ ಮೇಲೆ ಮುಂಡವನ್ನು ಇರಿಸುವುದು ಒಂದು ಬಗೆಯಲ್ಲಿ ಪೀಠಿಕೆಯ ಮೇಲೆ ಲಿಂಗವನ್ನು ಇಳಿಸಿದಂತೆ ತೋರುತ್ತಿತ್ತು ಎಂದು ನೆರೆದ ಜನರು ಅಚ್ಚರಿಗೊಳುತ್ತಿದ್ದರು.

ತಂದೆಗೆ ಕೊನೆಯ ದಿನ ಏಕಾಂತದ ರಾಮಯ್ಯನ ಕತ್ತರಿಸಿದ ತಲೆಯನ್ನು ತಂದು ಮುಂಡದ ಮೇಲೆ ಇಟ್ಟಾಗ ಅದು ಮತ್ತೆ ಜೀವ ಪಡೆದು ಓಡಾಡಲಾರಂಭಿಸಿತು.. ದೇವರು ಏಕಾಂತವೀರ ಎಂದು ಕರೆದು ಏಕಾಂತ ರಾಮಯ್ಯನನ್ನು ಗೌರವಿಸಿದ್ದಾರೆ. ಹಬ್ಬಲೂರಿನಲ್ಲಿರುವ ಈ ಶಾಸನದಲ್ಲಿ ಈ ಪವಾಡದ ವರ್ಣನೆ ಇದೆ ಎಲ್ಲವನ್ನು ಸಸ್ಯದ ಹೊರತೆಗೆ ವರೆಗೆ ಹಚ್ಚಿ ನೋಡಲು ಸಾಧ್ಯವಿಲ್ಲ ಶ್ರದ್ಧೆಯಿಂದ ಸತ್ಯವನ್ನು ನೋಡಲೇಬೇಕು. ಏಕಾಂತದ ರಾಮಯ್ಯ ಮಹಾ ಮಾನವನಾಗಿದ್ದು ಹಬ್ಬಲೂರಿನಲ್ಲಿ ವೀರ ಸೋಮೇಶ್ವರ ಲಿಂಗದ ಪ್ರತಿಷ್ಠಾಪನೆಗೆ ಕಾರಣನಾದ. ಮುಂದೆ ಬಿಜ್ಜಳ ಮಹಾರಾಜನು ಮಂಗಳ ವೇಳೆಗೆ ಆತನನ್ನು ಕರೆಸಿಕೊಂಡು ಗೌರವಿಸಿ ಆತ ಸ್ಥಾಪಿಸಿದ ವೀರ ಸೋಮನಾಥ ದೇವರ ಪ್ರಸಾದ ಜೀರ್ಣೋದ್ಧಾರ ಲಿಂಗಭೋಗ ಹಾಗೂ ನೈವೇದ್ಯಗಳಿಗಾಗಿ ಭರವಸೆ 12, ಸಾವಿರ ಪ್ರಾಂತ್ಯದಲ್ಲಿ ಅಬ್ಬಲೂರಿನ ಉತ್ತರಕ್ಕೆ ಈಗಿನ ಭೋಗಾವಿ ಎಂಬ ಊರಿನಲ್ಲಿ ಸ್ಥಳ ದಾನ ಮಾಡಿದರು.

ಶಿವಯೋಗ ಸಿದ್ಧಿಯನ್ನು ಪಡೆದಿದ್ದ ಏಕಾಂತ ರಾಮಯ್ಯನ ಅಂಗ ಚೈತನ್ಯ ಆತನಿಗೆ ಅಧೀನವಾಗಿತ್ತು. ಆಳಂದೆಯಲ್ಲಿಯೇ ಜನಿಸಿ ನೆಟ್ಟ ವೀರಗಂಬವನ್ನು ಏರಿದ ಏಕಾಂತದ ರಾಮಯ್ಯ

ವಚನ ಸಾಹಿತ್ಯದ ಇತಿಹಾಸದಲ್ಲಿ ಅಮರನಾಗುತ್ತಾನೆ . ಇಲ್ಲಿಯವರೆಗೂ ಏಕಾಂತ ರಾಮನ 10 ವಚನಗಳು ದೊರೆತಿದ್ದು ಅದರಲ್ಲಿ ಸದ್ಗುರು ಸ್ಥಲದ ಸಂಬಂಧ, ಲಿಂಗ ಭೇದಯುಕ್ತ,ತ್ರಿವಿಧ ಭಕ್ತಿ ತ್ರಿಕರಣ ಶುದ್ಧತೆಯನ್ನು ಸಂಪಾದಿಸಿ ನಿತ್ಯಮುಕ್ತರಾಗುವ ಬಗೆಯನ್ನು ಆತ ತಿಳಿಸಿದ್ದಾನೆ. ಏಕಾಂತದ ರಾಮಯ್ಯ ಲೋಕಾಂತವಾಗಿ ಮಾತನಾಡಿದ್ದು ಬಹಳ ಸ್ವಲ್ಪ. ಮಾತಿಗಿಂತ ಕೃತಿ ಮೇಲು ಎಂಬಂತೆ ನಡೆದುಕೊಳ್ಳುತ್ತಿದ್ದ ಆತ ಅಚ್ಚ ಶರಣರಿಗೆಲ್ಲ ಮೆಚ್ಚಾಗಿದ್ದ.

ಅಂತಹ ಮಹಾಶರಣ ಏಕಾಂತ ರಾಮಯ್ಯನಿಗೆ ಶರಣು ಶರಣಾರ್ಥಿ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,